ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೆಪ್ಟೆಂಬರ್ 26 ಗುರುವಾರ 2024

ಸಂಪುಟ: 45 | ಸಂಚಿಕೆ: 161 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಮುಡಾ ನಿವೇಶನ ಹಂಚಿಕೆ ಅಕ್ರಮ ಆರೋಪ

ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಎಫ್ಐಆರ್ ದಾಖಲಿಸಿ

ಡಿ.24ರೊಳಗೆ ತನಿಖಾ ವರದಿ ಸಲ್ಲಿಸುವಂತೆ ಮೈಸೂರು ಲೋಕಾಯುಕ್ತ ಎಸ್ಪಿಗೆ ಬೆಂಗಳೂರು ಜನಪ್ರತಿನಿಧಿಗಳ ವಿಶೇಷ ಕೋರ್ಟ್ ಮಹತ್ವದ ಆದೇಶ

ಬೆಂಗಳೂರು, ಸೆ25(ಕೆಎಂಶಿ)– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ನಿವೇಶನ ಹಂಚಿಕೆ ಅಕ್ರಮ ಆರೋಪ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಎಫ್ಐಆರ್ ದಾಖಲಿಸಿ ಲೋಕಾಯುಕ್ತ ಪೊಲೀಸರು ತನಿಖೆ ನಡೆಸುವಂತೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಇಂದಿಲ್ಲಿ ಮಹತ್ವದ ಆದೇಶ ನೀಡಿದೆ.

ಮುಡಾ ಹಗರಣವನ್ನು ಮೈಸೂರು ಲೋಕಾಯುಕ್ತ ಪೊಲೀಸ್ ವರಿಷ್ಠಾಧಿಕಾರಿ ತನಿಖೆ ನಡೆಸಿ, ಡಿಸೆಂಬರ್ 24 ರೊಳಗೆ ನ್ಯಾಯಾಲಯಕ್ಕೆ ವರದಿ ಸಲ್ಲಿಸುವಂತೆ ಆದೇಶಿಸಿದೆ. ಹಗರಣಕ್ಕೆ ಸಂಬಂಧಿಸಿದಂತೆ ದೂರುದಾರ ಸ್ನೇಹಮಯಿ ಕೃಷ್ಣ ದಾಖಲಿಸಿದ್ದ ಖಾಸಗಿ ಕ್ರಿಮಿನಲ್ ದೂರಿನ ವಿಚಾರಣೆ ನಡೆಸಿ ಕಾಯ್ದಿರಿಸಿದ್ದ ತೀರ್ಪನ್ನು, ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ನ್ಯಾಯಾಲಯದ ನ್ಯಾಯಾಧೀಶ ಸಂತೋಷ ಗಜಾನನ


ಮುಖ್ಯಮಂತ್ರಿ ಸಿದ್ದರಾಮಯ್ಯ

ಭಟ್ ಇಂದು ಪ್ರಕಟಿಸಿದರು. ರಾಜ್ಯಪಾಲರು ನೀಡಿದ ಪ್ರಾಸಿಕ್ಯೂಷನ್ ಅನುಮತಿಯನ್ನು ಹೈಕೋರ್ಟ್‌ನ ಏಕಸದಸ್ಯ ಪೀಠ ನಿನ್ನೆಯಷ್ಟೇ ಎತ್ತಿಹಿಡಿದ ಬೆನ್ನಲ್ಲೇ ಇಂದು ಜನಪ್ರತಿನಿಧಿಗಳ ನ್ಯಾಯಾಲಯ ತನ್ನ ತೀರ್ಪು ಪ್ರಕಟಿಸಿತು. ದೂರುದಾರ ಸ್ನೇಹಮಯಿ ಕೃಷ್ಣ ತಮ್ಮ ವಕೀಲರಾದ ಲಕ್ಷ್ಮೀ ಐಯ್ಯಂಗಾರ್ ಮುಖಾಂತರ ಹೈಕೋರ್ಟ್ ತೀರ್ಪನ್ನು ನ್ಯಾಯಾಧೀಶರಿಗೆ ತಲುಪಿಸಿದರು. ತದನಂತರ ನ್ಯಾಯಾಧೀಶರು ಕೋರ್ಟ್ ಹಾಲ್‌ನಲ್ಲೇ ತೀರ್ಪಿನ ಉಲ್ಲೇಖನ ನೀಡಿ, ಕ್ರಿಮಿನಲ್ ಪ್ರಕರಣದ ಆರೋಪಿ ವಿರುದ್ಧ 153(3)ರಡಿ ಎಫ್ಐಆರ್ ದಾಖಲಿಸಿ ತನಿಖೆ ನಡೆಸುವಂತೆ ಪೊಲೀಸರಿಗೆ ಆದೇಶಿಸಿದರು. ಮುಖ್ಯಮಂತ್ರಿ ಅವರ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿರುವುದನ್ನು ಪ್ರಸ್ತಾಪಿಸಿ, ಪ್ರಕರಣದ ಬಗ್ಗೆ ತನಿಖೆ ನಡೆಸುವಂತೆಯೂ ಹೇಳಿದೆ. ತನಿಖೆಗೆ ಮುಖ್ಯಮಂತ್ರಿ ಹಿಂಜರಿಕೆ ಏಕೆ ಎಂಬುದಾಗಿ ಹೈಕೋರ್ಟ್ ಉಲ್ಲೇಖಿಸಿರುವುದನ್ನು ನ್ಯಾಯಾಲಯದ ಗಮನಕ್ಕೆ ತಂದರು. ಸಿದ್ದರಾಮಯ್ಯ ಅವರು, ಶಾಸಕರಾಗಿ, ಉಪಮುಖ್ಯಮಂತ್ರಿಯಾಗಿ, ಪ್ರತಿಪಕ್ಷದ ನಾಯಕರಾಗಿ ಮತ್ತೆ ■6ನೇ ಪುಟಕ್ಕೆ

ತನಿಖೆ ಎದುರಿಸಲು ಸಿದ್ಧ: ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿಕ್ರಿಯೆ

ಬೆಂಗಳೂರು, ಸೆ. 25(ಕೆಎಂಶಿ)–ಮುಡಾ ತನಿಖೆ ಎದುರಿಸಲು ಸಿದ್ಧ, ಕಾನೂನು ರೀತಿ ಹೋರಾಟ ಮಾಡಲು ತಯಾರಾಗಿದ್ದೇವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ತಿಳಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 17ಎ ಪ್ರಕಾರ ತನಿಖೆ ಮಾಡಲು ನ್ಯಾಯಾಲಯ ಅನುಮತಿ ನೀಡಿದೆ. ಆದೇಶದ ಪ್ರತಿ ದೊರೆತಿಲ್ಲ. ತೀರ್ಪನ್ನು ಪೂರ್ಣವಾಗಿ ಓದಿದ ನಂತರ ನಾಳೆ ಬೆಳಗ್ಗೆ ಪ್ರತಿಕ್ರಿಯೆ ನೀಡುತ್ತೇನೆ ಎಂದರು.

ಮೈಸೂರು ಲೋಕಾಯುಕ್ತಕ್ಕೆ ಪ್ರಕರಣವನ್ನು ಶಿಫಾರಸ್ಸು ಮಾಡಲಾಗಿದೆ. ಮೈಸೂರಿನಲ್ಲಿಯೇ ದೂರು ನೀಡಲಾಗಿದ್ದು, ದೂರುದಾರರು ಮೈಸೂರಿನವರು. ಮುಡಾ ಕೂಡ ಅಲ್ಲಿಯೇ ಇರುವುದರಿಂದ ಮೈಸೂರಿಗೆ ಶಿಫಾರಸ್ಸು ಮಾಡಿರಬಹುದೆಂದು ಭಾವಿಸಿದ್ದೇನೆ. ನ್ಯಾಯಾಲಯದ ಇಂದಿನ ಪೂರ್ಣ ಆದೇಶ ಲಭ್ಯವಾದ ಮೇಲೆ ವಕೀಲರೊಂದಿಗೆ ಚರ್ಚಿಸಿ ನಿರ್ಧರಿಸಲಾಗುವುದು. ಮುಡಾ ಪ್ರಕರಣದ ತನಿಖೆಗೆ ಸರ್ಕಾರ ರಚಿಸಿದ್ದ ನ್ಯಾಯಮೂರ್ತಿ ಪಿ.ಎನ್.ದೇಸಾಯಿ ಆಯೋಗದ ತನಿಖೆ ಮುಂದುವರೆಯಲಿದೆ ಎಂದರು.

ಸಿದ್ದರಾಮಯ್ಯ ರಾಜೀನಾಮೆ ನೀಡಲೇಬೇಕಾಗುತ್ತದೆ

ನಿವೃತ್ತ ಲೋಕಾಯುಕ್ತ ನ್ಯಾಯಮೂರ್ತಿ ಎನ್.ಸಂತೋಷ್ ಹೆಗ್ಡೆ ಅಭಿಮತ

ಮೈಸೂರು, ಸೆ.25(ಆರ್‌ಕೆ)–ಮುಡಾ ನಿವೇಶನ ಹಂಚಿಕೆ ಹಗರಣದಲ್ಲಿ ಲೋಕಾಯುಕ್ತ ಪೊಲೀಸರ ತನಿಖೆಗೆ ಜನಪ್ರತಿನಿಧಿಗಳ ನ್ಯಾಯಾಲಯ ಆದೇಶಿಸಿರುವುದರಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಲೇಬೇಕಾಗುತ್ತದೆ ಎಂದು ನಿವೃತ್ತ ಲೋಕಾಯುಕ್ತ ನ್ಯಾಯಮೂರ್ತಿ ಎನ್. ಸಂತೋಷ್ ಹೆಗ್ಡೆ ಅಭಿಪ್ರಾಯಪಟ್ಟಿದ್ದಾರೆ.



ರಾಜ್ಯಪಾಲರು ಪ್ರಾಸಿಕ್ಯೂಷನ್‌ಗೆ ನೀಡಿದ ಅನುಮತಿ ಪ್ರಶ್ನಿಸಿ ಸಿದ್ದರಾಮಯ್ಯ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ರಾಜ್ಯ ಉಚ್ಚ ನ್ಯಾಯಾಲಯದ ಏಕ ಸದಸ್ಯ ಪೀಠವು ರಾಜ್ಯಪಾಲರ ನಿರ್ಣಯವನ್ನು ಎತ್ತಿ ಹಿಡಿದ ಬೆನ್ನಲ್ಲೇ ಇಂದು ಜನಪ್ರತಿನಿಧಿಗಳ ನ್ಯಾಯಾಲಯವೂ ತನಿಖೆಗೆ ಆದೇಶಿಸಿರುವುದರಿಂದ ಲೋಕಾಯುಕ್ತ ಮೈಸೂರು ಎಸ್ಪಿ, ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಎಫ್ಐಆರ್ ದಾಖಲಿಸಿ ತನಿಖೆ ನಡೆಸಬೇಕು ಎಂದು ಅವರು ತಿಳಿಸಿದರು. ದೂರವಾಣಿ ಮೂಲಕ ಸಂಪರ್ಕಿಸಿದ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯೆ ನೀಡಿದ ಸಂತೋಷ್ ಹೆಗ್ಡೆ ಅವರು, ಎಫ್ಐಆರ್ ದಾಖಲಾಗುತ್ತಿದ್ದಂತೆಯೇ ಯಾವುದೇ ಸಂವಿಧಾನಿಕ ಉನ್ನತ ಹುದ್ದೆಯಲ್ಲಿರುವ ವ್ಯಕ್ತಿ ಆ ಸ್ಥಾನದಲ್ಲಿ ಮುಂದುವರಿಯಬಾರದು. ಈ ಪ್ರಕರಣದಲ್ಲಿ ಸಿದ್ದರಾಮಯ್ಯ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಲೇಬೇಕಾಗುತ್ತದೆ ಎಂದು ಅವರು ತಿಳಿಸಿದರು. ಈ ಹಿಂದೆ ಜವಾಹರಲಾಲ್ ನೆಹರು ಸಂಪುಟದಲ್ಲಿ ರೈಲ್ವೇ ಸಚಿವರಾಗಿದ್ದ ಲಾಲ್‌ಬಹದ್ದೂರ್ ಶಾಸ್ತ್ರಿ ಅವರು ತಮಿಳುನಾಡಿನಲ್ಲಿ ನಡೆದ ರೈಲು ಅಪಘಾತದಲ್ಲಿ ಹಲವು ಪ್ರಯಾಣಿಕರು ಸಾವನ್ನಪ್ಪಿದ ■6ನೇ ಪುಟಕ್ಕೆ

ರಾಜಕೀಯ ಜನ್ಮ ಕೊಟ್ಟ ತವರು ಜಿಲ್ಲೆ ಮೈಸೂರಿನ ಪ್ರಕರಣವೇ ಸಿದ್ದರಾಮಯ್ಯಗೆ ಸಂಕಷ್ಟ ತಂದೊಡ್ಡಿದೆ!

ಮೈಸೂರು, ಸೆ.25(ಬಿಎಲ್‌ಯು)– ಮುಖ್ಯಮಂತ್ರಿ ಸಿದ್ದರಾಮಯ್ಯ ಹಲವು ಹಗರಣಗಳ ಆರೋಪದಿಂದ ಬಚಾವಾಗಿದ್ದರು. ಆದರೆ ಸಿದ್ದರಾಮಯ್ಯಗೆ ರಾಜಕೀಯ ಜನ್ಮ ನೀಡಿದ ತವರು ಜಿಲ್ಲೆ ಮೈಸೂರು ಹಗರಣವೇ ಅವರಿಗೆ ಸಂಕಷ್ಟ ತಂದೊಡ್ಡಿದೆ.

ಸಿದ್ದರಾಮಯ್ಯ ಅವರ 40 ವರ್ಷದ ರಾಜಕೀಯ ಜೀವನದಲ್ಲಿ ಹಲವು ಆರೋಪಗಳನ್ನು ಸಮರ್ಥವಾಗಿ ಎದುರಿಸಿದರು. ಅರ್ಕಾವತಿ ರೀಡೂ ಹಗರಣ, ಹ್ಯೂಬ್ಲೋಟ್ ವಾಚ್ ಹಗರಣ, ವಾಲ್ಮೀಕಿ ನಿಗಮದ ಹಗರಣ ಆರೋಪಗಳಿತ್ತು. ಯಾವ ಹಗರಣಗಳು ಮೈಸೂರಿಗೆ ಸಂಬಂಧಿಸಿದ್ದಾಗಿರಲಿಲ್ಲ. ತವರು ಮೈಸೂರಿನ ಮುಡಾ ಹಗರಣ ಅಂತಿಮವಾಗಿ ಸಿದ್ದರಾಮಯ್ಯ ಕೊರಳಿಗೆ ಸುತ್ತಿಕೊಂಡಿದೆ.

ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧೆ ಮಾಡುವುದಿಲ್ಲ. ನಾನು ಚುನಾವಣಾ ರಾಜಕಾರಣದಿಂದ ನಿವೃತ್ತಿ ಹೊಂದುತ್ತೇನೆ ಎಂದು ಸಿದ್ದರಾಮಯ್ಯ ಹೇಳಿದ್ದರು. ಆದರೆ ಮುಖ್ಯಮಂತ್ರಿ ಆಗಿದ್ದ ಅವಧಿಯಲ್ಲೇ ಮೈಸೂರು ಹಗರಣ ಸಿದ್ದರಾಮಯ್ಯರಿಗೆ ■6ನೇ ಪುಟಕ್ಕೆ

ಎಸ್ಎಸ್ಎಲ್‌ಸಿ ಫೇಲಾದ್ರೂ ಕ್ಲಾಸ್ ಅಟೆಂಡ್ ಮಾಡಬಹುದು

ರಾಜ್ಯ ಸರ್ಕಾರ ಆದೇಶ

ಬೆಂಗಳೂರು, ಸೆ.25– ರಾಜ್ಯದಲ್ಲಿ ರಾಜ್ಯ ಪಠ್ಯಕ್ರಮದ ಶಾಲೆಗಳಲ್ಲಿ 10ನೇ ತರಗತಿಯಲ್ಲಿ ಅನುತ್ತೀರ್ಣ ಆಗುವ ವಿದ್ಯಾರ್ಥಿಗಳಿಗೆ ಸರ್ಕಾರಿ ಶಾಲೆಗಳಲ್ಲಿ 10ನೇ ತರಗತಿಗೆ ಮರಳಿ ಹಾಜರಾಗುವ ಅವಕಾಶ ನೀಡಲು ರಾಜ್ಯ ಸರ್ಕಾರ ಆದೇಶಿಸಿದ್ದು, ಈ ಕುರಿತಾದ ಪ್ರಗತಿ ಪರಿಶೀಲನೆಗೆ ಸೆ.30 ರಂದು ಸಭೆ ಕರೆಯಲಾಗಿದೆ.

ಸರ್ಕಾರದ ಆದೇಶದಂತೆ ಕ್ರಮ ವಹಿಸಲು ಶಿಕ್ಷಣ ಇಲಾಖೆಯ ಜ್ಞಾಪನ 3.08.2024ರಲ್ಲಿ ತಿಳಿಸಲಾಗಿತ್ತು. ಮುಂದುವರೆದು, ಶಾಲೆಗಳಲ್ಲಿ ದಾಖಲಾದ ಮಕ್ಕಳ ಸಂಖ್ಯೆ ಕುರಿತು ಮಾಹಿತಿ ನೀಡಲು ಸಹ ಎಲ್ಲಾ ಜಿಲ್ಲೆಗಳ ಉಪ ನಿರ್ದೇಶಕರಿಗೆ ತಿಳಿಸಲಾಗಿದೆ. ಈ ವಿಷಯದ ಕುರಿತಾಗಿ ಆಗಿರುವ ಪ್ರಗತಿಯನ್ನು ಪರಿಶೀಲಿಸಲು ಸೆ.30 ರಂದು ಅಪರಾಹ್ನ 3.00 ಗಂಟೆಗೆ ಆಯುಕ್ತರ ಅಧ್ಯಕ್ಷತೆಯಲ್ಲಿ ವಿಡಿಯೋ ಕಾನ್ಫರೆನ್ಸ್ ಸಭೆ ಏರ್ಪಡಿಸಲಾಗಿದೆ. ಸರ್ಕಾರದ ಆದೇಶದಂತೆ ಕ್ರಮ ವಹಿಸಿರುವ ಕುರಿತು ಪ್ರಸ್ತುತ ಅನುತ್ತೀರ್ಣ ವಿದ್ಯಾರ್ಥಿಗಳು ಮರುದಾಖಲಾತಿಯಾಗಿರುವ ವರದಿಯನ್ನು ನಿಗದಿತ ನಮೂನೆಯಲ್ಲಿ ಸೆ.27 ರೊಳಗೆ ಸಲ್ಲಿಸಲು ಎಲ್ಲಾ ಉಪನಿರ್ದೇಶಕರುಗಳಿಗೆ ತಿಳಿಸಿದೆ. ರಾಜ್ಯದಲ್ಲಿ ಸಾಕ್ಷರತಾ ಪ್ರಮಾಣವನ್ನು ಹೆಚ್ಚಳ ಮಾಡುವ ಉದ್ದೇಶದಿಂದ ರಾಜ್ಯ ಶಿಕ್ಷಣ ಇಲಾಖೆ ಮಹತ್ವದ ನಿರ್ಧಾರವನ್ನು ಕೈಗೊಂಡಿದೆ. ಎಸ್ಎಸ್ಎಲ್‌ಸಿ ಮತ್ತು ದ್ವಿತೀಯ ಪಿಯುಸಿಯಲ್ಲಿ ಅನುತ್ತೀರ್ಣರಾಗಿರುವ ವಿದ್ಯಾರ್ಥಿಗಳಿಗೆ ಮತ್ತೊಮ್ಮೆ ಶಾಲೆ ಕಾಲೇಜಿಗೆ ದಾಖಲಾಗಿ ಪಾಠ ಕೇಳುವ ಅವಕಾಶವನ್ನು ಶಿಕ್ಷಣ ಇಲಾಖೆ ಕಲ್ಪಿಸಿದೆ. ಈಗಾಗಲೇ ಆಂಧ್ರ ಪ್ರದೇಶದಲ್ಲಿರುವ ಇಂತಹದೊಂದು ನಿಯಮವನ್ನು ಈಗ ಕರ್ನಾಟಕದಲ್ಲಿಯೂ ಇದೇ ಮೊದಲ ■6ನೇ ಪುಟಕ್ಕೆ

ಸಿದ್ದರಾಮಯ್ಯ ವಿರುದ್ಧ ಲೋಕಾಯುಕ್ತರಿಗೆ ಪ್ರದೀಪ್‌ಕುಮಾರ್ ದೂರು; ಎಫ್ಐಆರ್ ದಾಖಲಿಸಲು, ಹಿಂಬರಹ ನೀಡಲು ಲೋಕಾಯುಕ್ತ ಎಸ್ಪಿ ನಕಾರ

ಮೈಸೂರು ಲೋಕಾಯುಕ್ತ ಕಚೇರಿ ಬಳಿ ಹೈಡ್ರಾಮಾ

- ಬೆಳಿಗ್ಗೆಯಿಂದ ಮಧ್ಯಾಹ್ನದವರೆಗೆ ನಾನಾ ಬೆಳವಣಿಗೆ
- ಎಫ್ಐಆರ್ ದಾಖಲಿಸಲು ಪಟ್ಟು
- ಕಾನೂನು ತಜ್ಞರ ಅಭಿಪ್ರಾಯಕ್ಕೆ 8 ದಿನ ಕಾಲಾವಕಾಶ
- ಅಂತಿಮವಾಗಿ 3 ದಿನ ಡೆಡ್‌ಲೈನ್


ಮೈಸೂರಿನ ದಿವಾನ್ಸ್ ರಸ್ತೆಯ ಲೋಕಾಯುಕ್ತ ಕಚೇರಿಯಲ್ಲಿ ಬುಧವಾರ ಪ್ರದೀಪ್‌ಕುಮಾರ್ (ಎಡದಿಂದ ಎರಡನೇಯವರು), ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ದೂರು ಸಲ್ಲಿಸಿದರು.

ಮೈಸೂರು, ಸೆ.25(ಬಿಎಲ್‌ಯು)– ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿರುವ ರಾಜ್ಯಪಾಲರ ತೀರ್ಮಾನವನ್ನು ಹೈಕೋರ್ಟ್ ಎತ್ತಿ ಹಿಡಿದಿರುವ ಹಿನ್ನೆಲೆ ದೂರುದಾರ ಪ್ರದೀಪ್‌ಕುಮಾರ್ ಇಂದು ಮೈಸೂರಿನ ಲೋಕಾಯುಕ್ತರಿಗೆ ದೂರು ನೀಡಿದರು.

ಆದರೆ ದೂರು ಸ್ವೀಕೃತಿ ಹಿಂಬರಹ ನೀಡಲು ಲೋಕಾಯುಕ್ತ ಎಸ್ಪಿ ಟಿ.ಜೆ.ಉದೇಶ್ ಕಾಲಾವಕಾಶ ಕೇಳಿದರು. ಬೆಳಿಗ್ಗೆಯಿಂದ ಮಧ್ಯಾಹ್ನದವರೆಗೆ ನಡೆದ ನಾನಾ ಬೆಳವಣಿಗೆಯಿಂದ ಲೋಕಾಯುಕ್ತ ಕಚೇರಿಯಲ್ಲಿ ಹೈಡ್ರಾಮಾವೇ ನಡೆಯಿತು. ಸಿದ್ದರಾಮಯ್ಯ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿದ್ದ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಆದೇಶವನ್ನು ಹೈಕೋರ್ಟ್ ಎತ್ತಿ ಹಿಡಿದು ತೀರ್ಪು ನೀಡಿದ್ದ ಬೆನ್ನಲ್ಲೇ ಪ್ರದೀಪ್‌ಕುಮಾರ್ ಇಂದು ಮೈಸೂರಿನ ಲೋಕಾಯುಕ್ತರಿಗೆ ಸಿದ್ದರಾಮಯ್ಯ ವಿರುದ್ಧ ದೂರು ಸಲ್ಲಿಸಿದರು. ಇಂದು ಬೆಳಿಗ್ಗೆ 10.30 ಗಂಟೆಗೆ ನಗರದ ದಿವಾನ್ಸ್ ರಸ್ತೆಯ ಲೋಕಾಯುಕ್ತ ಕಚೇರಿಗೆ ಆಗಮಿಸಿದ ಪ್ರದೀಪ್ ಕುಮಾರ್ ನೇರವಾಗಿ ಲೋಕಾಯುಕ್ತ ಎಸ್ಪಿ ಉದೇಶ್ ಅವರಲ್ಲಿ ದೂರು ಸಲ್ಲಿಸಿದರು. ಆದರೆ, ತಕ್ಷಣವೇ ಎಫ್ಐಆರ್ ದಾಖಲಿಸಲು ಸಾಧ್ಯವಿಲ್ಲ ಎಂದು ಉದೇಶ್ ಸ್ಪಷ್ಟಪಡಿಸಿದರು. ಹಾಗಾದರೆ ನಾನು ಸಲ್ಲಿಸಿರುವ ದೂರಿಗೆ ■6ನೇ ಪುಟಕ್ಕೆ

ಲೋಕಾಯುಕ್ತ ಎಸ್ಪಿ–ಪ್ರದೀಪ್‌ಕುಮಾರ್ ಮಾತಿನ ಚಕಮಕಿ

ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ದೂರು ನೀಡಲು ಬಂದ ಪ್ರದೀಪ್ ಕುಮಾರ್ ಹಾಗೂ ಲೋಕಾಯುಕ್ತ ಎಸ್ಪಿ ಉದೇಶ್ ನಡುವೆ ಮಾತಿನ ಚಕಮಕಿಯೇ ನಡೆಯಿತು.



ದೂರು ಸ್ವೀಕರಿಸಿ ಇಂದೇ ಎಫ್ಐಆರ್ ದಾಖಲಿಸುವಂತೆ ಪ್ರದೀಪ್ ಕುಮಾರ್ ಪಟ್ಟು ಹಿಡಿದರು. ಆದರೆ ಈಗಲೇ ಪ್ರಕರಣ ದಾಖಲಿಸಲು ಸಾಧ್ಯವಿಲ್ಲ ಎಂದು ಉದೇಶ್ ಸ್ಪಷ್ಟಪಡಿಸಿದರು. ಈ ಸಂದರ್ಭದಲ್ಲಿ ಪ್ರದೀಪ್ ಕುಮಾರ್ ಹಾಗೂ ಉದೇಶ್ ನಡುವೆ ಏರುಧ್ವನಿಯಲ್ಲಿ ವಾಗ್ವಾದ ಹಾಗೂ ಮಾತಿನ ಚಕಮಕಿ ನಡೆಯಿತು. ನಾನು ದೂರು ಕೊಟ್ಟು ಮೂರು ತಿಂಗಳಾಗಿದೆ. ಇದಕ್ಕೆ ಹಿಂಬರಹ ಕೂಡ ನೀಡಿಲ್ಲ. ನೀವೇನು ಹರಟೆ ಹೊಡೆಯಲು ಬಂದಿದ್ದೀರಾ ಎಂದು ಪ್ರಶ್ನಿಸಿದರು. ಕಚೇರಿಯಿಂದ ಹೊರಗೆ ಬಂದ ಪ್ರದೀಪ್‌ಕುಮಾರ್ ಪ್ರಕರಣ ದಾಖಲಿಸಲು ನಿರಾಕರಿಸಿದ ಉದೇಶ್ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಈ ಬೆಳವಣಿಗೆಯಿಂದ ಲೋಕಾಯುಕ್ತ ಕಚೇರಿಯಲ್ಲಿ ಗೊಂದಲಕಾರಿ ವಾತಾವರಣ ನಿರ್ಮಾಣವಾಯಿತು. ತರುವಾಯ ಲೋಕಾಯುಕ್ತ ಕಚೇರಿಯ ಪ್ರವೇಶ ದ್ವಾರದಲ್ಲಿ ಅಧಿಕ ಪೊಲೀಸರ ನಿಯೋಜಿಸಲಾಯಿತು. ಪ್ರದೀಪ್ ಕುಮಾರ್ ಹಾಗೂ ಅವರ ಜೊತೆಗೆ ಬಂದಿದ್ದ ವಕೀಲರನ್ನು ಹೊರತುಪಡಿಸಿ ಒಳಗೆ ಯಾರನ್ನು ಬಿಡಲಿಲ್ಲ.

ಸಿದ್ದರಾಮಯ್ಯ ರಾಜೀನಾಮೆ ನೀಡಿ ತನಿಖೆ ಎದುರಿಸಬೇಕು

ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ತನಿಖೆ ನಡೆಸುವಂತೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಆದೇಶ ನೀಡಿರುವ ಹಿನ್ನೆಲೆಯಲ್ಲಿ ಸಿದ್ದರಾಮಯ್ಯ ಕೂಡಲೇ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿ ತನಿಖೆ ಎದುರಿಸಬೇಕು ಎಂದು ಪ್ರದೀಪ್ ಕುಮಾರ್ ಆಗ್ರಹಿಸಿದರು. ಲೋಕಾಯುಕ್ತ ಸ್ವತಂತ್ರ ಸಂಸ್ಥೆಯಾದರೂ ಅಧಿಕಾರಿಗಳು ರಾಜ್ಯ ಸರ್ಕಾರದ ಅಧೀನದಲ್ಲೇ ಬರುವ ಕಾರಣ ಪ್ರಭಾವಕ್ಕೆ ಒಳಗಾಗುತ್ತಾರೆ. ಆದ ಕಾರಣ ಸಿದ್ದರಾಮಯ್ಯ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಬೇಕು. ತರುವಾಯ ತನಿಖೆ ಎದುರಿಸಬೇಕು ಎಂದು ಒತ್ತಾಯಿಸಿದರು. ನಾನು ಈ ಮೊದಲು ದೂರು ನೀಡಲು ಬಂದಾಗ ಬೇರೊಬ್ಬ ಲೋಕಾಯುಕ್ತ ಎಸ್ಪಿ ಇದ್ದರು. ಆದರೆ ನಂತರ ■6ನೇ ಪುಟಕ್ಕೆ

ಶಿಕ್ಷಣದ ಮೂಲ ಉದ್ದೇಶ ಜ್ಞಾನ ಪಡೆಯುವುದು



ಮೈಸೂರಿನ ಲಕ್ಷ್ಮೀಪುರಂನಲ್ಲಿರುವ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಪಶ್ಚಿಮ ಬಂಗಾಳದ ಅತೀ ಚಿಕ್ಕ ವಯಸ್ಸಿನಲ್ಲೇ ಬೋಧನೆಯಲ್ಲಿ ತೊಡಗಿಸಿಕೊಂಡ ಶಿಕ್ಷಣ ತಜ್ಞ ಬಾಬರ್ ಆಲಿ ಅವರೊಂದಿಗೆ ಶಿಕ್ಷಣ ಸಂವಾದ ಕಾರ್ಯಕ್ರಮದಲ್ಲಿ ಹಿರಿಯ ಉಪನ್ಯಾಸಕ ಎನ್.ಎಸ್.ಪಶುಪತಿ ಸನ್ಮಾನಿಸಿ, ಗೌರವಿಸಿದರು.

ಮೈಸೂರು, ಸೆ.25–ಮೈಸೂರಿನ ಲಕ್ಷ್ಮೀಪುರಂನಲ್ಲಿರುವ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಪಶ್ಚಿಮ ಬಂಗಾಳದ ಅತೀ ಚಿಕ್ಕ ವಯಸ್ಸಿನಲ್ಲೇ ಬೋಧನೆಯಲ್ಲಿ ತೊಡಗಿಸಿಕೊಂಡ ಶಿಕ್ಷಣ ತಜ್ಞ ಬಾಬರ್ ಆಲಿ ಅವರೊಂದಿಗೆ ಶಿಕ್ಷಣ ಸಂವಾದ ಆಯೋಜಿಸಲಾಗಿತ್ತು.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಬಾಬರ್ ಆಲಿ, ಮಕ್ಕಳನ್ನುದ್ದೇಶಿಸಿ ಮಾತನಾಡಿ, ಶಿಕ್ಷಣದ ಮೂಲ ಉದ್ದೇಶ ಜ್ಞಾನವನ್ನು ಪಡೆಯುವುದು, ಅಜ್ಞಾನದ ಕತ್ತಲೆಯನ್ನು ಹೋಗಲಾಡಿಸಿ, ಸುಜ್ಞಾನದ ಬೆಳಕನ್ನು ಪಡೆಯವುದೇ ಶಿಕ್ಷಣದ ಮೂಲ ಉದ್ದೇಶ. ವಿದ್ಯಾರ್ಥಿಗಳು ಇಂದು ಶಿಸ್ತು, ಸಂಯಮವನ್ನು ಮೈಗೂಡಿಸಿಕೊಳ್ಳಬೇಕು. ಶಿಕ್ಷಣದ ಜೊತೆಗೆ ನೈತಿಕತೆಯನ್ನು ಬೆಳೆಸಿಕೊಂಡಾಗ ಜೀವನದಲ್ಲಿ ಆದರ್ಶ ವ್ಯಕ್ತಿಗಳಾಗಿ ಹೊರಹೊಮ್ಮಲು ಸಾಧ್ಯವಾಗುತ್ತದೆ. ನಾನೂ ಕೂಡ ಬಡತನದಲ್ಲಿ ಬೆಳೆದಿದ್ದರೂ, ಶಿಕ್ಷಣದಿಂದ ವಂಚಿತರಾದವರಿಗೆ ಉಚಿತ ಶಿಕ್ಷಣವನ್ನು ನೀಡುತ್ತಾ ಬಂದಿದ್ದೇನೆ. ಬೆಲೆ ಕಟ್ಟಲಾಗದ ಯಾವುದಾದರೂ ಕ್ಷೇತ್ರವಿದ್ದರು ಅದು ಪವಿತ್ರವಾದ ಶಿಕ್ಷಣ ಕ್ಷೇತ್ರ. ಈ ಅವಧಿಯಲ್ಲಿ ವಿದ್ಯಾರ್ಥಿಗಳು ಓದಿನ ಕಡೆ ಹೆಚ್ಚಿನ ಗಮನಹರಿಸಬೇಕೆಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಹಿರಿಯ ಉಪನ್ಯಾಸಕರಾದ ಎನ್.ಎಸ್.ಪಶುಪತಿ, ಮಹದೇವ ನಾಯಕ, ಡಾ.ಜಯಾನಂದ ಪ್ರಸಾದ್, ಶಶಿಕಲಾ, ಮಂಜುಳ, ಬೇಬಿ, ನಂದೀಶ್, ಶಶಿರೇಖಾ ಉಪಸ್ಥಿತರಿದ್ದರು. ಇದೇ ಸಂದರ್ಭದಲ್ಲಿ ಕಾಲೇಜಿನ ವತಿಯಿಂದ ಶಿಕ್ಷಣ ತಜ್ಞ ಬಾಬರ್ ಆಲಿ ಸನ್ಮಾನಿಸಿ, ಗೌರವಿಸಲಾಯಿತು.

ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಜಯಂತಿ ಆಚರಣೆ



ಮೈಸೂರಿನ ಜೆ.ಪಿ.ನಗರ ರಿಂಗ್ ರಸ್ತೆಯ ವೀರಶೈವ ಲಿಂಗಾಯತ ವಿವಿಧ ಬಡಾವಣೆಗಳ ಒಕ್ಕೂಟದ ಆಶ್ರಯದಲ್ಲಿ ಶಿವರಾತ್ರಿ ರಾಜೇಂದ್ರ ಶ್ರೀಗಳ ಜಯಂತಿ ಆಚರಿಸಲಾಯಿತು.

ಮೈಸೂರು,ಸೆ.25–ಮೈಸೂರಿನ ಜೆ.ಪಿ. ನಗರ ರಿಂಗ್ ರಸ್ತೆಯ ವೀರಶೈವ ಲಿಂಗಾಯತ ವಿವಿಧ ಬಡಾವಣೆಗಳ ಒಕ್ಕೂಟದ ಆಶ್ರಯದಲ್ಲಿ ಸುತ್ತೂರು ವೀರ ಸಿಂಹಾಸನ ಮಠಾಧ್ಯಕ್ಷರಾಗಿದ್ದ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ 109ನೇ ಜಯಂತಿ ಮಹೋತ್ಸವ ಹಾಗೂ ಚಿಂತನ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಒಕ್ಕೂಟದ ಅಧ್ಯಕ್ಷ ಕೆ.ಸಿ.ಬಸವರಾಜಸ್ವಾಮಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಶ್ರೀಗಳವರು ಬಡವರ ಆಶಾಕಿರಣವಾಗಿದ್ದರು. ಗ್ರಾಮೀಣ ಪ್ರದೇಶದ ಬಡ ಮಕ್ಕಳ ದುಸ್ಥಿತಿಯನ್ನು ಮನಗಂಡು ಅವರ ಭವಿಷ್ಯದ ಬದುಕನ್ನು ಕಟ್ಟಿ ಕೊಳ್ಳಲು ಅನುವಾಗುವಂತೆ ವಿದ್ಯಾರ್ಥಿ ನಿಲಯ, ಶಾಲೆ–ಕಾಲೇಜುಗಳನ್ನು ಸ್ಥಾಪಿಸುವ ಮೂಲಕ ಲಕ್ಷಾಂತರ ಮಕ್ಕಳ ಭವಿಷ್ಯಕ್ಕೆ ದಾರಿದೀಪವಾಗಿದ್ದರು ಎಂದರು.

ನಂಜನಗೂಡು ಜೆಎಸ್‌ಎಸ್ ಕಾಲೇಜಿನ ಪ್ರಾಂಶುಪಾಲ ಹೊನ್ನೆಗೌಡ, ರಾಜೇಂದ್ರ ಶ್ರೀಗಳವರ ಸಾಧನೆ ಕುರಿತು ಮಾತನಾಡಿದರು. ಮರಿಯಾಲ ಮಠಾಧ್ಯಕ್ಷರಾದ ಶ್ರೀ ಮುರುಘರಾಜೇಂದ್ರ ಸ್ವಾಮಿಗಳು ಆಶೀರ್ವಚನ ನೀಡಿದರು

ಗೌರವಾಧ್ಯಕ್ಷ ಡಾ.ಶ್ರೀ ಸೋಮಶೇಖರಸ್ವಾಮಿಗಳು ರಾಜೇಂದ್ರ ಮಹಾಸ್ವಾಮಿಗಳ ಬಗ್ಗೆ ಮಾತನಾಡಿದರು.

ಪ್ರದಾನ ಕಾರ್ಯದರ್ಶಿ ಕೆಂಪಣ್ಣ ಪ್ರಾಸ್ತಾವಿಕ ನುಡಿಗಳನ್ನಾಡಿದರು.

ಕಾನೂನು ಸಲಹೆಗಾರರಾದ ಪುಟ್ಟಬಸಪ್ಪ, ಪ್ರಭುಸ್ವಾಮಿ, ಹೆಚ್.ಎಂ.ಪ್ರಭು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಸಭೆಯಲ್ಲಿ ಜಿಲ್ಲಾ ವೀರಶೈವ ಮಹಾಸಭಾದ ಸದಸ್ಯರಾದ ಕಲ್ಮಳ್ಳಿ ನಟರಾಜು, ಶರಣ ವೇದಿಕೆ ಅಧ್ಯಕ್ಷ ಪುಟ್ಟರಾಜಪ್ಪ, ವಸ್ತು ಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಎಸ್.ಡಿ.ಮಹೇಂದ್ರ ಸೇರಿದಂತೆ ಮತ್ತಿತರರು ಭಾಗವಹಿಸಿದ್ದರು.

ಗಿರೀಶ್ ಕಾರ್ನಾಡ್ ಮತ್ತು ಅವರ 'ತಲೆದಂಡ' ಕುರಿತು ನೇರ ಫೋನ್–ಇನ್ ಕಾರ್ಯಕ್ರಮ

ಮೈಸೂರು, ಸೆ. 25– ಜೆಎಸ್‌ಎಸ್ ರೇಡಿಯೋ, ಸಮುದಾಯ ಬಾನುಲಿ ಕೇಂದ್ರವು ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ಮೈಸೂರು ಹಾಗೂ ಆಲೂರು ವೆಂಕಟರಾವ್ ಭಾಷಾ ಕೌಶಲ ಕೇಂದ್ರದ ಸಹಯೋಗದೊಂದಿಗೆ ಕನ್ನಡ ನಾಡು ನುಡಿಗೆ ಕೀರ್ತಿ ತಂದ ಜ್ಞಾನಪೀಠ ಪ್ರಶಸ್ತಿ ಮತ್ತು ಕೇಂದ್ರ ಸಾಹಿತ್ಯ ಅಕಾಡಮಿ ಪ್ರಶಸ್ತಿ ಪುರಸ್ಕೃತರ ಕೃತಿ ಮತ್ತು ಕರ್ತೃವಿನ ಪರಿಚಯಾತ್ಮಕ ಸರಣಿ ಕಾರ್ಯಕ್ರಮದಲ್ಲಿ ನಾಳೆ (ಸೆ.27) ಕನ್ನಡ ನಾಡಿನ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರು ಹಾಗೂ ಕೇಂದ್ರ ಸಾಹಿತ್ಯ ಅಕಾಡಮಿ ಪ್ರಶಸ್ತಿ ಪುರಸ್ಕೃತರು ಆದ ಗಿರೀಶ್ ಕಾರ್ನಾಡ್ ಮತ್ತು ಅವರ ಕೃತಿಗಳ ಕುರಿತು ನೇರ ಫೋನ್–ಇನ್ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ಕಾರ್ಯಕ್ರಮದಲ್ಲಿ ಸಾಹಿತಿಗಳು ಹಾಗೂ ಶಿಕ್ಷ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಡಾ.ದೇವರಾಜು ಪಿ.ಚಿಕ್ಕಳ್ಳಿ ಭಾಗವಹಿಸಲಿದ್ದು, ಸಾಹಿತ್ಯಾಸಕ್ತರು ಮತ್ತು ವಿದ್ಯಾರ್ಥಿಗಳು ನೇರವಾಗಿ ಈ ಕಾರ್ಯಕ್ರಮವನ್ನು ಆಲಿಸಬಹುದು ಹಾಗೂ ಈ ವಿಷಯಕ್ಕೆ ಸಂಬಂಧಿಸಿದಂತೆ ಯಾವುದೇ ವಿಚಾರಗಳು ನಮ್ಮ ಜೊತೆ ನೇರವಾಗಿ ಹಂಚಿಕೊಳ್ಳಬಹುದು. ಅದಕ್ಕಾಗಿ ನೀವು ಕರೆಮಾಡಬಹುದಾದ ನಮ್ಮ ನಿಲಯದ ದೂರವಾಣಿ ಸಂಖ್ಯೆ: 8296725912, 0821-25 46 563. ಜೆಎಸ್‌ಎಸ್ ರೇಡಿಯೋವನ್ನು ಪ್ಲೇಸ್ಟೋರ್‌ನಲ್ಲಿ ಲಭ್ಯವಿರುವ ಆ್ಯಪ್ ಮೂಲಕ ವಿಶ್ವದ ಯಾವುದೇ ಮೂಲೆಯಲ್ಲಾದರು ಆಲಿಸಬಹುದು. ಈ ಕಾರ್ಯಕ್ರಮವನ್ನು ಜೆಎಸ್‌ಎಸ್ ರೇಡಿಯೋ ಕೇಂದ್ರದ ಯುಟ್ಯೂಬ್ ಚಾನಲ್ ಮೂಲಕವೂ ವೀಕ್ಷಿಸಬಹುದು.

ಆಮ್ ಆದ್ಮಿ ಬಲಪಡಿಸಲು ಹೆಚ್ಚೆಚ್ಚು ಸದಸ್ಯತ್ವ ನೋಂದಣಿ ಅವಶ್ಯ

50ನೇ ವಾರ್ಡ್ ಮುಖಂಡ ಹೇಮಂತ್‌ಕುಮಾರ್ ಅಭಿಮತ



ಮೈಸೂರಿನ 50ನೇ ವಾರ್ಡ್‌ನಲ್ಲಿ ಆಮ್ ಆದ್ಮಿ ಪಕ್ಷದ ಸದಸ್ಯತ್ವ ನೋಂದಣಿ ಮಾಡುವ ಕಾರ್ಯಕ್ಕೆ ಚಾಲನೆ ನೀಡಲಾಯಿತು


ಮೈಸೂರು, ಸೆ. 25– ಆಮ್ ಆದ್ಮಿ ಪಾರ್ಟಿಯನ್ನು ದೇಶದಲ್ಲಿ ಬಲಿಷ್ಠಗೊಳಿಸುವ ನಿಟ್ಟಿನಲ್ಲಿ ಹಮ್ಮಿಕೊಂಡಿರುವ ಸದಸ್ಯತ್ವ ಅಭಿಯಾನವನ್ನು ಪ್ರತಿಯೊಬ್ಬ ಕಾರ್ಯಕರ್ತ ಪಕ್ಷ ನಿಷ್ಠೆಯಿಂದ ಕೆಲಸ ಮಾಡಿ ನಿರೀಕ್ಷೆಗೂ ಮೀರಿ ಯಶಸ್ವಿಗೊಳಿಸಬೇಕು ಎಂದು 50ನೇ ವಾರ್ಡ್‌ನ ಯುವ ಮುಖಂಡ ಹೇಮಂತ್ ಕುಮಾರ್, ಪಕ್ಷದ ಸದಸ್ಯರಿಗೆ ಮನವಿ ಮಾಡಿದರು. ವಾರ್ಡ್ ಪ್ರತೀ ಬೂತ್ ಹಾಗೂ ಮನೆ ಮನೆಗೆ ಮನವರಿಕೆ ಮಾಡಿ ಅಧಿಕ ಸದಸ್ಯರನ್ನು ನೋಂದಣಿ ಮಾಡಬೇಕಿದೆ. ಏಕಕಾಲಕ್ಕೆ ಕಾರ್ಯಕರ್ತರು ಸದಸ್ಯತ್ವ ನೋಂದಣಿ ಕಾರ್ಯದಲ್ಲಿ ಭಾಗವಹಿಸಿದ್ದಾರೆ ಎಂದರು.

ನಗರದ 50ನೇ ವಾರ್ಡ್ ಸುಣ್ಣದ ಕೇರಿ, ರಹಮಾನೀಯ ಮೊಹಲ್ಲಾ, ಗೀತಾ ರಸ್ತೆ 50ನೇ ವಾರ್ಡ್‌ನ ಪ್ರಮುಖ ಬೀದಿಗಳಲ್ಲಿ ಸದಸ್ಯತ್ವ ನೋಂದಣಿ ಮಾಡುವ ಮೂಲಕ ಚಾಲನೆ ನೀಡಿ, ಮಾತನಾಡಿದರು.

ಸದಸ್ಯತ್ವ ಅಭಿಯಾನದಲ್ಲಿ ಮಂಜುನಾಥ್, ಶ್ರೀಕಾಂತ್, ರಘುವರನ್, ಹರೀಶ್ ಇನ್ನಿತರರಿದ್ದರು.

ಅ.6.ರಿಂದ 10ರವರೆಗೆ ಐದು ದಿನಗಳ ಕಾಲ ಯುವ ದಸರಾ

● ವೀಕ್ಷಕರ ಗ್ಯಾಲರಿ–1ರ ಟಿಕೆಟ್ ಮುಖ ಬೆಲೆ 8 ಸಾವಿರ ● ವೀಕ್ಷಕರ ಗ್ಯಾಲರಿ–2ರ ಟಿಕೆಟ್ ಮುಖಬೆಲೆ 5 ಸಾವಿರ ● ಅಧಿಕ ಜನರಿಗೆ ಉಚಿತ ಪ್ರವೇಶಾವಕಾಶ



ಇಳಯರಾಜಾ




ಎ.ಆರ್.ರೆಹಮಾನ್



ಶ್ರೇಯಾ ಘೋಷಾಲ್



ಬಾದ್ ಷಾ



ರವಿ ಬಸ್ರೂರು

ಮೈಸೂರು,ಸೆ.25(ಪಿಎಂ)– ನಾಡಹಬ್ಬ ದಸರಾ ಅಂಗವಾಗಿ ಅ.6.ರಿಂದ 10ರವರೆಗೆ ಐದು ದಿನಗಳ ಕಾಲ ಯುವ ದಸರಾ ನಡೆಯಲಿದ್ದು, ಕಾರ್ಯಕ್ರಮ ವೀಕ್ಷಣೆಗೆ ಕಾಯ್ದಿರಿಸಲಾಗುವ ವೀಕ್ಷಕರ ಗ್ಯಾಲರಿ–1 (ವೇದಿಕೆ ಸಮೀಪ)ರ ಟಿಕೆಟ್‌ಗಳ ಮುಖ ಬೆಲೆ 8 ಸಾವಿರ ರೂ. ಹಾಗೂ ವೀಕ್ಷಕರ ಗ್ಯಾಲರಿ–2ರ ಟಿಕೆಟ್ 5 ಸಾವಿರ ರೂ. ನಿಗದಿಪಡಿಸಲಾಗಿದೆ.

ಮೈಸೂರು ನಗರದ ಹೊರವರ್ತುಲ ರಸ್ತೆ ಸಮೀಪದ ಉತ್ತನಹಳ್ಳಿ ಗ್ರಾಮದ ಬಳಿ ಯುವ ದಸರಾ ಹಮ್ಮಿಕೊಂಡಿದ್ದು, ಅ.6ರಂದು ಅಶ್ವಿನಿ ಪುನೀತ್ ರಾಜ್‌ಕುಮಾರ್ ಉದ್ಘಾಟಿಸಲಿದ್ದಾರೆ. ಯುವ ದಸರಾ ಕಾರ್ಯಕ್ರಮಗಳ ವೀಕ್ಷಣೆಗೆ ಸಾರ್ವಜನಿಕರಿಗೆ ಅವಕಾಶವಿದ್ದು, ಸುಮಾರು ಒಂದು ಲಕ್ಷಕ್ಕೂ ಮೀರಿದ ಆಸನ ವ್ಯವಸ್ಥೆ ಕಲ್ಪಿಸಲಾಗಿದೆ. ಮುಂಗಡವಾಗಿ ಕೆಲವು ಆಸನಗಳನ್ನು ಟಿಕೆಟ್ ಖರೀದಿಸಿ ಕಾಯ್ದಿರಿಸಲು ಅವಕಾಶವಿದೆ.

ಯುವ ದಸರಾ ಟಿಕೆಟ್‌ಗಳು ಮೈಸೂರು ದಸರಾ–2024ರ ಅಧಿಕೃತ ಜಾಲತಾಣ (website) https://www.mysoredasara.gov.in/ BOOK MY SHOW ಮೂಲಕ




ಅಶ್ವಿನಿ ಪುನೀತ್ ರಾಜ್‌ಕುಮಾರ್

ಸೆ.27ರಿಂದ ಖರೀದಿಸಬಹುದು. ಪ್ರತಿದಿನದ ಕಾರ್ಯಕ್ರಮಕ್ಕೆ ಪ್ರತ್ಯೇಕವಾಗಿ ಟಿಕೆಟ್ ಖರೀದಿಸಬೇಕಿದೆ.

ಯುವ ದಸರಾ ಪ್ರದರ್ಶನದ ವಿವರ: ಅ.6ರಂದು ಬಾಲಿವುಡ್ ಹಿನ್ನೆಲೆಯ ಗಾಯಕಿ ಶ್ರೇಯಾ ಘೋಷಾಲ್ ಮತ್ತು ಅವರ ತಂಡದ ಕಾರ್ಯಕ್ರಮ, ಅ.7ರಂದು ಖ್ಯಾತ ಸಂಗೀತ ಸಂಯೋಜಕ ರವಿ ಬಸ್ರೂರು ಮತ್ತು ಅವರ ತಂಡದಿಂದ ರಸ ಸಂಜೆ ಕಾರ್ಯಕ್ರಮ, ಅ.8ರಂದು ಖ್ಯಾತ ರಾಪರ್ ಬಾದ್ ಷಾ ಮತ್ತು ಅವರ ತಂಡದಿಂದ ಮನರಂಜನೆ ಕಾರ್ಯಕ್ರಮ, ಅ.9ರಂದು ಸುಪ್ರಸಿದ್ಧ ಸಂಗೀತ ನಿರ್ದೇಶಕ ಎ.ಆರ್.ರೆಹಮಾನ್ ಮತ್ತು ಅವರ ತಂಡದಿಂದ ರಸ ಸಂಜೆ ಕಾರ್ಯಕ್ರಮ, ಅ.10ರಂದು ಖ್ಯಾತ ಸಂಗೀತ ಸಂಯೋಜಕ ಇಳಯರಾಜಾ ಮತ್ತು ಅವರ ತಂಡದಿಂದ ಸಂಗೀತ ರಸ ಸಂಜೆ ಕಾರ್ಯಕ್ರಮ ನಡೆಯಲಿದೆ. ಪ್ರತಿದಿನ ಸಂಜೆ 6ರಿಂದ ರಾತ್ರಿ 10ರವರೆಗೆ ಪ್ರದರ್ಶನ ನಡೆಯಲಿದೆ.

ಯುವ ದಸರಾ ಕಾರ್ಯಕ್ರಮಗಳನ್ನು ವೀಕ್ಷಿಸಲು ಸಾರ್ವಜನಿಕರಿಗೆ ಉಚಿತ ಹಾಗೂ ಟಿಕೆಟ್ ಆಧಾರಿತ ಪ್ರತ್ಯೇಕ ಪ್ರವೇಶಾವಕಾಶವಿರುತ್ತದೆ. ಟಿಕೆಟ್ ಆಧಾರಿತ ಗ್ಯಾಲರಿಗೆ ನಿಗದಿಪಡಿಸಲಾದ ಟಿಕೆಟ್ ಖರೀದಿಸಿದವರಿಗೆ ಮಾತ್ರ ಪ್ರವೇಶಾವಕಾಶ ಇರುತ್ತದೆ. ಒಂದು ಟಿಕೆಟ್‌ನಲ್ಲಿ ಒಬ್ಬರಿಗೆ ಮಾತ್ರ ಪ್ರವೇಶಾವಕಾಶ ಇರುತ್ತದೆ. ಕೆ.ಎಸ್.ಆರ್.ಟಿ.ಸಿ ಮೂಲಕ ಪಾವತಿ ಆಧಾರದ (Paid Service) ಸಾರಿಗೆ ಬಸ್ ಸೌಲಭ್ಯ ಕಲ್ಪಿಸಲು ಕ್ರಮ ವಹಿಸಲಾಗುತ್ತಿದೆ ಎಂದು ದಸರಾ ವಿಶೇಷಾಧಿಕಾರಿಗಳೂ ಆದ ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದಸರಾ ಉದ್ಘಾಟಕರಾದ ಹಂಪಾ ನಾಗರಾಜಯ್ಯರಿಗೆ ಇಂದು ಮೈಸೂರು ಜಿಲ್ಲಾಡಳಿತದಿಂದ ಅಧಿಕೃತ ಆಹ್ವಾನ



ಮೈಸೂರು: ವಿಶ್ವವಿಖ್ಯಾತ ಮೈಸೂರು ದಸರಾ ಉತ್ಸವದ ಈ ಬಾರಿಯ ಉದ್ಘಾಟಕರಾದ ಹೆಸರಾಂತ ಸಾಹಿತಿ ಪ್ರೊ ಹಂಪ ನಾಗರಾಜಯ್ಯ ಅವರನ್ನು ನಾಳೆ (ಸೆ.26) ಬೆಳಗ್ಗೆ 9 ಗಂಟೆಗೆ ಬೆಂಗಳೂರಿನ ಅವರ ಸ್ವಗೃಹದಲ್ಲಿ ಮೈಸೂರು ಜಿಲ್ಲಾಡಳಿತದಿಂದ ಅಧಿಕೃತವಾಗಿ ಆಹ್ವಾನ ನೀಡಲಾಗುವುದು.

ದಸರಾ ವಿಶೇಷಾಧಿಕಾರಿಗಳು ಆಗಿರುವ ಮೈಸೂರು ಜಿಲ್ಲಾಧಿಕಾರಿ ಲಕ್ಷ್ಮಿಕಾಂತರೆಡ್ಡಿ ಹಾಗೂ ದಸರಾ ಹಬ್ಬದ ಸ್ವಾಗತ ಮತ್ತು ಆಮಂತ್ರಣ ಸಮಿತಿಯವರು ನಾಳೆ ಬೆಂಗಳೂರಿನ ಅವರ ನಿವಾಸಕ್ಕೆ ತೆರಳಿ ಮೈಸೂರು ಪೇಟ, ಶಾಲು, ಹಾರ, ಫಲ–ಪುಷ್ಪ ನೀಡಿ ಗೌರವ ನೀಡಿ ಸತ್ಕರಿಸಿ ದಸರಾ ಉದ್ಘಾಟನೆಗೆ ಆಮಂತ್ರಣ ನೀಡುವರು.

ರಾಜವಂಶಸ್ಥರಿಂದ ದಸರಾ ಧಾರ್ಮಿಕ ಪೂಜಾ ಕೈಂಕರ್ಯ

ಸಾರ್ವಜನಿಕರಿಗೆ ಅರಮನೆ ಪ್ರವೇಶ ನಿರ್ಬಂಧ



ಮೈಸೂರು, ಸೆ.25(ಎಸ್‌ಪಿಎನ್)– ಪ್ರತಿ ವರ್ಷದಂತೆ ಈ ಬಾರಿಯೂ ಮೈಸೂರು ಅರಮನೆಯಲ್ಲಿ ದಸರಾ–2024ರ ಪ್ರಯುಕ್ತ ರಾಜವಂಶಸ್ಥರಿಂದ ಧಾರ್ಮಿಕ ಪೂಜಾ ಕೈಂಕರ್ಯಗಳು ನಡೆಯಲಿದೆ. ಹಾಗಾಗಿ ಮೈಸೂರು ಅರಮನೆಗೆ ವಿವಿಧ ದಿನಾಂಕದಲ್ಲಿ ಪ್ರವಾಸಿಗರಿಗೆ ಅರಮನೆ ಪ್ರವೇಶ ಇರುವುದಿಲ್ಲ. ಸೆ.27 ರಂದು ಬೆಳಗ್ಗೆ 10ರಿಂದ ಮಧ್ಯಾಹ್ನ 1 ಗಂಟೆವರೆಗೆ ಸಿಂಹಾಸನ ಜೋಡಣೆ ಕಾರ್ಯ ಇರುವುದರಿಂದ ಅಂದು ಪ್ರವಾಸಿಗರಿಗೆ ಅರಮನೆ ಪ್ರವೇಶ ನಿಷೇಧಿಸಲಾಗಿದೆ. ಅ.3ರಂದು ಬೆಳಗ್ಗೆ 10ರಿಂದ 2 ಗಂಟೆವರೆಗೆ ಖಾಸಗಿ ದರ್ಬಾರ್ ಹಮ್ಮಿಕೊಂಡಿರುವುದರಿಂದ ಅಂದಿನ ಪೂಜಾ ಕೈಂಕರ್ಯದ ಪ್ರಯುಕ್ತ ಪ್ರವಾಸಿಗರಿಗೆ ಪ್ರವೇಶ ಇಲ್ಲ. ಅ.11 ರಂದು ಅರಮನೆ ಕಲ್ಯಾಣ ಮಂಟಪದಲ್ಲಿ ಆಯುಧ ಪೂಜೆ, ಅ.12 ರಂದು ವಿಜಯದಶಮಿ ಪ್ರಯುಕ್ತ ಬೆಳಗ್ಗೆಯಿಂದ ಸಂಜೆಯವರೆಗೆ ಪ್ರವಾಸಿಗರಿಗೆ ಅರಮನೆ ಪ್ರವೇಶ ಇರುವುದಿಲ್ಲ. ಅ.27ರಂದು ಬೆಳಗ್ಗೆ 10ರಿಂದ ಮಧ್ಯಾಹ್ನ 1 ಗಂಟೆವರೆಗೆ ಸಿಂಹಾಸನ ವಿಸರ್ಜನೆ ಕಾರ್ಯ ಇರುವುದರಿಂದ ಪ್ರವಾಸಿಗರಿಗೆ ಅರಮನೆ ಪ್ರವೇಶ ಇರುವುದಿಲ್ಲ ಎಂದು ಮೈಸೂರು ಅರಮನೆ ಮಂಡಳಿ ಕಾರ್ಯ ನಿರ್ವಾಹಕ ಅಧಿಕಾರಿ ಜಿ.ಲಕ್ಷ್ಮಿಕಾಂತ ರೆಡ್ಡಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆ ನೀಡುವ ಅವಶ್ಯಕತೆಯಿಲ್ಲ

ಗೃಹ ಸಚಿವ ಡಾ.ಜಿ.ಪರಮೇಶ್ವರ ಪ್ರತಿಕ್ರಿಯೆ

ಬೆಂಗಳೂರು, ಸೆ.25–ಮುಡಾ ನಿವೇಶನ ಹಂಚಿಕೆ ಪ್ರಕರಣದಲ್ಲಿ ಮುಖ್ಯಮಂತ್ರಿಯವರ ಪಾತ್ರ ಏನೂ ಇಲ್ಲ. ಮುಂದೆ ಕಾನೂನು ಹೋರಾಟ ಮಾಡಲು ಅವಕಾಶ ಇರುವುದರಿಂದ ಮುಖ್ಯಮಂತ್ರಿಯವರು ರಾಜೀನಾಮೆ ನೀಡುವ ಅವಶ್ಯಕತೆ ಇಲ್ಲ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಹೇಳಿದರು.

ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಖ್ಯಮಂತ್ರಿಯವರು ಯಾವುದೇ ಕಡತಕ್ಕೆ ಸಹಿ ಹಾಕಿಲ್ಲ. ಅಧಿಕಾರ ದುರ್ಬಳಕೆ ಆಗಿಲ್ಲ ಎಂದು ನ್ಯಾಯಕ್ಕಾಗಿ ಹೈಕೋರ್ಟ್‌ಗೆ ಹೋಗಿದ್ದೆವು. ಅದಕ್ಕೆ ವಿರುದ್ಧವಾದ ತೀರ್ಪು ಬಂದಿದೆ. ತೀರ್ಪನ್ನು ಗೌರವಿಸುತ್ತೇವೆ. ಆದರೆ, ಎಲ್ಲೋ ಒಂದು ಕಡೆ ನಮಗೆ ನ್ಯಾಯ ಸಿಗಲಿಲ್ಲವೇನು ಅನ್ನಿಸುತ್ತಿದೆ. ಮುಂದಿನ ಕಾನೂನು ಹೋರಾಟದ ಬಗ್ಗೆ ಮುಖ್ಯಮಂತ್ರಿಯವರು ಈಗಾಗಲೇ ಸ್ಪಷ್ಟಪಡಿಸಿದ್ದಾರೆ ಎಂದರು.

ಮುಖ್ಯಮಂತ್ರಿಯವರು ರಾಜೀನಾಮೆ ಕೊಡಬೇಕು. ಅಧಿಕಾರ ಬಿಟ್ಟು ಇಳಿಯಬೇಕು ಎನ್ನುವ ಮಾತುಗಳು ವಿಪಕ್ಷದವರಿಂದ ಕೇಳಿಬರುತ್ತಿದೆ. ಇದ್ಯಾವುದು ಕೂಡ ಆಗುವುದಿಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯನವರು ರಾಜೀನಾಮೆ ಕೊಡುವ ಅಗತ್ಯವಿಲ್ಲ ಎಂದು ಅನೇಕರು ಸ್ಪಷ್ಟಪಡಿಸಿದ್ದಾರೆ. ನಾವೂ ಇದೇ ಮಾತನ್ನು ಸ್ಪಷ್ಟಪಡಿಸುತ್ತೇನೆ. ಮುಂದಿನ ನ್ಯಾಯಾಂಗ ಹೋರಾಟ ಮಾಡಲು ಅವಕಾಶ ಇರುವುದರಿಂದ ರಾಜೀನಾಮೆ ನೀಡುವ ಪ್ರಮೇಯ ಬರುವುದಿಲ್ಲ ಎಂದು ಪುನರುಚ್ಚರಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ತಮ್ಮ 40 ವರ್ಷಗಳ ರಾಜಕೀಯ ಜೀವನದಲ್ಲಿ ಯಾವುದೇ ರೀತಿಯ ಆಪಾದನೆಗಳು ಬಂದಿಲ್ಲ. ಈಗ ರಾಜಕೀಯ ದುರುದ್ದೇಶದಿಂದ ಆರೋಪಗಳನ್ನು ಮಾಡಿದ್ದಾರೆ. ಎಂಥವರಿಗೂ ಇಂತಹ ಆಪಾದನೆ ಮಾಡಿದ್ದಾರೆ ಎಂದಾದಾಗ ನೋವಾಗುವುದು ಸಹಜ. ಇದಕ್ಕೆ ಹೋರಾಟ ಮಾಡಬೇಕಲ್ಲವೇ. ವಿಪಕ್ಷದವರು ರಾಜಕೀಯ ದುರುದ್ದೇಶದಿಂದ ಮಾಡಿರುವ ಆರೋಪವನ್ನು ಜನಸಮುದಾಯಕ್ಕೆ ತೋರಿಸುತ್ತೇವೆ ಎಂದು ಡಾ.ಪರಮೇಶ್ವರ್ ಹೇಳಿದರು.

ಹೈಕೋರ್ಟ್‌ನಲ್ಲಿ ವಕೀಲರು ವಾದ ಮಾಡುವ ಸಂದರ್ಭದಲ್ಲಿ, ಮುಖ್ಯಮಂತ್ರಿಯವರ ಪಾತ್ರ ಏನಿದೆ ಎಂಬುದನ್ನು ಹೇಳಿ. ಈ ಬಗ್ಗೆ ಯಾರು ಹೇಳುತ್ತಿಲ್ಲವಲ್ಲ



ಎಂದು ಜಡ್ಜ್ ಅವರು ಹೇಳಿದ್ದಾರೆ. ಮುಖ್ಯಮಂತ್ರಿಯವರ ಪಾತ್ರ ಏನು ಎಂಬುದು ಜಡ್ಜ್‌ಮೆಂಟ್‌ನಲ್ಲಿ ಎಲ್ಲಿಯೂ ಕಾಣಿಸಿಲ್ಲ. ದ್ವಿಸದಸ್ಯ ಪೀಠ ಅಥವಾ ಸುಪ್ರೀಂಕೋರ್ಟ್‌ಗೆ ಹೋಗುವ ಬಗ್ಗೆ ಮುಖ್ಯಮಂತ್ರಿಯವರು ಮತ್ತು ಅವರ ಕಾನೂನು ಸಲಹೆಗಾರರು ತೀರ್ಮಾನ ಮಾಡುತ್ತಾರೆ. ನಮಗೆ ನ್ಯಾಯ ಸಿಕ್ಕಿಲ್ಲ. ಸಮಾದಾನ ತಂದಿಲ್ಲ. ಜನಪ್ರತಿನಿಧಿಗಳ ನ್ಯಾಯಾಲಯದಲ್ಲಿ ನ್ಯಾಯಯುತವಾದ ತೀರ್ಮಾನ ಬರುತ್ತದೆ ಎಂಬ ವಿಶ್ವಾಸ ಇದೆ ಎಂದು ಅಭಿಪ್ರಾಯಪಟ್ಟರು.

ಪಕ್ಷದ ಅಧ್ಯಕ್ಷರು ಮತ್ತು ಹೈಕಮಾಂಡ್ ತೆಗೆದುಕೊಳ್ಳುವ ನಿರ್ಧಾರದ ಮೇಲೆ ಮುಂದುವರಿಯುತ್ತೇವೆ.

ಬಿಜೆಪಿಯವರ ಉದ್ದೇಶವೇ ಮುಖ್ಯಮಂತ್ರಿಯವರ ರಾಜೀನಾಮೆ ತೆಗೆದುಕೊಳ್ಳಬೇಕು ಎಂಬುದು. ಅವರು ಹೋರಾಟ ಮಾಡುವುದರಲ್ಲಿ ಆಶ್ಚರ್ಯ ಪಡುವುದು ಏನೂ ಇಲ್ಲ. ಯಾವುದೇ ಕಾರಣಕ್ಕೆ ರಾಜೀನಾಮೆ ನೀಡಬೇಡಿ ಎಂದು ಮುಖ್ಯಮಂತ್ರಿಯವರಿಗೆ ಒತ್ತಾಯಿಸಿದ್ದೇವೆ. ಅವರು ರಾಜೀನಾಮೆಯನ್ನು ನೀಡುವುದಿಲ್ಲ ಎಂದು ಗೃಹ ಸಚಿವರು ಸ್ಪಷ್ಟಪಡಿಸಿದರು.

ಮುಖ್ಯಮಂತ್ರಿಯವರ ಮೇಲೆ ಪಕ್ಷದೊಳಗೆ ಯಾವುದೇ ರೀತಿಯ ಒತ್ತಡವಿಲ್ಲ. ಬಿಜೆಪಿಯವರು ಪದೇಪದೆ ರಾಜೀನಾಮೆ ಕೊಡಬೇಕು ಎಂದು ಹೇಳುತ್ತಿರುವುದರಿಂದ, ರಾಜೀನಾಮೆ ನೀಡುವುದಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪುನರುಚ್ಚರಿಸಿದ್ದಾರೆ.


ಪಕ್ಷದೊಳಗೆ ಒತ್ತಡವಿರುವ ರೀತಿಯ ವ್ಯತ್ಯಾಸಗಳಾಗಲಿ, ಭಾವನೆಗಳಾಗಲಿ ಇಲ್ಲ. ಹೈಕಮಾಂಡ್ ನಿಮ್ಮ ಜೊತೆಗಿದೆ ಎಂದು ಕೆ.ಸಿ.ವೇಣುಗೋಪಾಲ್ ಮತ್ತು ಸುರ್ಜೇವಾಲಾ ಅವರು ಹೇಳಿದ್ದಾರೆ ಎಂದು ಪರಮೇಶ್ವರ್ ಸ್ಪಷ್ಟಪಡಿಸಿದರು.

ಹೈಕೋರ್ಟ್‌ನಿಂದ ರಾಜ್ಯಪಾಲರಿಗೆ ಬಲ ಬಂದಿರಬಹುದು. ಅದನ್ನು ಎಲ್ಲರಿಗೂ ಅನ್ವಯಿಸಬೇಕು. ಎಚ್.ಡಿ. ಕುಮಾರಸ್ವಾಮಿ, ಮುರುಗೇಶ್ ನಿರಾಣಿ, ಶಶಿಕಲಾ ಜೊಲ್ಲೆ, ಜನಾರ್ದನ ರೆಡ್ಡಿ ಅವರಿಗೂ ಅನ್ವಯಿಸಬೇಕಲ್ಲವೇ? ಬಲ ಬಂದಿದೆ ಅಂತ ಹೇಳಿ ಒಬ್ಬರಿಗೆ, ಒಂದು ವರ್ಗಕ್ಕೆ ಸೀಮಿತ ಮಾಡುವುದು ಸರಿ ಕಾಣಿಸುವುದಿಲ್ಲ. ಅದು ನ್ಯಾಯ ಅಂತಲೂ ಅನ್ನಿಸುವುದಿಲ್ಲ ಎಂದು ಡಾ.ಜಿ.ಪರಮೇಶ್ವರ್ ಹೇಳಿದರು.

ರಾಜ್ಯಪಾಲರು ಕಡತಗಳನ್ನು ಲೋಕಾಯುಕ್ತಕ್ಕೆ ವಾಪಸ್ ಕಳಹಿಸಿರಬಹುದು. ಲೋಕಾಯುಕ್ತದವರು ಸ್ಪಷ್ಟನೆ ನೀಡಿ, ಆ ಕಡತಗಳನ್ನು ರಾಜ್ಯಪಾಲರಿಗೆ ವಾಪಸ್ ಕಳುಹಿಸಿದ್ದಾರೆ. ರಾಜ್ಯಪಾಲರು ತಮ್ಮ ಬಲವನ್ನು ಈ ಪ್ರಕರಣಗಳಿಗೂ ಉಪಯೋಗಿಸಬೇಕು ಎಂದರು.

ಸಿದ್ದರಾಮಯ್ಯನವರು ವೀಕ್ ಆಗಿದ್ದಾರಾ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿ, ನಿಮಗೆ ಹಾಗೆ ಅನ್ನಿಸುತ್ತಾ? ನಮಗೆ ಏನು ಆ ರೀತಿ ಅನ್ನಿಸುವುದಿಲ್ಲ. ಸಿದ್ದರಾಮಯ್ಯನವರು ಗುಂಡುಕಲ್ಲು ಇದ್ದ ಹಾಗೆ ಇದ್ದಾರೆ ಎಂದು ಗೃಹ ಸಚಿವ ಡಾ.ಜಿ. ಪರಮೇಶ್ವರ್ ತಿಳಿಸಿದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

26.09.2024 ಗುರುವಾರ, ಮಳೆ ನಕ್ಷತ್ರ: ಉತ್ತರಾ, 13.09.2024ರಿಂದ 26.09.2024
ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಭಾದ್ರಪದ ಮಾಸ, ಕೃಷ್ಣ ಪಕ್ಷ,
ತಿಥಿ: ನವಮಿ, ನಕ್ಷತ್ರ: ಪುನರ್ವಸು, ರಾಹುಕಾಲ : ಮಧ್ಯಾಹ್ನ 1.30 ರಿಂದ 3 ಗಂಟೆಯವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಸಂಧಿವಾತ, ಮಂಡಿ ನೋವು, ಕೀಲು ನೋವು ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ, ಬೆಳಗ್ಗೆ 9 ಗಂಟೆಯಿಂದ.

■ **ಕಾವೇರಿ ಆಯುರ್ವೇದ ಆಸ್ಪತ್ರೆ:** ಮಕ್ಕಳಲ್ಲಿ ಕಂಡು ಬರುವ ನೆಗಡಿ, ಕೆಮ್ಮು ಮತ್ತು ಅಸ್ತಮ ಕಾಯಿಲೆಗೆ ಉಚಿತ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 9 ಗಂಟೆಯಿಂದ.

■ **ರಾಮ್‌ಸನ್ಸ್ ಪ್ರತಿಷ್ಠಾನ :** ಬೊಂಬೆ ಮನೆ, ದಸರೆಯ ಬೊಂಬೆ ಪ್ರದರ್ಶನದ 20ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ಆಮ್ರಪಾಲಿ ಸೀರೆ ಮಳಿಗೆಯ ಮೇಲೆ, ನಜರ್‌ಬಾದ್, ಬೆಳಗ್ಗೆ 10ರಿಂದ ಸಂಜೆ 7 ರವರೆಗೆ.

■ **ಪ್ರೀತಿ ಕ್ಯಾನ್ಸರ್ ಸೆಂಟರ್ :** ಉಚಿತ ಕ್ಯಾನ್ಸರ್ ಸೆಂಟರ್, ಸ್ಥಳ: ಪ್ರೀತಿ ಕ್ಯಾನ್ಸರ್ ಸೆಂಟರ್, ಲಕ್ಷ್ಮೀಪುರಂ, ಬೆಳಗ್ಗೆ 10 ರಿಂದ

■ **ಭಾರತ ಸರಕಾರದ ಜವಳಿ ಮಂತ್ರಾಲಯ, ಗುಜರಾತ್ ರಾಜ್ಯ ಕೈಮಗ್ಗ ಮತ್ತು ಕರಕುಶಲ ಅಭಿವೃದ್ಧಿ ನಿಗಮ :** ಗಾಂಧಿ ಶಿಲ್ಪ ಬಜಾರ್ ಹಾಗೂ ಗರ್ವಿ ಗುರ್ಜರಿ ಕರಕುಶಲ ವಸ್ತುಪ್ರದರ್ಶನ ಮತ್ತು ಮಾರಾಟ, ಸ್ಥಳ: ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್, ಹೆಬ್ಬಾಳು ಕೈಗಾರಿಕಾ ವಲಯ, ಬೆಳಗ್ಗೆ 10 ರಿಂದ.

■ **ಶ್ರೀ ನಟರಾಜ ಮಹಿಳಾ ವಸತಿ ಪ್ರಥಮ ದರ್ಜೆ ಕಾಲೇಜು, ಕನ್ನಡ ವಿಭಾಗ:** ತೇಜಸ್ವಿ ಸಾಹಿತ್ಯ ಚಿಂತನೆ ಹಾಗೂ ನಾಡಹಬ್ಬ ದಸರಾ ಕವಿಗೋಷ್ಠಿ, ಸಾನ್ನಿಧ್ಯ: ಶ್ರೀ ನಟರಾಜ ಪ್ರತಿಷ್ಠಾನ ಅಧ್ಯಕ್ಷ ಶ್ರೀ ಚಿದಾನಂದ ಸ್ವಾಮಿಗಳು, ಉದ್ಘಾಟನೆ: ಹಿರಿಯ ಸಾಹಿತಿ ಪ್ರೊ.ರಾಮೇಗೌಡ (ರಾಗೌ), ಮುಖ್ಯ ಅತಿಥಿಗಳು: ಅಕ್ಕಮಹಾದೇವಿ ಸಂಶೋಧನಾ ಪೀಠ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ನಿರ್ದೇಶಕ ಪ್ರೊ. ಕವಿತಾ ರೈ, ಅಧ್ಯಕ್ಷತೆ: ಶ್ರೀ ನಟರಾಜ ಪ್ರತಿಷ್ಠಾನ ವಿಶೇಷಾಧಿಕಾರಿ ಪ್ರೊ. ಎಸ್. ಶಿವರಾಜಪ್ಪ, ಉಪಸ್ಥಿತರು: ಶ್ರೀ ನಟರಾಜ ಮಹಿಳಾ ವಸತಿ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲರಾದ ಡಾ. ಎಂ. ಶಾರದ, ಕನ್ನಡ ವಿಭಾಗದ ಮುಖ್ಯಸ್ಥ ಡಾ.ಜಿ.ಪ್ರಸಾದಮೂರ್ತಿ, ಸ್ಥಳ: ಶ್ರೀ ನಟರಾಜ ಸಭಾ ಭವನ, ಬೆಳಗ್ಗೆ 10.30ಕ್ಕೆ.

■ **ಮಹಾರಾಜ ಕಾಲೇಜು:** ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ಸ್ವಾಗತ ಮತ್ತು ಅಭಿವಿನ್ಯಾಸ ಕಾರ್ಯಕ್ರಮ, ಮುಖ್ಯ ಅತಿಥಿಗಳು : ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಸಿದ್ದಲಿಂಗು, ಅಧ್ಯಕ್ಷತೆ : ಕಾಲೇಜು ಪ್ರಾಂಶುಪಾಲ ಪ್ರೊ.ಹೆಚ್.ಸಿ. ದೇವರಾಜೇಗೌಡ, ಉಪಸ್ಥಿತರು : ಆಡಳಿತಾಧಿಕಾರಿ ಪ್ರೊ. ವಿ. ಷಣ್ಮುಗಂ, ಸಂಚಾಲಕ ಪ್ರೊ. ಷಹಸೀನಾ ಬೇಗಂ, ಸ್ಥಳ: ಶತಮಾನೋತ್ಸವ ಭವನ, ಮಹಾರಾಜ ಕಾಲೇಜು, ಬೆಳಗ್ಗೆ 10.30ಕ್ಕೆ.

■ **ಟಿ.ಕೆ. ಬಡಾವಣೆಯ ತರಳಬಾಳು ಶಿಕ್ಷಣ ಕೇಂದ್ರ :** ಶ್ರೀ ಶಿವಕುಮಾರ ಶಿವಾಚಾರ್ಯ ಸ್ವಾಮಿಗಳ ಸಂಸ್ಮರಣೆ ಅಂಗವಾಗಿ ರಕ್ತದಾನ ಶಿಬಿರ, ಸ್ಥಳ: ತರಳಬಾಳು ಶಿಕ್ಷಣ ಕೇಂದ್ರ, ಬೆಳಗ್ಗೆ 11ಕ್ಕೆ.

■ **ಜೆಎಸ್‌ಎಸ್ ನರ್ಸಿಂಗ್ ಕಾಲೇಜು, ಜೆಎಸ್‌ಎಸ್ ವಾಕ್ ಮತ್ತು ಶ್ರವಣ ಸಂಸ್ಥೆ, ಜೆಎಸ್‌ಎಸ್ ಫಿಸಿಯೋಥೆರಪಿ :** ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ 109ನೇ ಜಯಂತಿ, ಮುಖ್ಯ ಅತಿಥಿಗಳು : ಕಾರ್ಮಿಕ ಇಲಾಖೆ ಸಹಾಯಕ ಆಯುಕ್ತರಾದ ಶ್ರೀಮತಿ ಎಸ್.ಆರ್. ವೀಣಾ, ಮೈಸೂರು ವಿವಿ ಗಣಕ ವಿಜ್ಞಾನ ವಿಭಾಗದ ಪ್ರಾಧ್ಯಾಪಕ ಡಾ. ಡಿ.ಎಸ್. ಗುರು, ಅಧ್ಯಕ್ಷತೆ : ಜೆಎಸ್‌ಎಸ್ ವೈದ್ಯಕೀಯ ಶಿಕ್ಷಣ ವಿಭಾಗದ ನಿರ್ದೇಶಕ ಆರ್. ಮಹೇಶ್, ಸ್ಥಳ: ಶ್ರೀ ರಾಜೇಂದ್ರ ಸ್ವಾಮೀಜಿ ಶತಮಾನೋತ್ಸವ ಸಭಾಂಗಣ, ಜೆಎಸ್‌ಎಸ್ ಆಸ್ಪತ್ರೆ ಆವರಣ, ಬೆಳಗ್ಗೆ 11ಕ್ಕೆ.

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀಮದ್ಭಗವದ್ಗೀತಾ ಕುರಿತು ಉಪನ್ಯಾಸ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

ಹುಣಸೂರಿನಲ್ಲಿಂದು

■ **ಸಾರ್ವಜನಿಕ ಭಕ್ತ ವಿನಾಯಕ ಮಂಡಲಿ :** 57ನೇ ವರ್ಷದ ಗಣೇಶೋತ್ಸವ ಕಾರ್ಯಕ್ರಮದ ಅಂಗವಾಗಿ ಸಂಜೆ 7 ಗಂಟೆಗೆ ಮೈಸೂರಿನ ಜೈ ಭುವನೇಶ್ವರಿ ಕಲಾ ತಂಡದವರಿಂದ ಚಿನ್ನದ ಗೊಂಬೆ ನಾಟಕ ಕಾರ್ಯಕ್ರಮ ಸ್ಥಳ: ಮುನೇಶ್ವರ ಕಾವಲ್ ಮೈದಾನ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ಪ್ರೊ. ಮೈಸೂರು ಕೃಷ್ಣಮೂರ್ತಿ, 6.15 ಗೀತಾರಾಧನ, 6.35 ಸಂವಹನ ಸಮಾಚಾರ, ಬಾನುಲಿ ಸರಣಿ, ಪ್ರಸ್ತುತಿ : ಅಲಕಾ ಕಟ್ಟೆಮನೆ, 6.40 ಅರಿವಿನ ಶಿಖರ : ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಎಂ.ಎಸ್. ಲಕ್ಷ್ಮೀಶ, ವ್ಯಾಖ್ಯಾನ–ಡಾ. ಕಬ್ಬಿನಾಲೆ ವಸಂತ ಭಾರದ್ವಾಜ್, 6.50 ರೈತರಿಗೆ ಸಲಹೆ, 7.15 ಹಸಿರು ಹೊನ್ನು–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು : ಅರಣ್ಯ ಇಲಾಖೆ, ಕರ್ನಾಟಕ ಸರ್ಕಾರ, 8.30 ಕನ್ನಡ ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ : ನಿತ್ಯಶ್ರೀ ಮಹದೇವನ್ – ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ನೇರ ಫೋನ್ ಇನ್ ಕಾರ್ಯಕ್ರಮ–ಕಾಡಿನಲ್ಲಿನ ಕಥೆಗಳು. ಪ್ರಸ್ತುತಿ:ಜಿ. ಶಾಂತಕುಮಾರ್ **ಮಧ್ಯಾಹ್ನ:** 12.30 ದೇವರನಾಮ–ವಾಸವಿ. ಜಿ.ಎಸ್, 12.45 ಚಿತ್ರಗೀತೆಗಳು, 1.20 ಭಾವಗೀತೆಗಳು– ಜಯಂತಿ. ವಿ. ಭಟ್, 4.00 ಜನಪದ ಸಂಗೀತ, 4.30 ಕನ್ನಡ ಭಾರತಿ, 6.10 ಸಂವಹನ ಸಮಾಚಾರ–ಬಾನುಲಿ ಸರಣಿ. ಪ್ರಸ್ತುತಿ: ಅಲಕಾ ಕಟ್ಟೆಮನೆ, 6.50 ಕೃಷಿರಂಗ–ಕಿಸಾನ್ ವಾಣಿ, ಪ್ರಾಯೋಜಕರು : ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ 'ನಂ ಕಂಪನಿ' ರೈತ ಉತ್ಪಾದಕ ಸಂಸ್ಥೆಗಳ ಸಬಲೀಕರಣ ಕುರಿತ ಬಾನುಲಿ ಸರಣಿ ಅರಿಶಿನ ಹಾಗೂ ರಾಗಿ ಬೇಸಾಯ ಮತ್ತು ಮಾರಾಟ ಕುರಿತು ಸಂವಾದ. ಭಾಗವಹಿಸುತ್ತಾರೆ : ಮುತ್ತೆತ್ತರಾಯ ರೈತ ಉತ್ಪಾದಕ ಕಂಪನಿಯ ಅಧ್ಯಕ್ಷರಾದ ಸಿ.ವಿಶ್ವನಾಥ್ ಮತ್ತು ಬಿ.ಜಿ. ಪುರ ರಾಗಿ ರೈತ ಉತ್ಪಾದಕ ಕಂಪನಿಯ ಅಧ್ಯಕ್ಷರಾದ ಬಿ.ಎಸ್.ಮಹದೇವಯ್ಯ, ಪ್ರಸ್ತುತಿ:ಎನ್. ಕೇಶವಮೂರ್ತಿ, 7.45 ಕನ್ನಡದಲ್ಲಿ ಭಾಷಣ, 8.00 ಯುವವಾಣಿ, 10.00 ನಾಟಕ :ರಂಗ ಜಂಗಮ, ರಚನೆ–ಎಸ್. ರಾಮನಾಥ್, ನಿರ್ದೇಶನ ಹಾಗೂ ನಿರ್ವಾಣ– ಪ್ರಭುಸ್ವಾಮಿ ಮಳಿಮಠ್, 10.30 ಸವಿನೆನಪು

ಯುವ ಸಂಭ್ರಮದಲ್ಲಿ ಸಾಹಸ, ನೃತ್ಯ ಪ್ರದರ್ಶನದ ರಸದೌತಣ

ಕಿಕ್ಕಿರಿದು ಸೇರಿದ ಜನಸಮೂಹಕ್ಕೆ ಭರಪೂರ ಮನರಂಜನೆ



ಮೈಸೂರು ಗಾಂಧಿನಗರ ಮಹದೇವಪುರ ರಸ್ತೆ ಶ್ರೀ ಶಿವಯೋಗಿ ಸ್ವಾಮಿ ಸಂಯುಕ್ತ ಪದವಿ ಪೂರ್ವ ಕಾಲೇಜು ತಂಡದ ಕನ್ನಡ ನೃತ್ಯ ರೂಪಕ



ಮಡಿಕೇರಿ ಮಹದೇವ ಬೆಟ್ಟದ ಶ್ರೀ ರಾಜೇಶ್ವರಿ ವಿದ್ಯಾಲಯ ತಂಡದಿಂದ ಭಾರತೀಯ ಯೋಧರ ಸ್ಮರಣೆ



ಮಳೆಯ ನಡುವೆ ಕಿಕ್ಕಿರಿದು ತುಂಬಿದ್ದ ಯುವ ಸಂಭ್ರಮ ವೇದಿಕೆ

ಮೈಸೂರು, ಸೆ.25(ಎಂಕೆ)– ಇಬ್ಬನಿ ನಡುವೆ ರಂಗೇರಿಸಿದ ಯುವ ಸಂಭ್ರಮದಲ್ಲಿ ಮುಗಿಲು ಮುಟ್ಟಿದ ಕನ್ನಡ ಸಂಭ್ರಮ... ಜಾನಪದ ಕಲಾಪ್ರಕಾರಗಳ ರಮಣೀಯ ನೃತ್ಯದೊಂದಿಗೆ ಮಲ್ಲಗಂಬ ಸಾಹಸ ನೋಡುಗರನ್ನು ನಿಬ್ಬೆರಗಾಗಿಸಿತು...!

ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವದ ಯುವ ವೇದಿಕೆಯಾದ ಯುವ ಸಂಭ್ರಮದಲ್ಲಿ ಬುಧವಾರ ಕನ್ನಡದ ಸಂಭ್ರಮ ಮನೆ ಮಾಡಿತ್ತು. ಜಾನಪದ ನೃತ್ಯದ ಸೊಬಗು, ಮಲ್ಲಗಂಬ ಸಾಹಸ ಪ್ರದರ್ಶನ ಯುವ ಸಮೂಹವನ್ನು ಎದ್ದು... ಬಿದ್ದು ಕುಣಿಯುವಂತೆ ಮಾಡಿತು.

ಮೈಸೂರು ಗಾಂಧಿನಗರ ಮಹದೇವಪುರ ರಸ್ತೆ ಶ್ರೀ ಶಿವಯೋಗಿ ಸ್ವಾಮಿ ಸಂಯುಕ್ತ ಪದವಿ ಪೂರ್ವ ಕಾಲೇಜು, ಟಿ.ನರಸೀಪುರ ಜ್ಞಾನೋದಯ ಸಂಸ್ಥೆ ನರ್ಸಿಂಗ್, ಮಂಡ್ಯ ಕಿರುಗಾವಲು ಭಾರತಿ ಪದವಿ ಪೂರ್ವ ಕಾಲೇಜು, ಬೆಟ್ಟದಪುರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಿಡದಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಂಡ್ಯ ಭಾರತೀ ಕಾಲೇಜು, ಮೈಸೂರು ವಿಜಯನಗರ 2ನೇ ಹಂತದ ಸಮರ್ಥನಂ ಬುದ್ಧಿ ವಿಕಲಚೇತನ ಮಕ್ಕಳ ಶಾಲೆ, ವಿದ್ಯಾವರ್ಧಕ ಕೈಗಾರಿಕಾ ತರಬೇತಿ ಸಂಸ್ಥೆಯ ತಂಡಗಳು ಕನ್ನಡ ನೆಲ, ಜಲ ಭಾಷೆಯ ಅಭಿಮಾನ ನೃತ್ಯದೊಂದಿಗೆ ಕನ್ನಡ ಸಂಭ್ರಮವನ್ನು ಇಮ್ಮಡಿಗೊಳಿಸಿದರು.

ಹಾಗೆಯೇ ಕೊಡಗಿನ ಕೊಡ್ಲಿಪೇಟೆ ಪ್ರಥಮ ದರ್ಜೆ ಕಾಲೇಜು ತಂಡ ಜಾನಪದ ಕಲಾಪ್ರಕಾರಗಳ ನೃತ್ಯ ಪ್ರದರ್ಶನ ನೀಡಿದರೆ, ದೇವಲಾಪುರ ಜೆಎಸ್‌ಎಸ್ ಪದವಿ ಪೂರ್ವ ಕಾಲೇಜು ತಂಡ ದೇವ ಶ್ರೀ ಗಣೇಶನ ಸ್ಮರಿಸಿದರು. ಚಾ.ನಗರ ನಿಸರ್ಗ ಪದವಿ ಪೂರ್ವ ಕಾಲೇಜು ದೇಶದಲ್ಲಿನ ವಿವಿಧ ಸಾಂಸ್ಕೃತಿಕ ನೃತ್ಯಪ್ರಕಾರಗಳ ಮೂಲಕ ವಂದೇ ಮಾತರಂ ಸಂದೇಶ ಸಾರಿದರೆ, ಹೆಚ್.ಡಿ.ಕೋಟೆ ಶ್ರೀ ಆದಿ ಚುಂಚನಗಿರಿ ಸ್ವತಂತ್ರ ಪದವಿ ಪೂರ್ವ ಕಾಲೇಜು ತಂಡ ಹೆಣ್ಣಿನ ಮೇಲೆ ನಡೆಯುತ್ತಿರುವ ಲೈಂಗಿಕ ದೌರ್ಜನ್ಯ ಖಂಡಿಸಿ, ಹೆಣ್ಣು ಶಕ್ತಿ ಸ್ವರೂಪ ಎಂಬುದನ್ನು ಮನ ಮುಟ್ಟುವಂತೆ ತಿಳಿಸಿದರು.

ಹೊಳೆನರಸೀಪುರದ ಪಡುವಲಹಿಪ್ಪೆ ಸರ್ಕಾರಿ ಪದವಿ ಪೂರ್ವ ಕಾಲೇಜು, ಮಂಡ್ಯ ನಾಗಮಂಗಲ ಆದಿಚುಂಚನಗಿರಿ ವೈದ್ಯಕೀಯ ಮಹಾವಿದ್ಯಾಲಯ ಹಾಗೂ ಮಡಿಕೇರಿ ಮಹದೇವ ಬೆಟ್ಟದ ಶ್ರೀ ರಾಜೇಶ್ವರಿ ವಿದ್ಯಾಲಯದ ತಂಡಗಳು ಭಾರತೀಯ ಸೈನಿಕರ ತ್ಯಾಗ ಬಲಿದಾನ ಸ್ಮರಿಸುವ ನೃತ್ಯ ಸಂಯೋಜನೆಯೊಂದಿಗೆ ಯುವ ಸಮೂಹದ ಎದೆಯಲ್ಲಿ ದೇಶಭಕ್ತಿ ಕಿಡಿ ಹಚ್ಚಿದರು.

ಮಳೆಗೂ ಕುಂದದ ಸಂಭ್ರಮ: ಯುವ ಸಂಭ್ರಮ ವೇದಿಕೆಯಲ್ಲಿ ಕಿಕ್ಕಿರಿದು ತುಂಬಿದ್ದ ಯುವ ಸಮೂಹದ ಸಂಭ್ರಮ ಮಳೆ ನಡುವೆಯೂ ಮುಂದುವರೆಯಿತು. ಮಳೆಯ ಇಬ್ಬನಿಯ ನಡುವೆ ಕುಣಿದು ಕುಪ್ಪಳಿಸಿದ ಯುವಕ–ಯುವತಿಯರು ಕಾಲೇಜು ತಂಡಗಳನ್ನು ಪ್ರೋತ್ಸಾಹಿಸಿದರು.

ಪ್ರೋತ್ಸಾಹ ಧನ, ಸ್ಮರಣಿಕೆ: ನೃತ್ಯ ಪ್ರದರ್ಶನ ನೀಡಿದ ತಂಡಗಳಿಗೆ ವೇದಿಕೆಯ ಮೇಲೆಯೇ ಪ್ರೋತ್ಸಾಹ ಧನದ ಚೆಕ್, ಪ್ರಮಾಣ ಪತ್ರ ಹಾಗೂ ಯುವ ಸಂಭ್ರಮದ ಸ್ಮರಣಿಕೆ ನೀಡಿ ಅಭಿನಂದಿಸಲಾಯಿತು.

ಮೈಸೂರು ವಿಜಯನಗರ 2ನೇ ಹಂತದ ಸಮರ್ಥನಂ ಬುದ್ಧಿ ವಿಕಲ ಚೇತನ ಮಕ್ಕಳು ಹುಲಿ ವೇಷತೊಟ್ಟು ಕನ್ನಡ ಹಾಡುಗಳಿಗೆ ಅಮೋಘ ನೃತ್ಯ ಪ್ರದರ್ಶನ ನೀಡಿದ್ದಕ್ಕೆ ಇಡೀ ವೇದಿಕೆ ಮೊಬೈಲ್ ಟಾರ್ಚ್ ಲೈಟ್ ಆನ್ ಮಾಡಿ ಅಭಿಮಾನ ತೋರಿದ್ದು, ಭಾವುಕವಾಗಿತ್ತು.



ದೇವ ಶ್ರೀ ಗಣೇಶನ ನೃತ್ಯ ಪ್ರದರ್ಶನ ನೀಡಿದ ದೇವಲಾಪುರ ಜೆಎಸ್‌ಎಸ್ ಪದವಿ ಪೂರ್ವ ಕಾಲೇಜು ತಂಡ

ನಿಬ್ಬೆರಗಾಗಿಸಿದ ಮಲ್ಲಗಂಬ ಸಾಹಸ, ಶೌರ್ಯ ಪ್ರದರ್ಶನ...



ದಿವಂಗತ ಡಾ.ಪುನೀತ್ ರಾಜ್‌ಕುಮಾರ್‌ಗೆ ಅಣ್ಣಾಬಾಂಡ್ ಚಿತ್ರದಲ್ಲಿ ಮಲ್ಲಗಂಬ ಸಾಹಸ ಹೇಳಿಕೊಟ್ಟಿದ್ದ ಧಾರವಾಡ ಜಿಲ್ಲೆಯ ಕಮೋಡಳ್ಳಿ ಗ್ರಾಮ ಪಂಚಾಯತಿಯ ತಂಡದ ಮಲ್ಲಗಂಬ ಪ್ರದರ್ಶನ ನೋಡುಗರನ್ನು ನಿಬ್ಬೆರಗಾಗಿಸಿತು. ಒಂದೆಡೆ ಕಂಬದ ಮೇಲೆ ಸಾಹಸ ತೋರಿದರೆ, ಮತ್ತೊಂದೆಡೆ ಹಗ್ಗವನ್ನಿಡಿದು ಶೌರ್ಯ ಪ್ರದರ್ಶನ ನೀಡಿದರು. ವೀರಭದ್ರ ಆಸನ, ಭಜರಂಗಿ ಪಿರಮಿಡ್, ಧರ್ಮಧ್ವಜ, ಭಜರಂಗಿ ವಿಜಯ, ಚಕ್ರಾಸನ ಸೇರಿದಂತೆ ಹತ್ತು–ಹಲವು ಭಂಗಿಗಳ ಪ್ರದರ್ಶನ ನೀಡಿದ ಮಲ್ಲಗಂಬ ವೀರರು, ಇಡೀ ಯುವ ಸಂಭ್ರಮ ವೇದಿಕೆಯ ನೋಡುಗರನ್ನು ನಿಬ್ಬೆರಗಾಗಿಸಿದರು.

ಮಾಜಿ ಮೇಯರ್ ಸಂದೇಶ್ ಸ್ವಾಮಿ ಹುಟ್ಟುಹಬ್ಬಕ್ಕೆ ಶುಭಾಶಯ...



ಬುಧವಾರ ತಮ್ಮ ಹುಟ್ಟುಹಬ್ಬ ಆಚರಿಸಿಕೊಂಡ ಮಾಜಿ ಮೇಯರ್ ಸಂದೇಶ್ ಸ್ವಾಮಿ ಅವರನ್ನು ನಗರಪಾಲಿಕೆ ಮಾಜಿ ಸದಸ್ಯ ಮಾದೇಶ್, ಯುವ ಮುಖಂಡರಾದ ಚರಣ್‌ರಾಜ್, ಭಾನುಪ್ರಕಾಶ್, ವಿಕ್ರಂ ಅಯ್ಯಂಗಾರ್, ಮಹೇಂದ್ರ ಎಂ.ಶೈವ, ಮಹಾನ್ ಅಚ್ಚು, ಭರತ್ ರಾಜ್, ವಿಶ್ವನಾಥ್ ಹಾಗೂ ಇನ್ನಿತರರು ಅಭಿನಂದಿಸಿ, ಶುಭಾಶಯ ಕೋರಿದರು.

ಖಾಸಗಿ ವೇದಿಕೆಗಳು ಕೋರ್ಟ್‌ನ ಲೈವ್‌ಸ್ಟ್ರೀಮ್ ವಿಡಿಯೋಗಳನ್ನು ಬಳಸಕೂಡದು

ಬೆಂಗಳೂರು: ನ್ಯಾಯಾಲಯ ಕಲಾಪದ ಲೈವ್ ಸ್ಟ್ರೀಮ್ ವಿಡಿಯೋಗಳನ್ನು ಯಾವುದೇ ಖಾಸಗಿ ವೇದಿಕೆಗಳು ಬಳಸಕೂಡದು. ಈಗಾಗಲೇ ಬಳಸಿರುವ ವಿಡಿಯೋಗಳನ್ನು ಕೂಡಲೇ ತೆಗೆದು ಹಾಕುವಂತೆ ಹೈಕೋರ್ಟ್ ಕಟ್ಟುನಿಟ್ಟಿನ ಆದೇಶ ಹೊರಡಿಸಿದೆ.

ಹಣ ಮಾಡುವ ಉದ್ದೇಶದಿಂದ ಹೈಕೋರ್ಟ್‌ನ ಲೈವ್ ಸ್ಟ್ರೀಮ್ ವಿಡಿಯೋಗಳನ್ನು ಮನಸೋ ಇಚ್ಛೆ ಎಡಿಟ್ ಮಾಡಿ ಪ್ರಸಾರ ಮಾಡುತ್ತಿರುವುದಕ್ಕೆ ಆಕ್ಷೇಪಿಸಿ ಬೆಂಗಳೂರು ವಕೀಲರ ಸಂಘ ಅರ್ಜಿ ಸಲ್ಲಿಸಿದ್ದರು. ಈ ಅರ್ಜಿಯ ವಿಚಾರಣೆಯನ್ನು ನ್ಯಾಯಮೂರ್ತಿ ಹೇಮಂತ್ ಚಂದನ್ ಗೌಡರ್ ಅವರಿದ್ದ ಏಕಸದಸ್ಯ ಪೀಠ ವಿಚಾರಣೆ ನಡೆಸಿತು. ಈ ವೇಳೆ ಯಾವುದೇ ಖಾಸಗಿ ವೇದಿಕೆಗಳು ಹೈಕೋರ್ಟ್‌ನ



ಹೈಕೋರ್ಟ್ ಆದೇಶ

ಲೈವ್‌ಸ್ಟ್ರೀಮ್ ವಿಡಿಯೋಗಳನ್ನು ಬಳಸಕೂಡದು. 2022ರ ಜ.1ರಂದು ರಾಜ್ಯ ಹೈಕೋರ್ಟ್ ಜಾರಿಗೊಳಿಸಿರುವ ಕರ್ನಾಟಕ ನ್ಯಾಯಾಲಯ ಕಲಾಪಗಳ ನೇರಪ್ರಸಾರ ಮತ್ತು ರೆಕಾರ್ಡಿಂಗ್ ನಿಯಮಗಳು 2021ರ ನಿಯಮಗಳನ್ನು ಎಲ್ಲರೂ ಕಡ್ಡಾಯವಾಗಿ ಪಾಲನೆ ಮಾಡಬೇಕು ಎಂದು ಆದೇಶಿಸಿತು. ಅಲ್ಲದೆ, ಅರ್ಜಿಯಲ್ಲಿ ಪ್ರತಿವಾದಿಗಳಾಗಿರುವವರು ತಮ್ಮ ಡಿಜಿಟಲ್ ವೇದಿಕೆಗಳಲ್ಲಿ ಬಳಸಿರುವ ಹೈಕೋರ್ಟ್ ಲೈವ್‌ಸ್ಟ್ರೀಮ್ ವಿಡಿಯೋಗಳನ್ನು ತಕ್ಷಣ ತೆಗೆದು ಹಾಕಬೇಕೆಂದು ಸೂಚಿಸಿತು. ಈ ವೇದಿಕೆಗಳಲ್ಲಿನ ಕೋರ್ಟ್ ಕಲಾಪದ ವಿಡಿಯೋಗಳನ್ನು ಯೂಟ್ಯೂಬ್, ಫೇಸ್‌ಬುಕ್, ಎಕ್ಸ್ ಕಾರ್ಪ್‌ಗಳು ತಕ್ಷಣ ಅಳಿಸಿ ಹಾಕಬೇಕು ಎಂದು ನಿರ್ದೇಶಿಸಿತು. ಅರ್ಜಿಯಲ್ಲಿ ಪ್ರತಿವಾದಿಗಳಾದ ಮಾಹಿತಿ ಮತ್ತು ಪ್ರಸಾರ ಸಚಿವಾಲಯ, ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯ, ಕರ್ನಾಟಕ ಹೈಕೋರ್ಟ್ ರಿಜಿಸ್ಟ್ರಾರ್ ಜನರಲ್, ರಾಜ್ಯ ಸರಕಾರ, ರಾಜ್ಯ ಪೊಲೀಸ್ ಮಹಾನಿರ್ದೇಶಕರು, ಯೂಟ್ಯೂಬ್, ಫೇಸ್‌ಬುಕ್, ಎಕ್ಸ್ ಕಾರ್ಪ್, ಕಹಳೆ ನ್ಯೂಸ್, ಫ್ಯಾನ್ಸ್ ಟ್ರೋಲ್, ಪ್ರತಿಧ್ವನಿ, ಅವನಿಯಾನ ಮತ್ತು ರವೀಂದ್ರ ಜೋಶಿ ಕ್ರಿಯೇಷನ್ಸ್‌ಗಳಿಗೆ ನೋಟಿಸ್ ಜಾರಿಗೊಳಿಸಿದ ನ್ಯಾಯಾಲಯ, ಅರ್ಜಿಗೆ ಆಕ್ಷೇಪಣೆ ಸಲ್ಲಿಸುವಂತೆ ಸೂಚಿಸಿ ವಿಚಾರಣೆ ಮುಂದೂಡಿತು.

ಶಿರೂರು ಗುಡ್ಡ ಕುಸಿತ: 72 ದಿನಗಳ ನಂತರ ಕೇರಳದ ಚಾಲಕ ಅರ್ಜುನ್ ಮೃತದೇಹ ಪತ್ತೆ

ಕಾರವಾರ: ಶಿರೂರು ರಾಷ್ಟ್ರೀಯ



ಹೆದ್ದಾರಿಯಲ್ಲಿ ಗುಡ್ಡ ಕುಸಿತದ ವೇಳೆ ನಾಪತ್ತೆಯಾಗಿದ್ದ ಕೇರಳ ಮೂಲದ ಚಾಲಕ ಅರ್ಜುನ್ ಮೃತದೇಹ ಬರೋಬ್ಬರಿ 72 ದಿನಗಳ ಬಳಿಕ ಪತ್ತೆಯಾಗಿದೆ.

ಜುಲೈ 16ರಂದು ಸಂಭವಿಸಿದ್ದ ಗುಡ್ಡ ಕುಸಿತದಲ್ಲಿ 11 ಮಂದಿ ಮಣ್ಣಿನಲ್ಲಿ ಕೊಚ್ಚಿ ಹೋಗಿದ್ದರು. ಆ ಪೈಕಿ 8 ಮಂದಿ ಮೃತ ದೇಹ ಪತ್ತೆಯಾಗಿತ್ತು. ಆದರೆ ಕೇರಳ ಮೂಲದ ಲಾರಿ ಚಾಲಕ ಅರ್ಜುನ್, ಶಿರೂರಿನ ಲೋಕೇಶ್ ನಾಯ್ಕ ಹಾಗೂ ಜಗನ್ನಾಥ ನಾಯ್ಕ ಎಂಬುವವರಿಗಾಗಿ ಹುಡುಕಾಟ ನಡೆಸಲಾಗಿತ್ತು. ಇದೀಗ ಲಾರಿಯೊಳಗೆ ಅರ್ಜುನನ ಮೃತದೇಹ ಎರಡು ತುಂಡಾಗಿ ಪತ್ತೆ ಪತ್ತೆಯಾಗಿದೆ.

ಗಂಗಾವಳಿ ನದಿಯಿಂದ ರಕ್ಷಣಾ ಸಿಬ್ಬಂದಿ ಶೋಧ ಕಾರ್ಯಾಚರಣೆ ನಡೆಸುತ್ತಿದ್ದರು. ಇಂದು ಅರ್ಜುನ್ ಚಲಾಯಿಸುತ್ತಿದ್ದ ಲಾರಿ ಪತ್ತೆಯಾಗಿತ್ತು. ಇದನ್ನು ಮೇಲೆತ್ತುವ ವೇಳೆ ಲಾರಿಯಲ್ಲೇ ಅರ್ಜುನ್ ಮೃತದೇಹ ಪತ್ತೆಯಾಗಿದೆ. ಇನ್ನು ಗುಡ್ಡ ಕುಸಿತದ ರಭಸಕ್ಕೆ ನದಿಗೆ ಬಿದ್ದು ಲಾರಿ ನಜ್ಜುಗುಜ್ಜಾಗಿದೆ. ಇದೇ ವೇಳೆ ಮತ್ತೊಂದು ಮೃತದೇಹ ಪತ್ತೆಯಾಗಿದ್ದು ಅದು ಯಾರು ಎಂಬುದು ಇನ್ನಷ್ಟೇ ಪತ್ತೆಯಾಗಬೇಕಿದೆ. ಲಾರಿ ಕ್ಯಾಬಿನ್‌ನಲ್ಲಿ ಶವ ಪತ್ತೆಯಾಗಿದೆ ಎಂದು ಕಾರವಾರದ ಪೊಲೀಸ್ ವರಿಷ್ಠಾಧಿಕಾರಿ ನಾರಾಯಣ ಎಂ ತಿಳಿಸಿದ್ದಾರೆ. ಅರ್ಜುನ್ ಶವ ಪತ್ತೆಯಾಗುವುದರೊಂದಿಗೆ ಸಾವಿನ ಸಂಖ್ಯೆ ಒಂಬತ್ತಕ್ಕೆ ಏರಿಕೆಯಾಗಿದೆ.

ಬೆಂಗಳೂರಿನಲ್ಲಿ ಮಹಿಳೆ ಹತ್ಯೆ ಪ್ರಕರಣ

ಒಡಿಶಾದಲ್ಲಿ ಆರೋಪಿ ಪತ್ತೆಗೆ ತಂಡ ರವಾನೆ

ಬೆಂಗಳೂರು: ಬೆಂಗಳೂರಿನ ವೈಯಾಲಿ ಕಾವಲ್ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಮಹಿಳೆಯೊಬ್ಬರನ್ನು ಬರ್ಬರವಾಗಿ ಹತ್ಯೆ ಮಾಡಿ 50 ತುಂಡುಗಳಾಗಿ ಕತ್ತರಿಸಿ ಫ್ರೀಡ್ಜ್‌ನಲ್ಲಿಟ್ಟ ಆರೋಪಿಯ ಬಗ್ಗೆ ಪೊಲೀಸರಿಗೆ ಮಾಹಿತಿ ಇದೆ ಎಂದು ಗೃಹ ಸಚಿವ ಜಿ. ಪರಮೇಶ್ವರ್ ಅವರು ಬುಧವಾರ ಹೇಳಿದ್ದಾರೆ.

ಹತ್ಯೆಯ ನಂತರ ಆರೋಪಿ ಒಡಿಶಾದಲ್ಲಿ ತಲೆಮರೆಸಿಕೊಂಡಿದ್ದು, ಪ್ರಕರಣವನ್ನು ಭೇದಿಸಲು ರಚಿಸಲಾದ ತಂಡಗಳನ್ನು ಅಲ್ಲಿಗೆ ಕಳುಹಿಸಲಾಗಿದೆ. ಈ ಹತ್ಯೆಯು ಇಡೀ ಬೆಂಗಳೂರನ್ನು ಬೆಚ್ಚಿಬೀಳಿಸಿದ್ದರಿಂದ ನಾವು ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ್ದೇವೆ ಎಂದು ತಿಳಿಸಿದ್ದಾರೆ. ಈಗಾಗಲೇ ಪೊಲೀಸರು ಆರೋಪಿ ಒಡಿಶಾದಲ್ಲಿರುವ ಬಗ್ಗೆ ಮಾಹಿತಿ ಪಡೆದಿದ್ದಾರೆ ಮತ್ತು ಮೂರ್ನಾಲ್ಕು ಪೊಲೀಸ್ ತಂಡಗಳನ್ನು ಅಲ್ಲಿಗೆ ಕಳುಹಿಸಲಾಗಿದೆ. ಆರೋಪಿ ತಾನು ಇರುವ ಸ್ಥಳಗಳನ್ನು ಬದಲಾಯಿಸುತ್ತಿದ್ದಾನೆ. ಆರೋಪಿಯನ್ನು ಬಂಧಿಸಿದ ನಂತರ, ನಮಗೆ ಹೆಚ್ಚಿನ ಮಾಹಿತಿ ಸಿಗುತ್ತದೆ. ಸದ್ಯ ಪ್ರಕರಣ ಸಂಬಂಧ ಎರಡು–ಮೂರು ಜನರನ್ನು ವಶಕ್ಕೆ ತೆಗೆದುಕೊಳ್ಳಲಾಗಿದೆ ಎಂದು ಗೃಹ ಸಚಿವ ಡಾ.ಪರಮೇಶ್ವರ್ ತಿಳಿಸಿದರು.

ಶಾಲಾ ಮಕ್ಕಳಿಗೆ ವಾರದ ಆರು ದಿನ ಮೊಟ್ಟೆ ನೀಡುವ ಕಾರ್ಯಕ್ಕೆ ಚಾಲನೆ

- ಅಜೀಂ ಪ್ರೇಮ್‌ಜೀ ಹಣಕಾಸು ನೆರವಿನಿಂದ ಹೆಚ್ಚುವರಿ 4 ದಿನ ಮೊಟ್ಟೆ ಭಾಗ್ಯ
- ಯೋಜನೆ ಸದ್ಬಳಕೆಗೆ ಉಸ್ತುವಾರಿ ಸಚಿವ ಹೆಚ್.ಸಿ.ಮಹದೇವಪ್ಪ ಕರೆ

ಮೈಸೂರು,ಸೆ.25(ಎಂಟಿವೈ)– ಮೈಸೂರು ಜಿಲ್ಲೆಯಲ್ಲಿ 1ರಿಂದ 10ನೇ ತರಗತಿಯ ಎಲ್ಲಾ ವಿದ್ಯಾರ್ಥಿಗಳಿಗೆ ಬಿಸಿಯೂಟ ಯೋಜನೆಯೊಂದಿಗೆ ಅಜೀಂ ಪ್ರೇಮ್‌ಜಿ ಫೌಂಡೇಷನ್ ವಾರದ ಆರೂ ದಿನವೂ ಮೊಟ್ಟೆ ಅಥವಾ ಬಾಳೆಹಣ್ಣು ವಿತರಿಸುವ ಕಾರ್ಯಕ್ರಮಕ್ಕೆ ಜಿಲ್ಲಾ ಉಸ್ತುವಾರಿ ಡಾ.ಹೆಚ್.ಸಿ.ಮಹದೇವಪ್ಪ ಚಾಲನೆ ನೀಡಿದರು.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಮಹಾರಾಜ ಪ್ರೌಢಶಾಲೆಯ ಆವರಣದಲ್ಲಿ ಜಿಲ್ಲಾ ಪಂಚಾಯತ್, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಹಾಗೂ ಅಜೀಂ ಪ್ರೇಮ್‌ಜಿ ಫೌಂಡೇಷನ್ ವತಿಯಿಂದ ರಾಜ್ಯ ಸರ್ಕಾರದ ಪಿಎಂ ಪೋಷಣ್–ಮಧ್ಯಾಹ್ನದ ಬಿಸಿಯೂಟ ಯೋಜನೆಯಡಿ ಆಯೋಜಿಸಿದ್ದ 1ರಿಂದ 10ನೇ ತರಗತಿಯ ವಿದ್ಯಾರ್ಥಿಗಳಿಗೆ ವಾರದ 6 ದಿನದಲ್ಲೂ ಮೊಟ್ಟೆ, ಬಾಳೆಹಣ್ಣು ಹಾಗೂ ಕಡಲೇ ಮಿಠಾಯಿ ನೀಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

ಈ ವೇಳೆ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಮಾತನಾಡಿ, ಶಾಲಾ ಮಕ್ಕಳಲ್ಲಿ ಅಪೌಷ್ಟಿಕತೆ ಹೋಗಲಾಡಿಸುವ ನಿಟ್ಟಿನಲ್ಲಿ ಈ ಹಿಂದೆ ಎಸ್.ಎಂ.ಕೃಷ್ಣ ನೇತೃತ್ವದ ಕಾಂಗ್ರೆಸ್ ಸರ್ಕಾರ ಶಾಲಾ ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟ ಯೋಜನೆಯನ್ನು ಜಾರಿಗೊಳಿಸಿದರು. ಇದೀಗ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಮಕ್ಕಳಿಗೆ ವಾರದಲ್ಲಿ ಎರಡು ಮೊಟ್ಟೆ, ಹಾಲು, ರಾಗಿ ಮಾಲ್ಟ್ ನೀಡುವ ಕಾರ್ಯಕ್ರಮವನ್ನು ಜಾರಿಗೆ ತಂದು ಮಕ್ಕಳಲ್ಲಿರುವ ಅಪೌಷ್ಟಿಕತೆ ಹೋಗಲಾಡಿಸಲು ಮುಂದಾಗಿದ್ದರು. ಈ ಮಧ್ಯೆ ಉದ್ಯಮಿ ಅಜೀಂ ಪ್ರೇಮ್ ಜೀ ಅವರು ಕರ್ನಾಟಕದಲ್ಲಿ 1ರಿಂದ 10ನೇ ತರಗತಿಯ ಶಾಲಾ ಮಕ್ಕಳಿಗೆ ನಾಲ್ಕು ದಿನ ಮೊಟ್ಟೆ ನೀಡಲು ನೆರವು ನೀಡಿದ್ದಾರೆ. ಇದರಿಂದ ರಾಜ್ಯ ಸರ್ಕಾರ ನೀಡುತ್ತಿದ್ದ 2 ದಿನ, ಅಜೀಂ ಪ್ರೇಮ್‌ಜೀ ಫೌಂಡೇಷನ್‌ನಿಂದ 4 ದಿನ ಸೇರಿ ಮಕ್ಕಳಿಗೆ ವಾರದಲ್ಲಿ 6 ದಿನ ಮೊಟ್ಟೆ ನೀಡಲಾಗುತ್ತಿದೆ ಎಂದು ತಿಳಿಸಿದರು.

ಮೈಸೂರು ಜಿಲ್ಲೆಯಲ್ಲಿ 2063 ಸರ್ಕಾರಿ ಶಾಲೆ, 246 ಅನುದಾನಿತ ಶಾಲೆಗಳ ಸಂಖ್ಯೆ ಸೇರಿದಂತೆ ಒಟ್ಟು 2309 ಶಾಲೆಗಳಿವೆ. ಎಲ್ಲಾ ಶಾಲೆಗಳಿಂದ 1,83,380 ವಿದ್ಯಾರ್ಥಿಗಳಿದ್ದು, ಅವರಲ್ಲಿ 1,54,586 (ಶೇ.84.29) ಮಕ್ಕಳು ಮೊಟ್ಟೆ ಸೇವಿಸಲಿದ್ದಾರೆ. 16,290(ಶೇ.8.88) ಮಕ್ಕಳು ಮೊಟ್ಟೆ ಬದಲು ಬಾಳೆಹಣ್ಣು ನೀಡುವಂತೆ ಕೋರಿದ್ದಾರೆ. 12,504(ಶೇ.6.81) ಮಕ್ಕಳು ಮೊಟ್ಟೆ, ಬಾಳೆಹಣ್ಣು ಬೇಡ ಕಡಲೆ ಮಿಠಾಯಿ(ಶೇಂಗಾ ಚಿಕ್ಕಿ) ಬೇಕೆಂದು ಹೆಸರು ನೋಂದಾಯಿಸಿದ್ದಾರೆ. ಈ ಕಾರ್ಯಕ್ರಮಕ್ಕಾಗಿ ಅಜೀಂ ಪ್ರೇಮ್ ಜೀ ಫೌಂಡೇಷನ್ ವತಿಯಿಂದ ಸರ್ಕಾರಕ್ಕೆ 1591,60,14,000(ಸಾವಿರದ ಐದುನೂರ ತೊಂಭತ್ತೊಂದು ಕೋಟಿ ಅರವತ್ತು ಲಕ್ಷದ ಹದಿನಾರು ಸಾವಿರ) ರೂ. ಧನ ಸಹಾಯ ನೀಡಿದ್ದಾರೆ. ಶೈಕ್ಷಣಿಕ ಸಾಲಿನಲ್ಲಿ 244 ದಿನ ತರಗತಿ ನಡೆಯಲಿದ್ದು, ಅದರಲ್ಲಿ ರಾಜ್ಯ ಸರ್ಕಾರ 80 ದಿನ ಮೊಟ್ಟೆ ವಿತರಿಸಿದರೆ, 164 ದಿನ ಅಜೀಂ ಪ್ರೇಮ್ ಜೀ ಫೌಂಡೇಷನ್ ನೀಡಿದ ಅನುದಾನದಲ್ಲಿ ನೀಡಲಾಗುತ್ತದೆ. ಜಿಲ್ಲೆಯಲ್ಲಿ ಮಕ್ಕಳಿಗೆ ವಾರದ 6 ದಿನ ಮೊಟ್ಟೆ ಕೊಡಲು ರಾಜ್ಯ ಸರ್ಕಾರ 8,80,22,400 ರೂ. ವೆಚ್ಚ ಮಾಡಿದರೆ, ಅಜೀಂ ಪ್ರೇಮ್‌ಜೀ ಫೌಂಡೇಷನ್ ವತಿಯಿಂದ 17,60,44,800 ರೂ. ವಿನಿಯೋಗಿಸಲಿದೆ ಎಂದರು.

ಕಾರ್ಯಕ್ರಮದಲ್ಲಿ ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಜಿ.ಪಂ. ಸಿಇಓ ಕೆ.ಎಂ.ಗಾಯತ್ರಿ, ಅಜೀಂ ಪ್ರೇಮ್ ಜೀ ಫೌಂಡೇಶನ್‌ನ ಮೀರಾ, ಡಿಡಿಪಿಐ ಜವರೇಗೌಡ, ಡಯಟ್ ಪ್ರಾಂಶುಪಾಲ ನಾಗರಾಜಯ್ಯ, ಪ್ರಧಾನ ಮಂತ್ರಿ ಪೋಷಣಾ ಶಕ್ತಿ ನಿರ್ಮಾಣ್ ಯೋಜನೆಯ (ಜಿಪಂ) ಶಿಕ್ಷಣಾಧಿಕಾರಿ ಕೃಷ್ಣ, ಮಹದೇವಯ್ಯ, ಸೋಮೇಗೌಡ, ಅರುಣ್ ಕುಮಾರ್, ರಾಜೇಶ್, ಗುಂಡಣ್ಣ, ಆನಂದ್ ಕ್ಷೇತ್ರ ಶಿಕ್ಷಣಾಧಿಕಾರಿಗಳು ಇತರರು ಉಪಸ್ಥಿತರಿದ್ದರು.



ಮೈಸೂರು ಜಿಲ್ಲೆಯಲ್ಲಿ ಎಲ್ಲಾ ಶಾಲೆಗಳ 1ರಿಂದ 10ನೇ ತರಗತಿಯ ವಿದ್ಯಾರ್ಥಿಗಳಿಗೆ ವಾರದಲ್ಲಿ 6 ದಿನ ಮೊಟ್ಟೆ ನೀಡುವ ಕಾರ್ಯಕ್ರಮಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಚಾಲನೆ ನೀಡಿದರು.

> “ನಮ್ಮ ಕಾಲದಲ್ಲಿ ಶಾಲೆಗೆ ಹೋಗುವಾಗ ಸರಿಯಾಗಿ ಊಟ, ತಿಂಡಿ, ಚಪ್ಪಲಿ, ಸಮವಸ್ತ್ರವೂ ಇರುತ್ತಿರಲಿಲ್ಲ. ಆದರೆ, ಈಗಿನ ಮಕ್ಕಳು ನಮ್ಮಂತೆ ತೊಂದರೆ ಎದುರಿಸಬಾರದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಕ್ಕಳಿಗೆ ಸಮವಸ್ತ್ರ, ಬಿಸಿಯೂಟ, ಮೊಟ್ಟೆ, ಹಾಲು, ಶೂ, ಪುಸ್ತಕ ಸೇರಿದಂತೆ ಇನ್ನಿತರ ಸೌಲಭ್ಯ ಒದಗಿಸುತ್ತಿದೆ. ಈ ಹಿನ್ನೆಲೆಯಲ್ಲಿ ಶಾಲಾ ಮಕ್ಕಳು ಸರ್ಕಾರದ ಸೌಲಭ್ಯ ಪಡೆದುಕೊಂಡು ಚೆನ್ನಾಗಿ ಓದಬೇಕು. ಒಳ್ಳೆಯ ಉದ್ಯೋಗ ಪಡೆದ ಬಳಿಕ ಸಮಸಮಾಜ ನಿರ್ಮಾಣ ಮಾಡಬೇಕು. ಅಂಬೇಡ್ಕರ್ ನೀಡಿರುವ ಸಂವಿಧಾನದಲ್ಲಿ ಜಾತ್ಯಾತೀತತೆಯ ಸಂದೇಶವಿದೆ. ಆದರೆ ಇತ್ತೀಚಿನ ದಿನಗಳಲ್ಲಿ ಶಾಲಾ–ಕಾಲೇಜು ಅವಧಿಯಲ್ಲಿಯೇ ಅಸಮಾನತೆಯ ವಿಷ ಬೀಜ ಬಿತ್ತಲಾಗುತ್ತಿದೆ. ಈ ಕಾರಣದಿಂದ ಮಕ್ಕಳ ಮನಸ್ಸಲ್ಲಿ ತಾರತಮ್ಯ, ಜಾತೀಯತೆ, ಮತಾಂಧತೆ ತೊಡೆದು ಹಾಕುವ ನಿಟ್ಟಿನಲ್ಲಿ ಸಂವಿಧಾನದ ಪೀಠಿಕೆ ಓದಿಸಲಾಗುತ್ತಿದೆ. ಪೀಠಿಕೆ ಓದಿದ ಬಳಿಕ ಅದರ ಅರ್ಥವನ್ನು ಮಾಡಿಕೊಳ್ಳಬೇಕು. ಆ ನಂತರ ಸಮ ಸಮಾಜ ನಿರ್ಮಾಣಕ್ಕೆ ಕೈ ಜೋಡಿಸಬೇಕು.
>
> –ಡಾ. ಹೆಚ್.ಸಿ.ಮಹದೇವಪ್ಪ

ನಕ್ಕರೆ ಅದೇ ಸ್ವರ್ಗ

ಮಗ : ಅಪ್ಪಾ, ನನ್ನನ್ನು ಶಾಲೆಗೆ ಬಿಡಲು ನೀವು ಯಾಕೆ ಬರ್ತೀರಾ? ಬೇರೆ ಮಕ್ಕಳಿಗೆಲ್ಲಾ ಬಿಡಲು ಅವರ ಅಮ್ಮಂದಿರು ಬರುತ್ತಾರೆ!

ಅಪ್ಪ : ಅದಕ್ಕೆ ಮಗ, ನಾನು ಬರೋದು!

ಮೈಸೂರು ಮಿತ್ರ

ಗುರುವಾರ, 26 ಸೆಪ್ಟೆಂಬರ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

ಇನ್ನೊಬ್ಬರ ಬಗ್ಗೆ ಏನು ನಮಗೆ ತಿಳಿದಿದೆಯೋ ಅದನ್ನು ನಂಬಬೇಕೇ ಹೊರತು ಬೇರೆಯವರಿಂದ ಕೇಳಿದ್ದನ್ನಲ್ಲ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಮಾಡಿದ ರಾಗಿ ಕೊಟ್ರೂ ಮೂರ್ಖನ ಸಹವಾಸ ಬೇಡವೆಂದಂತೆ.

ನಿಮ್ಮ ಪತ್ರಗಳು

ಪಾರಿವಾಳಗಳಿಗೆ ಧಾನ್ಯಗಳನ್ನು ಹಾಕದೆ ಪಾರಂಪರಿಕ ಕಟ್ಟಡ ಸಂರಕ್ಷಿಸಿ

ಮಾನ್ಯರೇ,

ಇಂದಿನ ದಿನಗಳಲ್ಲಿ ಮೈಸೂರು ನಗರದ ಹೃದಯ ಭಾಗಗಳಲ್ಲಿ ಪಾರಿವಾಳಗಳ ಸಂಖ್ಯೆ ವಿಪರೀತ ಹೆಚ್ಚುತ್ತಿದೆ. ಅದರಲ್ಲೂ ಮೈಸೂರು ಅರಮನೆ ಹಾಗೂ ಸಮೀಪ ನೂರಾರು ಪಾರಿವಾಳಗಳ ಸಮೂಹವೇ ಸೇರಿರುತ್ತವೆ. ಅವುಗಳಿಗೆ ಬೆಳಗಿನ ವಾಯುವಿಹಾರಿಗಳು ಧಾನ್ಯಗಳನ್ನು ತಂದು ಹಾಕುತ್ತಾರೆ. ಹಾಗಾಗಿ ಮತ್ತಷ್ಟು ಪಾರಿವಾಳಗಳ ಸಂಖ್ಯೆ ಹೆಚ್ಚಾಗಿ ಅವುಗಳ ವಾಸಸ್ಥಾನ ಪಾರಂಪರಿಕ ಕಟ್ಟಡಗಳು, ಪ್ರತಿಮೆಗಳು ಸುತ್ತ ಮುತ್ತಲಿನ ಕಟ್ಟಡಗಳಾಗಿವೆ.

ಒಂದು ವೈಜ್ಞಾನಿಕ ವರದಿಯ ಪ್ರಕಾರ ಪಾರಿವಾಳಗಳ ಹಿಕ್ಕೆಗಳಿಂದ ಕಟ್ಟಡಗಳಿಗೆ ಹಾನಿಯಾಗುತ್ತದೆ ಹಾಗೂ ಜನರ ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ. ಆದ್ದರಿಂದ ಸಾರ್ವಜನಿಕರು ಪಾರಿವಾಳಗಳಿಗೆ ಧಾನ್ಯಗಳನ್ನು ಹಾಕಬೇಡಿ. ಮೈಸೂರಿನ ಹೆಮ್ಮೆಯ ಅರಮನೆ ಹಾಗೂ ಪಾರಂಪರಿಕ ಕಟ್ಟಡಗಳನ್ನು ಸಂರಕ್ಷಿಸುವ ಕರ್ತವ್ಯ ಹಾಗೂ ಜವಾಬ್ದಾರಿ ನಮ್ಮದು. ಮೈಸೂರು ಅರಮನೆಗಳ ನಗರಿ, ಸಾಂಸ್ಕೃತಿಕ ನಗರಿ ಎಂದೆನಿಸಿಕೊಂಡು ವಿಶ್ವ ವಿಖ್ಯಾತವಾಗಿರುವುದು ಈ ನಮ್ಮ ಪಾರಂಪರಿಕ ಕಟ್ಟಡಗಳಿಂದಲೇ. ಅದನ್ನು ಸಂರಕ್ಷಿಸಿ ನಮ್ಮ ಮುಂದಿನ ಪೀಳಿಗೆಗೂ ಬಿಟ್ಟು ಹೋಗುವ ಹಾಗೂ ನಮ್ಮ ಪರಂಪರೆ ಉಳಿಸಿ ಬೆಳೆಸುವ ಗುರುತರ ಹೊಣೆ ನಮ್ಮದಲ್ಲವೇ?

–ಪುಷ್ಪಲತಾ ಫಣಿರಾಜ್, ಅಗ್ರಹಾರ, ಮೈಸೂರು.

ಆಸ್ಪತ್ರೆ ಆವರಣದಲ್ಲಿ ಸೂಕ್ತ ಸೌಲಭ್ಯ ಕಲ್ಪಿಸಿ

ಮಾನ್ಯರೆ,

ರಾಜ್ಯದ ಬಹುತೇಕ ಸರ್ಕಾರಿ ಆಸ್ಪತ್ರೆಗಳ ಆವರಣದಲ್ಲಿ ಹಣ್ಣು ಹಂಪಲುಗಳ ಮಾರಾಟ ಮಳಿಗೆ ಹಾಗೂ ಸೂಕ್ತ ಕ್ಯಾಂಟೀನ್ ವ್ಯವಸ್ಥೆ ಇಲ್ಲದಿರುವುದರಿಂದ ರೋಗಿಗಳಿಗೆ ತೊಂದರೆಯಾಗುತ್ತಿದೆ. ರೋಗಿಗಳ ಸಂಬಂಧಿಕರು ದೂರದ ಸ್ಥಳಗಳಿಗೆ ಹೋಗಿ ದುಬಾರಿ ಬೆಲೆ ತೆತ್ತು ಅವುಗಳನ್ನು ಕೊಂಡು ತರಬೇಕಾದ ಪರಿಸ್ಥಿತಿ ಇದೆ. ಇದು ತಪ್ಪಬೇಕು. ಸರ್ಕಾರವು ಹಾಪ್‌ಕಾಮ್ಸ್ ಮೂಲಕ ಇಲ್ಲಿ ರಿಯಾಯಿತಿ ದರದಲ್ಲಿ ಹಣ್ಣು ಹಂಪಲು ಮಾರಾಟ ವ್ಯವಸ್ಥೆ ಮಾಡಬೇಕು. ಜೊತೆಗೆ ಕಡಿಮೆ ಬೆಲೆಯಲ್ಲಿ ಉತ್ತಮ ಗುಣಮಟ್ಟದ ಆಹಾರ ಪೂರೈಕೆ ವ್ಯವಸ್ಥೆಯನ್ನು ಕೂಡ ಮಾಡಬೇಕು. ಇದರಿಂದ ಸಾವಿರಾರು ಮಂದಿಗೆ ಪ್ರಯೋಜನವಾಗುತ್ತದೆ.

–ಚೇತನ್ ಎನ್ ಆರ್, ಪದವಿ ವಿದ್ಯಾರ್ಥಿ, ನಗರ್ಲೆ, ನಂಜನಗೂಡು.

ಪೌರಕಾರ್ಮಿಕರನ್ನು ಭಾವನಾತ್ಮಕವಾಗಿ ಗೌರವಿಸುವ ವೇದಿಕೆಗಳು ಸೃಷ್ಟಿಯಾಗಲಿ

ಮಾನ್ಯರೇ

ಸ್ವಚ್ಛತಾ ಕಾರ್ಯದಲ್ಲಿ ತೊಡಗುವ ಪೌರಕಾರ್ಮಿಕರನ್ನು ಹಬ್ಬ ಹರಿದಿನಗಳಲ್ಲಿ ಮತ್ತು ರಾಜಕಾರಣಿಗಳ, ಉದ್ಯಮಿಗಳ ಹುಟ್ಟುಹಬ್ಬ ಹಾಗೂ ಸಂಘ ಸಂಸ್ಥೆ, ಟ್ರಸ್ಟ್‌ಗಳ ಮೂಲಕ ಸನ್ಮಾನಿಸುವುದನ್ನು ಮಾಧ್ಯಮಗಳ ಮೂಲಕ ನೋಡುತ್ತಲೇ ಇರುತ್ತೇವೆ. ಪೌರಕಾರ್ಮಿಕರು ಇಲ್ಲವೆಂದರೆ ನಗರ, ಊರು, ಗ್ರಾಮ ಸ್ವಚ್ಛತೆಯಿಂದ ಇರಲು ಸಾಧ್ಯವೇ ಇಲ್ಲ. ಆದರೂ ಅವರನ್ನು ಸಮಾಜದಲ್ಲಿ ನೋಡುವ ದೃಷ್ಟಿ ಬೇರೆ ರೀತಿಯೇ ಇರುತ್ತದೆ.

ತಮ್ಮ ಆರೋಗ್ಯದ ಹಂಗನ್ನು ತೊರೆದು ಸಮಾಜದ ಸ್ವಚ್ಛತೆಗಾಗಿ ಬಿಸಿಲು ಮಳೆ ಚಳಿ, ಗಾಳಿ ಎನ್ನದೆ ದಿನನಿತ್ಯ ಸ್ವಚ್ಛತಾ ಕಾರ್ಯ ನಡೆಸುವ ಪೌರಕಾರ್ಮಿಕರು ನಿಜವಾದ ಕಾಯಕ ಯೋಗಿಗಳು. ಇವರು ಎರಡು ಮೂರು ದಿನ ಸ್ವಚ್ಛತೆ ಮಾಡದಿದ್ದರೆ ನಗರ, ಊರು, ಕೇರಿ ಹೇಗಿರುತ್ತೇವೆ ಎಂದು ಊಹಿಸಿಕೊಳ್ಳುವುದೇ ಅಸಾಧ್ಯ

ಇಂದು ಕೆಲವರು ತಮ್ಮ ಮನೆಯ ನೈರ್ಮಲ್ಯವನ್ನು ಸ್ವಚ್ಛತೆ ಮಾಡಲು ಹಿಂದೇಟು ಹಾಕುವ ಸಂದರ್ಭದಲ್ಲಿ ಈ ಪೌರಕಾರ್ಮಿಕರು ಇಡೀ ದೇಶವನ್ನೇ ಸ್ವಚ್ಛತೆ ಮಾಡಿ ದೇಶದ ಬೆನ್ನೆಲುಬಾಗಿದ್ದಾರೆ. ಇಂತಹ ಪೌರಕಾರ್ಮಿಕರನ್ನು ಸನ್ಮಾನಿಸುವ ಕೆಲಸದ ಜೊತೆಗೆ ಅವರನ್ನು ಸರಿಸಮಾನವಾಗಿ ಗುರುತಿಸುವ ಭಾವನಾತ್ಮಕ ವಿಚಾರಗೋಷ್ಠಿಗಳ ವೇದಿಕೆಗಳು ಸೃಷ್ಟಿಯಾಗಲಿ.

–ಪಿ.ಸಿ. ಕಂಗಾಣಿ ಸೋಮು, ಕ್ಯಾತಮಾರನಹಳ್ಳಿ ಮೈಸೂರು

'ಒಂದು ದೇಶ ಒಂದು ಚುನಾವಣೆ' ಮಸೂದೆ ಜಾರಿಗೆ ವಿಪಕ್ಷಗಳು ಬೆಂಬಲಿಸಲಿ

ಮಾನ್ಯರೆ,

ಕೇಂದ್ರ ಸರ್ಕಾರ ಜಾರಿಗೆ ತರಲು ಉದ್ದೇಶಿಸಿರುವ ಬಹು ಮಹತ್ವಾಕಾಂಕ್ಷೆಯ 'ಒಂದು ದೇಶ ಒಂದು ಚುನಾವಣೆ' ಮಸೂದೆ ಜಾರಿಗೆ ವಿಪಕ್ಷಗಳು ಬೆಂಬಲ ನೀಡುವ ಮೂಲಕ ಈ ಯೋಜನೆ ಜಾರಿಗೆ ತಮ್ಮ ಸಹಕಾರ ನೀಡಲಿ. ಲೋಕಸಭೆ, ವಿಧಾನಸಭೆ ಹಾಗೂ ಸ್ಥಳೀಯ ಸಂಸ್ಥೆಗಳ ಚುನಾವಣೆಗಳನ್ನು ಏಕಕಾಲದಲ್ಲಿ ನಡೆಸುವ ಐತಿಹಾಸಿಕ ಮಸೂದೆ ಇದಾಗಿದ್ದು ನನೆಗುದಿಗೆ ಬಿದ್ದಿದ್ದ ಈ ಯೋಜನೆಗೆ ಕೇಂದ್ರ ಸಚಿವ ಸಂಪುಟ ಒಪ್ಪಿಗೆ ನೀಡಿದೆ.

ದೇಶದಲ್ಲಿ ಪದೇ ಪದೆ ನಡೆಯುವ ಚುನಾವಣಾ ಪ್ರಕ್ರಿಯೆಗಳಿಂದ ಆಗುವ ಅಧಿಕ ದುಂದುವೆಚ್ಚ ಹಾಗೂ ಆಡಳಿತ ವ್ಯವಸ್ಥೆಯ ಮೇಲೆ ಉಂಟಾಗುತ್ತಿದ್ದ ಗಂಭೀರ ಪರಿಣಾಮಗಳನ್ನು ತಡೆಗಟ್ಟಲು ಈ ಮಸೂದೆ ಸಹಕಾರಿ ಎಂದು ಹೇಳಲಾಗುತ್ತಿದೆ. ಹೀಗಾಗಿ ಒಂದೇ ಅವಧಿಯಲ್ಲಿ ಚುನಾವಣೆಗಳನ್ನು ನಡೆಸಿ ಉಳಿದ ಅವಧಿಯನ್ನು ಸಂಪೂರ್ಣ ಆಡಳಿತಕ್ಕೆ ಮೀಸಲಿಡುವ ಉದ್ದೇಶಿತ ಯೋಜನೆ ಇದಾಗಿದ್ದು ಸರ್ವಪಕ್ಷಗಳಲ್ಲಿ ಈ ಬಗ್ಗೆ ವಿಸ್ತೃತ ಚರ್ಚೆ ನಡೆದು ತಾರ್ಕಿಕ ಒಪ್ಪಂದಕ್ಕೆ ಬರುವುದು ಸೂಕ್ತವೆನಿಸುತ್ತದೆ.

ಪ್ರಮುಖ ವಿರೋಧ ಪಕ್ಷವಾಗಿರುವ ಕಾಂಗ್ರೆಸ್ ರಾಜಕೀಯ ಉದ್ದೇಶಕ್ಕೆ ಇದನ್ನು ವಿರೋಧಿಸದೇ ತನ್ನ ಬೆಂಬಲ ವ್ಯಕ್ತಪಡಿಸಲಿ. ಕಾಶ್ಮೀರದಲ್ಲಿ 370ನೇ ವಿಧಿ ರದ್ದತಿಗೂ ವಿಪಕ್ಷಗಳು ಅಪಸ್ವರ ಎತ್ತಿದ್ದವು. ಆದರೆ ಕೇಂದ್ರದ ಬಿಜೆಪಿ ಸರ್ಕಾರದ ದೃಢ ನಿರ್ಧಾರದ ಫಲವಾಗಿ ಇಂದು ಜಮ್ಮು ಮತ್ತು ಕಾಶ್ಮೀರದ ಚಿತ್ರಣವೇ ಬದಲಾಗುತ್ತಿದ್ದು ಇದೀಗ ಇಲ್ಲಿ ನಡೆಯುತ್ತಿರುವ ಮುಕ್ತ ಹಾಗೂ ನ್ಯಾಯಯುತ ಚುನಾವಣೆಗಳೇ ಇದಕ್ಕೆ ಸ್ಪಷ್ಟ ನಿದರ್ಶನವಾಗಿದೆ. ಮುಂಬರುವ ಚುನಾವಣಾ ವೇಳೆಗಾದರೂ ಒಂದು ದೇಶ ಒಂದು ಚುನಾವಣೆ ಮಸೂದೆ ಜಾರಿಗೆ ಬರಲು ಇರುವ ಅಡ್ಡಿ ಆತಂಕಗಳು ದೂರಾಗಲಿ. ಕಾಂಗ್ರೆಸ್ ಎಲ್ಲವನ್ನೂ ಕಾಮಾಲೆ ಕಣ್ಣಿನಿಂದ ನೋಡದೆ ಈ ಮಸೂದೆ ಜಾರಿಗೆ ತನ್ನ ಸಂಪೂರ್ಣ ಸಹಕಾರ ನೀಡಲಿ.

– ಹೆಚ್ ಆರ್. ಪ್ರಸಾದ್, ವಿವೇಕಾನಂದ ನಗರ, ಮೈಸೂರು,



ನಿವೇದಿತ ಹೆಚ್.
ಇಂಗ್ಲಿಷ್ ಉಪನ್ಯಾಸಕಿ
ಯುವರಾಜ ಕಾಲೇಜು
ಮೈಸೂರು.

ಮಂಥನ

ದೂರದರ್ಶನದ ಕ್ರಾಂತಿಕಾರಿ 'ದರ್ಶನ'









ಈಗ್ಗೆ ಸುಮಾರು 25 ವರ್ಷಗಳ ಹಿಂದೆ, ನೀವು ಯಾವುದೇ ಶಾಲೆ ಅಥವಾ ಕಾಲೇಜುಗಳಲ್ಲಿ ನಡೆಯುವ ಚರ್ಚಾ ಸ್ಪರ್ಧೆಗಳಲ್ಲಿ ಭಾಗವಹಿಸಿದ್ದೀರೆಂದರೆ, ಒಂದು ವಿಷಯದ ಬಗ್ಗೆ ಖಂಡಿತವಾಗಿ ಮಾತನಾಡಿರುತ್ತೀರಿ. 'ದೂರದರ್ಶನ ಇಂದಿನ ಸಮಾಜಕ್ಕೆ ಮಾರಕ' ಅಥವಾ 'ವಿದ್ಯಾರ್ಥಿಗಳ ವಿಕಾಸಕ್ಕೆ ದೂರದರ್ಶನ ಅಡ್ಡಗಾಲು ಹಾಕುತ್ತಿದೆ' ಹೌದಲ್ಲವೇ? ಹೌದು! 80ರ ದಶಕದಲ್ಲಿ ಮನೆಮನೆಗಳನ್ನು ತಲುಪಿದ ದೂರದರ್ಶನ ಎಬ್ಬಿಸಿದ ಕ್ರಾಂತಿ ಅಂತಿಂಥದಲ್ಲ. ಮನೋರಂಜನಾ ಮಾಧ್ಯಮದಲ್ಲಿಯೇ ಅಭೂತಪೂರ್ವ ಬದಲಾವಣೆ ತಂದ ಟಿವಿ ಇಂದು ನಮ್ಮೆಲ್ಲರ ಕುಟುಂಬದ ಆಪ್ತ ಸದಸ್ಯ.

1920ರ ಸುಮಾರಿಗೆ ಅದಾಗಲೇ ಕಂಡುಹಿಡಿದಿದ್ದ ಹಲವು ತಂತ್ರಜ್ಞಾನಗಳ ಸಂಗಮದ ಕೊಡುಗೆಯಾದ ಟೆಲಿವಿಷನ್ ಪಶ್ಚಿಮದಲ್ಲಿ ಸಂಚಲನ ಮೂಡಿಸಿತ್ತು. ಎರಡನೆಯ ಮಹಾಯುದ್ಧದ ನಂತರ ಟಿವಿ ಎಲ್ಲರಿಗೂ ಕೈಗೆಟುಕುವಂತಾಗಿ 50 ಮತ್ತು 60ರ ದಶಕದಲ್ಲಿ, ಮನೆಮನೆಗಳ ಕದದೂಡಿ ಹಜಾರದಲ್ಲಿ ಕುಳಿತೇ ಬಿಟ್ಟಿತು. ಭಾರತಕ್ಕೆ ಪ್ರವೇಶಿಸಿದ ಟಿ.ವಿ, 1959ರ 15 ಸೆಪ್ಟಂಬರ್‌ಗೆ ತನ್ನ ಮೊದಲನೆಯ ಪ್ರಸಾರ ಕಾರ್ಯವನ್ನು ಪರೀಕ್ಷಾರ್ಥವಾಗಿ ಕೈಗೊಂಡಿತು. ಅಂದರೆ ಭಾರತಕ್ಕೆ ಟಿ.ವಿ ಕಾಲಿಟ್ಟು ಇದೇ ಸೆಪ್ಟೆಂಬರ್ 15ಕ್ಕೆ 65 ಅಮೋಘ ವರ್ಷಗಳಾದವು. ನಂತರ 1965ರಿಂದ ತನ್ನ ದೈನಂದಿನ ಪ್ರಸಾರ ಕಾರ್ಯವನ್ನು ಆರಂಭಿಸಿದ ಟಿವಿಯಲ್ಲಿ ಮೊದಲು ಪ್ರಸಾರ ಕಂಡದ್ದು ವಾರ್ತೆಗಳು, ಪ್ರತಿಮಾ ಪುರಿ ಭಾರತೀಯ ಟಿ.ವಿ ಇತಿಹಾಸದಲ್ಲಿ ಮೊತ್ತಮೊದಲ ಬಾರಿಗೆ ವಾರ್ತೆಯನ್ನು ಓದಿದವರು. ನಮಗೆಲ್ಲಾ ಸರಳಾ ಮಹೇಶ್ವರಿ, ಗೀತಾಂಜಲಿ ಅಯ್ಯರ್, ರಿನಿ ಸೈಮೋನ್, ನೀತಿ ರವೀಂದ್ರನ್, ಸಲ್ಮಾ ಸುಲ್ತಾನ ಹೀಗೆ ಪ್ರಮುಖರು ಸ್ಮೃತಿಪಟಲದಲ್ಲಿ ಅಚ್ಚಾಗಿಬಿಟ್ಟಿದ್ದಾರೆ, ಅಲ್ಲವೇ?


ಟಿವಿ ಬಂದ ಹೊಸತರಲ್ಲಿ, ನಾನು ಮೊದಲಿಗೆ ಹೇಳಿದ ಚರ್ಚಾ ಸ್ಪರ್ಧೆಯ ವಿಷಯದ ಹಾಗೆ ಎಲ್ಲೆಡೆ ಚರ್ಚೆ, ವಾದ–ವಿವಾದ, ವಿಶ್ಲೇಷಣೆ, ಪರ–ವಿರೋಧ ಚಿಂತನೆಗಳು ಹುಟ್ಟಿಕೊಂಡವು. ದೂರದರ್ಶನವನ್ನು ದುರ್ದರ್ಶನ ಎಂದೂ ಕರೆದರು! ಆದರೆ ಬದಲಾವಣೆ ಜಗದ ನಿಯಮ. ಮತ್ತು ಒಮ್ಮೆ ನಾವು ಅಪ್‌ಗ್ರೇಡ್ ಆದರೆ ಹಿಂದೆ ಬರಲು ಮನಃಪೂರ್ವಕವಾಗಿ ಖಂಡಿತಾ ಇಚ್ಛಿಸುವುದಿಲ್ಲ. ಇದು ಮಾನವನ ಚರ್ಯೆ. ಹಾಗೆಯೇ, ರೇಡಿಯೋದಿಂದ ಟಿವಿಗೆ ಬಡ್ತಿ ಪಡೆದ ನಾವು ಅದನ್ನು ಪ್ರೇಮಿಸಲಾರಂಭಿಸಿದೆವು. (ಈಗ ಸ್ಮಾರ್ಟ್ ಫೋನ್‌ನ ಕತೆಯಂತೆ!) ಬದಲಾವಣೆಯನ್ನು ಒಪ್ಪುವುದು ಕಷ್ಟ ಎನ್ನುವ ಮಾತನ್ನು ಬಿಟ್ಟರೆ, ಟಿವಿ ಸಂಸ್ಕೃತಿ ನಿಜಕ್ಕೂ ಜನರನ್ನು ಮೋಡಿ ಮಾಡಿತು. ಬೂಸ್ಟರ್ ಸ್ಟಬಿಲೈಜರ್‌ಗಳನ್ನು ಅಣಿಮಾಡಿ, 24 ಕಡ್ಡಿಯ ಆಂಟೆನಾ ಏರಿಸಿ ಹೆಂಚಿನ ಮೇಲೆ ಹತ್ತಿ ವಿವಿಧ ದಿಕ್ಕುಗಳಲ್ಲಿ ತಿರುಗಿಸುತ್ತಾ, ಬಂತಾ ಬಂತಾ ಎನ್ನುತ್ತಿದ್ದ ಸುಂದರ ನೆನಪು ಬಹುತೇಕರಿಗೆ ಅಚ್ಚಳಿಯದ ಮಧುರಾನುಭೂತಿಯೇ ಸರಿ.

ಸತ್ಯಂ ಶಿವಂ ಸುಂದರಂ ಎಂಬ ಧ್ಯೇಯವಾಕ್ಯವುಳ್ಳ ದೂರದರ್ಶನದಲ್ಲಿ ಪ್ರಸಾರವಾಗುತ್ತಿದ್ದ ಹೊಸ ರೀತಿಯ ಮನರಂಜನಾ ಕಾರ್ಯಕ್ರಮಗಳ ವೈವಿಧ್ಯತೆ ಜನರ ಮನಸೆಳೆದಿತ್ತು. ಆಕಾಶವಾಣಿಯೊಂದಿಗೆ ಇದ್ದ ದೂರದರ್ಶನ, 1971ರಲ್ಲಿ, ಮಾಹಿತಿ ಮತ್ತು ಪ್ರಸಾರ ಮಂತ್ರಾಲಯದ ಅಡಿಯಲ್ಲಿ ಸ್ವತಂತ್ರವಾಗಿ ಅಸ್ತಿತ್ವಕ್ಕೆ ಬಂದಿತು. 1991ರಲ್ಲಿ ಪ್ರಸಾರಭಾರತಿಯಾಯಿತು. ದೂರದರ್ಶನದಲ್ಲಿ ಅಂದು ಕಾರ್ಯಕ್ರಮಗಳ ಭಾಷೆ ಹಿಂದಿ ಮಾತ್ರ ಆಗಿತ್ತು. ಮಾಹಿತಿ ತುಂಬಿದ ಕಾರ್ಯಕ್ರಮಗಳೇ ಮೊದಲು ಇದ್ದದ್ದು. ದೆಹಲಿ ದೂರದರ್ಶನದಲ್ಲಿ ಮೊದಲು ಆರಂಭವಾದ ಧಾರಾವಾಹಿ ಕೃಷಿ ದರ್ಶನ?! ಅದು ಇಂದಿಗೂ ನಿರಂತರವಾಗಿ ನಡೆದುಕೊಂಡು ಬರುತ್ತಿದೆ. ನಂತರದ ದಿನಗಳಲ್ಲಿ ಕಥಾ ಹಂದರ ಉಳ್ಳ ಧಾರಾವಾಹಿಗಳು ನಿರ್ಮಾಣವಾಗ ತೊಡಗಿದವು. ನಿಮಗೆಲ್ಲಾ ನುಕ್ಕಡ್, ಹಮ್ ಲೋಗ್, ಹಮ್ ಪಂಛೀ ಏಕ್ ಡಾಲ್ ಕೆ, ವಾಗ್ಲೇ ಕೀ ದುನಿಯಾ, ದೇಖ್ ಭಾಯ್ ದೇಖ್, ಬುನಿಯಾದ್, ಭ್ಯೋಮಕೇಶ್ ಭಕ್ಷಿ, ಜುನೂನ್, ಸ್ವಾಭಿ ಮಾನ್, ಯುಗ್, ಸ್ವರಾಜ್, ಚಂದ್ರಕಾಂತಾ, ಶಕ್ತಿಮಾನ್, ಅಲೀಫ್ ಲೈಲಾ, ಕ್ಯಾಪ್ಟನ್ ವ್ಯೋಮ್, ತೆಹೆಕಿಕಾತ್, ಶಾಂತಿ, ಈ ಎಲ್ಲ ಧಾರಾವಾಹಿಗಳನ್ನು ಬಿಡದಂತೆ ಕಾಡಿದ, ನೋಡಿದ ನೆನಪು ಮರೆಯಲು ಸಾಧ್ಯವೇ ಇಲ್ಲ! ಇಂದಿಗೂ ಈ ಧಾರಾವಾಹಿಗಳ ಕಟ್ಟಾ ಅಭಿಮಾನಿಗಳು ಸಾಮಾಜಿಕ ಜಾಲತಾಣಗಳಲ್ಲಿ ಫ್ಯಾನ್ ಪೇಜ್ ಮಾಡಿಕೊಂಡು ಅಪರೂಪದ ಮಾಹಿತಿ ಮತ್ತು ಫೋಟೋಗಳನ್ನು ಹಂಚಿಕೊಳ್ಳುತ್ತಿರುತ್ತಾರೆ. ರಮಾನಂದ ಸಾಗರರ 'ರಾಮಾಯಣ', ಬಿ.ಆರ್.ಛೋಪ್ರಾ ಅವರ 'ಮಹಾಭಾರತ' ಧಾರಾವಾಹಿಗಳು ಜನಸಾಮಾನ್ಯರ ಮನಸ್ಸಿನ ಮೇಲೆ ಉಂಟುಮಾಡಿದ ಪರಿಣಾಮ ಮರೆಯಲಾಗದ ಇತಿಹಾಸವನ್ನೇ ಸೃಷ್ಟಿಸಿತು. ಈ ಧಾರಾವಾಹಿಗಳ ಪ್ರಸಾರ ವೇಳೆ ಹಳ್ಳಿ–ದಿಲ್ಲಿಯ ರಸ್ತೆಗಳು ಒಂದು ನರಪಿಳ್ಳೆಯಿಲ್ಲದೆ ಬಿಕೋ ಎನ್ನುತ್ತಿದ್ದವು.

ಲಾಕ್‌ಡೌನ್ ಸಮಯದಲ್ಲಿ ಮತ್ತೆ ಈ ಧಾರಾವಾಹಿಗಳು ಪ್ರಸಾರವಾದಾಗ ಜನ, ಮತ್ತೆ ಹೊಸತೆನ್ನುವಂತೆ ವೀಕ್ಷಿಸಿದರು. 'ಸುರಭಿ' ಭಾರತದ ಬೃಹತ್ ಸಾಂಸ್ಕೃತಿಕ ಪರಿಧಿಯನ್ನು ನಮಗೆ ಪರಿಚಯಿಸಿತು. ಗಿರೀಶ್ ಕಾರ್ನಾಡ್ ನಡೆಸಿಕೊಡುತ್ತಿದ್ದ 'ಟರ್ನಿಂಗ್ ಪಾಯಿಂಟ್' ವಿಜ್ಞಾನ ಲೋಕಕ್ಕೊಂದು ಬೆಳಕಿನಕಿಂಡಿಯಾಗಿತ್ತು. ಬಂಕಿಮ ಚಂದ್ರ ಚಟರ್ಜಿ, ರವೀಂದ್ರನಾಥ ಟ್ಯಾಗೋರರು, ಶರತ್ ಚಂದ್ರ, ಪ್ರೇಮ ಚಂದ್, ಶರದ್ ಜೋಶಿ, ಚೆಕಾವ್ ಸೇರಿದಂತೆ ಭಾರತೀಯ ಮತ್ತು ವಿಶ್ವಮಟ್ಟದ ಸಾಹಿತಿಗಳ ಕೃತಿಗಳಾಧಾರಿತ ಧಾರಾವಾಹಿಗಳು ನಮ್ಮ ಸಾಹಿತ್ಯ ಪ್ರೀತಿ ಮತ್ತು ಹರಹನ್ನು ವಿಶಾಲಗೊಳಿಸಿದ್ದವು. ಶಂಕರ್‌ನಾಗ್ ಮಾಲ್ಗುಡಿ ಡೇಸ್‌ನಲ್ಲಿ ಕಟ್ಟಿಕೊಟ್ಟ ಮಾಲ್ಗುಡಿಯನ್ನು ನೋಡಿ ಸ್ವತಃ ಆರ್.ಕೆ.ನಾರಾಯಣರೇ ಸಂತೋಷಪಟ್ಟಿದ್ದರು. ನಮ್ಮ ಗೊರೂರರ, ಅಮೇರಿಕೆಯಲ್ಲಿ ಗೊರೂರು ಅನ್ನು ಕೂಡಾ ನಾಗಾಭರಣ ದೂರದರ್ಶನಕ್ಕೆ ನಿರ್ಮಿಸಿ ಕೊಟ್ಟಿದ್ದರು. ಭೈರಪ್ಪನವರ ದಾಟು, ಉಲ್ಲಂಘನ್ ಹೆಸರಿನಲ್ಲಿ ನಿರ್ಮಾಣಗೊಂಡು ಪ್ರಶಸ್ತಿಗಳನ್ನೂ ಗೆದ್ದಿತು. ಕಾನೂರು ಹೆಗ್ಗಡಿತಿಯೂ ಕಾರ್ನಾಡರ ನಿರ್ದೇಶನದಲ್ಲಿ ಹಿಂದಿಯಲ್ಲಿ ಮೂಡಿಬಂತು. ತಮಿಳಿನ ಶಿಲಪ್ಪದಿಗಾರಂ ಆಧಾರಿತ ಉಪಾಸನ ಭಾರತೀಯರಿಗೆ ಆ ಮಹಾಕಾವ್ಯದ ಪರಿಚಯ ಮಾಡಿಸಿತು. ನೆಹರೂ ಅವರ ಡಿಸ್ಕವರಿ ಆಫ್ ಇಂಡಿಯಾ ಶ್ಯಾಮ್ ಬೆನೆಗಲ್‌ರ ದಿಗ್ದರ್ಶನದಲ್ಲಿ ಅದ್ಭುತವಾಗಿ ಮೂಡಿಬಂದಿತ್ತು. ಈ ರೀತಿ ದೂರದರ್ಶನ ಭಾರತೀಯ ಇತಿಹಾಸ, ಸಂಸ್ಕೃತಿ, ಪರಂಪರೆಗಳ ಅರಿವನ್ನು ತನ್ನ ನೋಡುಗರಲ್ಲಿ ಜಾಗೃತಗೊಳಿಸಿತು. ಮನರಂಜನೆ ಎಂದರೆ ಬುದ್ಧಿಗೆ ಗುದ್ದೂ ಕೊಡುವಂತಿರಬೇಕು ಎಂಬುದು ದೂರದರ್ಶನ ಪಾಲಿಸಿಕೊಂಡು ಬಂದಿದ್ದ ಅಲಿಖಿತ ನಿಯಮವಾಗಿತ್ತು. ಭಾನುವಾರ ಮಧ್ಯಾಹ್ನ ಪ್ರಸಾರವಾಗುತ್ತಿದ್ದ ದೇಶದ ಎಲ್ಲ ಭಾಷೆಗಳ ಪ್ರಶಸ್ತಿ ವಿಜೇತ ಚಲನಚಿತ್ರಗಳು ಉತ್ತಮ ಚಿತ್ರ ವೀಕ್ಷಣೆಗೆ ಭಾಷೆಯ ಗಡಿಯಿಲ್ಲ ಎಂಬುದನ್ನು ನಮಗೆ ಅರ್ಥಮಾಡಿಸಿದ್ದವು. ಚಲನಚಿತ್ರ ಗೀತೆಗಳನ್ನಾಧರಿಸಿದ ರಂಗೋಲಿ ಮತ್ತು ಚಿತ್ರಹಾರ್ ಇಂದಿಗೂ ಜನಪ್ರಿಯ. ಹಾಗೆಯೇ ಅನ್ನು ಕಪೂರ್ ನಡೆಸಿ ಕೊಡುತ್ತಿದ್ದ, ಚಿತ್ರಗೀತೆಗಳನ್ನಾಧರಿಸಿದ ಮೊತ್ತ ಮೊದಲ ರಿಯಾಲಿಟಿ ಶೋ 'ಮೇರಿ ಆವಾಜ್ ಸುನೋ', ಸುನಿಧಿ ಚೌಹಾಣ್ ಅನ್ನು ಕೊಡುಗೆಯಾಗಿ ನೀಡಿತು. ನೋಡುಗರು ಹೆಚ್ಚಾದಂತೆ ದೂರದರ್ಶನದ ಚಾನೆಲ್‌ಗಳೂ ಹೆಚ್ಚಾದವು. ವಾರ್ತೆ, ಕ್ರೀಡೆ, ಸಂಗೀತ, ಸಿನಿಮಾ, ಧಾರಾವಾಹಿಗಳು ಹೀಗೆ ಬೇರೆ ಬೇರೆ ಪ್ರಕಾರಗಳಿಗಾಗಿ ಬೇರೆ ಬೇರೆ ಚಾನೆಲ್‌ಗಳು ಪ್ರಾರಂಭವಾದವು. ಇಂದು ಪ್ರಾದೇಶಿಕ ಭಾಷೆಗಳೂ ಸೇರಿದಂತೆ, ದೂರದರ್ಶನದ 60ಕ್ಕೂ ಹೆಚ್ಚು ಚಾನೆಲ್‌ಗಳಿವೆ.

> ❝ ದೂರದರ್ಶನ ಭಾರತೀಯ ಇತಿಹಾಸ, ಸಂಸ್ಕೃತಿ, ಪರಂಪರೆಗಳ ಅರಿವನ್ನು ತನ್ನ ನೋಡುಗರಲ್ಲಿ ಜಾಗೃತಗೊಳಿಸಿತು. ಮನರಂಜನೆ ಎಂದರೆ ಬುದ್ಧಿಗೆ ಗುದ್ದೂ ಕೊಡುವಂತಿರಬೇಕು ಎಂಬುದು ದೂರದರ್ಶನ ಪಾಲಿಸಿಕೊಂಡು ಬಂದಿದ್ದ ಅಲಿಖಿತ ನಿಯಮವಾಗಿತ್ತು. ಭಾನುವಾರ ಮಧ್ಯಾಹ್ನ ಪ್ರಸಾರವಾಗುತ್ತಿದ್ದ ದೇಶದ ಎಲ್ಲ ಭಾಷೆಗಳ ಪ್ರಶಸ್ತಿ ವಿಜೇತ ಚಲನಚಿತ್ರಗಳು ಉತ್ತಮ ಚಿತ್ರ ವೀಕ್ಷಣೆಗೆ ಭಾಷೆಯ ಗಡಿಯಿಲ್ಲ ಎಂಬುದನ್ನು ನಮಗೆ ಅರ್ಥ ಮಾಡಿಸಿದ್ದವು.

ಕನ್ನಡ ಡಿಂಡಿಮ!: ನಮ್ಮ ಕರ್ನಾಟಕದ ಕಲ್ಬುರ್ಗಿಯಲ್ಲಿ 1977ರ ನವೆಂಬರ್ 3ರಂದು ಮೊದಲ ಬಾರಿಗೆ ಟಿವಿ ಟ್ರಾನ್ಸ್‌ಮೀಟರ್ ಸ್ಥಾಪನೆಯಾಯಿತು. 1981ರ ನವೆಂಬರ್ 1ರಂದು ಮರುಪ್ರಸಾರ ಕೇಂದ್ರ ಅಸ್ತಿತ್ವಕ್ಕೆ ಬಂದಿತು. ಹಿಂದಿಯ ಕಾರ್ಯಕ್ರಮಗಳ ಮಧ್ಯೆ ಆಗೀಗ ಪ್ರಾದೇಶಿಕ ಭಾಷೆಯ ಕಾರ್ಯಕ್ರಮಗಳು ಕೆಲವು ನಿಮಿಷಗಳ ಕಾಲ ಪ್ರಸಾರವಾಗುತ್ತಿದ್ದವು. ಕನ್ನಡದ ಮೊದಲ ಕಾರ್ಯಕ್ರಮ 1983ರಲ್ಲಿ 2 ಗಂಟೆಗಳ ಕಾಲ ಪ್ರಸಾರವಾಯಿತು. ನಂತರ ಬೆಂಗಳೂರು ಕೇಂದ್ರ 10 ನಿಮಿಷದ ವಾರ್ತೆಯೊಂದಿಗೆ 45 ನಿಮಿಷಗಳ ಕಾರ್ಯಕ್ರಮ ಸಿದ್ಧಪಡಿಸತೊಡಗಿತು. ವಾರ್ತೆಗಳನ್ನು ಓದುತ್ತಿದ್ದ ವನಮಾಲ ವಿಶ್ವನಾಥ್, ಶಂಕರ್ ಪ್ರಕಾಶ್, ಸಬಿಹಾ ಬಾನು, ರವೀಂದ್ರಕುಮಾರ್, ಈಶ್ವರ ದೈತೋಟ ಇವರುಗಳನ್ನು ಮರೆಯುವುದುಂಟೇ. ಕಾರ್ಯಕ್ರಮ ನಿರೂಪಕರಲ್ಲಿ ಅಪರ್ಣಾ ಮತ್ತು ರವಿಶಂಕರ್ ಅವರಂತೂ ಎಲ್ಲರ ಅಚ್ಚುಮೆಚ್ಚು. ನಂತರ ಪೂರ್ಣಪ್ರಮಾಣದಲ್ಲಿ ಕನ್ನಡ ಕಾರ್ಯಕ್ರಮಗಳು ಬಿತ್ತರಗೊಳ್ಳಲು ಪ್ರಾರಂಭಿಸಿದವು. ಅದು ಕನ್ನಡ ದೂರದರ್ಶನದ ಸುವರ್ಣಯುಗವೆಂದೇ ಹೇಳಬೇಕು. ಡಿಡಿ 9 ಆಗಿದ್ದು 2000 ಏಪ್ರಿಲ್‌ರಂದು ಚಂದನ ಟಿವಿ ಆದ ನಮ್ಮ ಕನ್ನಡ ದೂರದರ್ಶನ ಕನ್ನಡ ವಾಹಿನಿ ಪ್ರಸಾರವಾಗುತ್ತಿದ್ದ ಕೆಲವೇ ಗಂಟೆಗಳ ಸಮಯದಲ್ಲಿ ಮೌಲ್ಯಯುತ ಕಾರ್ಯಕ್ರಮಗಳನ್ನು ಬಿತ್ತರಿಸುತ್ತಿತ್ತು. ಕೇವಲ 13 ಕಂತುಗಳಲ್ಲಿ ಪ್ರಸಾರವಾಗುತ್ತಿದ್ದ ಶುದ್ಧ ಮನರಂಜನೆಯ ಧಾರಾವಾಹಿಗಳನ್ನು ಇಂದಿಗೂ ವೀಕ್ಷಕರು ನೆನಪಿಸಿಕೊಳ್ಳುತ್ತಾರೆ. 'ಸಿಹಿ ಕಹಿ', 'ಕಂಡಕ್ಟರ್ ಕರಿಯಪ್ಪ', 'ಗುಡ್ಡದ ಭೂತ', 'ಕ್ರೇಜಿ ಕರ್ನಲ್', 'ಆಫೀ ಸಾಯಣ', 'ಸಬೀನ, ನಂ.67 ಹ್ಯಾರಿಸ್ ರಸ್ತೆ', 'ರೈತ–ಯೋಧ', 'ಕ್ಷಮಯಾ ಧರಿತ್ರಿ' ಇಂದು ಸಾಮಾಜಿಕ ಜಾಲತಾಣಗಳಲ್ಲಿ ವ್ಯಕ್ತವಾಗುವ ಅನಿಸಿಕೆಗಳನ್ನು ಆಧರಿಸಿ ವೀಕ್ಷಕರಿಗೆ ಇಷ್ಟವಾಗದಿದ್ದರೆ ಧಾರಾವಾಹಿಯ ಕತೆಯನ್ನು ಬದಲಿಸುವ ಟ್ರೆಂಡ್ ಇವತ್ತಿನದಾಗಿದೆ. ಆದರೆ ದಶಕಗಳ ಹಿಂದೆ ಪ್ರಸಾರವಾದ ಮಾಯಾಮೃಗ ಆ ಪರಿಪಾಠಕ್ಕೆ ನಾಂದಿ ಹಾಕಿದ್ದು ಎಂದರೆ ನೀವು ನಂಬಲೇಬೇಕು. ಇಂದು ವರ್ಷಾನುಗಟ್ಟಲೆ ನಡೆಯುವ ಧಾರಾವಾಹಿಗಳಿಗೂ ದೂರದರ್ಶನದಲ್ಲಿ ಪ್ರಸಾರವಾದ ಮನೆತನ ಮತ್ತು ಜನನಿ ಧಾರಾವಾಹಿಗಳೇ ಬುನಾದಿಯಾಗಿದ್ದು!



ಇವಲ್ಲದೆ 'ಮಲೆಗಳಲ್ಲಿ ಮದುಮಗಳು', 'ಕಾನೂರು ಹೆಗ್ಗಡತಿ', 'ಭುಜಂಗಯ್ಯನ ದಶಾವತಾರ', 'ಶಿಕಾರಿ', 'ಸುಬ್ಬಣ್ಣ', 'ಚಿರಸ್ಮರಣೆ', 'ಓಂ ನಮೋ', 'ಮೌನಕ್ರಾಂತಿ', 'ಸರಸಮ್ಮನ ಸಮಾಧಿ', 'ಭಾರತೀಪುರ', 'ನಾಟ್ಯ ರಾಣಿ ಶಾಂತಲಾ'ದಂತಹ ಕಾದಂಬರಿ ಆಧಾರಿತ ಧಾರಾವಾಹಿಗಳು ಸಾಮಾನ್ಯ ವೀಕ್ಷಕರಲ್ಲೂ ಸಾಹಿತ್ಯದ ರುಚಿ ಹತ್ತಿಸಿದವು. ಕನ್ನಡದ ಶ್ರೇಷ್ಠ ಸಣ್ಣಕತೆಗಳನ್ನು ಆಧರಿಸಿದ ಕತೆಗಾರ ಸರಣಿ ಸಣ್ಣಕಥಾಲೋಕದ ಚಿತ್ರರೂಪದ ಪ್ರತಿನಿಧಿಯಂತಿದೆ. ಕನ್ನಡದ ಮನಸುಗಳನ್ನು ತಟ್ಟಿದ ಭಾವಗೀತೆಗಳನ್ನು ಅವುಗಳ ಭಾವಕ್ಕೆ ಕಿಂಚಿತ್ತಾದರೂ ಧಕ್ಕೆ ಬರದಂತೆ ಗೀತನಾಟಕವನ್ನಾಗಿಸಿದ ಗೀತಮಾಧುರಿ ಸರಣಿ ದೂರದರ್ಶನದ ಮೂಲಕ ಕನ್ನಡಕ್ಕೆ ದೊರೆತ ನಾಗಾಭರಣರ ಮಾಸ್ಟರ್ ಪೀಸ್. ಕಾದಂಬರಿ, ಸಣ್ಣಕತೆಗಳು, ಭಾವಗೀತೆಗಳು ಕನ್ನಡ ಸಂಸ್ಕೃತಿಯ ಅಸ್ಮಿತೆಯಿದ್ದಂತೆ. ಅವುಗಳನ್ನು ಮನೆ ಮಾತಾಗಿಸಿ ಜನರ ಹೃದಯದಲ್ಲಿ ನೆಲೆಯಾಗಿಸಿದ ದೂರದರ್ಶನದ ಕೆಲಸ ಸ್ತುತ್ಯಾರ್ಹ. ಕರ್ನಾಟಕದ ವೈವಿಧ್ಯತೆಗಳನ್ನು ಕಟ್ಟಿಕೊಟ್ಟ ಸುರಭಿ ಮಾದರಿಯ ಕಾರ್ಯಕ್ರಮ ಅವಲೋಕನವನ್ನು ನಾವೆಲ್ಲಾ ಕಾದು ನೋಡುತ್ತಿದ್ದೆವು. ಡಾ.ಸಿ.ವೀರಣ್ಣ ಅವರ ಶೀರ್ಷಿಕೆ ಗೀತೆ ಹೊಂದಿದ್ದ ಎಚ್.ಎಲ್.ನಾಗೇಗೌಡರ ನೇತೃತ್ವದಲ್ಲಿ ರೂಪುಗೊಂಡ ಸಿರಿಗಂಧ ಕರ್ನಾಟಕದ ಸಮೃದ್ಧ ಜಾನಪದವನ್ನು ಒಂದು ಚೌಕಟ್ಟಿಗೆ ತಂದು ನಿಲ್ಲಿಸುವ ಅಮೋಘವಾದ ಮತ್ತು ಯಶಸ್ವೀ ಪ್ರಯತ್ನ. ಕರ್ನಾಟಕದ ಪ್ರವಾಸಿ ತಾಣಗಳನ್ನು ಪರಿಚಯಿಸುವ ತಾಣಯಾನ ಆಗಿನ ಕಾಲಕ್ಕೆ ವಿಶಿಷ್ಟಕಲ್ಪನೆಯ ವಿನೂತನ ಕಾರ್ಯಕ್ರಮ. ಶುಕ್ರವಾರದ ಚಿತ್ರಮಂಜರಿ, ಭಾನುವಾರದ ಬೆಳಗಿನ ಮುನ್ನೋಟ, ಸಂಜೆಯ ಚಲನಚಿತ್ರ ನಮ್ಮ ಭಾವಕೋಶಗಳಲ್ಲಿ ಇಂದಿಗೂ ಮಧುರವಾದ ಸ್ಮೃತಿಯಾಗಿ ಉಳಿದುಕೊಂಡಿವೆ.

1990ರಲ್ಲಿ ಖಾಸಗಿ ಚಾನೆಲ್‌ಗಳು ಆರಂಭವಾದಾಗ ದೂರದರ್ಶನ ಸ್ವಲ್ಪಮಟ್ಟಿಗೆ ತನ್ನ ಜನಪ್ರಿಯತೆಯನ್ನು ಕಳೆದುಕೊಳ್ಳಲಾರಂಭಿಸಿತು. ಆದರೆ ದೂರದರ್ಶನವನ್ನೇ ಮಾದರಿಯಾಗಿ ಇಟ್ಟುಕೊಂಡು ರೂಪಿತವಾಗಿದ್ದರಿಂದ, ಖಾಸಗಿ ಚಾನೆಲ್‌ಗಳಲ್ಲೂ ಉತ್ತಮ ಗುಣಮಟ್ಟದ, ಸಾಹಿತ್ಯಕ, ಸಾಂಸ್ಕೃತಿಕ ಮೌಲ್ಯವುಳ್ಳ ಕಾರ್ಯಕ್ರಮಗಳ ಜೊತೆಗೆ ಅರ್ಥಗರ್ಭಿತವಾದ ಕತೆಯುಳ್ಳ ಧಾರಾವಾಹಿಗಳು ನಿರ್ಮಾಣವಾಗುತ್ತಿದ್ದವು. ಸಾಹಿತಿಗಳ ಸಂದರ್ಶನಗಳನ್ನಾಧರಿಸಿದ ಸರಣಿ, ಭೈರಪ್ಪನವರ ಗೃಹಭಂಗ, ಎಂ.ವಿ.ಇನಾಂದಾರರ ಮುರಿದ ಮನೆ, ತ್ರಿವೇಣಿಯವರ ಕಾದಂಬರಿಗಳನ್ನಾಧರಿಸಿದ ಸರಣಿಗಳು ಅತ್ಯುತ್ತಮವಾಗಿ ಮೂಡಿಬಂದವು. ಆದರೆ ದಿನಕಳೆದಂತೆ, ಟಿಆರ್‌ಪಿಯ ಲೆಕ್ಕಾಚಾರದ ತೆಕ್ಕೆಗೆ ಬಿದ್ದ ಖಾಸಗಿ ವಾಹಿನಿಗಳು, ಸತ್ವಯುತ ಕಾರ್ಯಕ್ರಮಗಳನ್ನು ನಿರ್ಮಿಸುವುದನ್ನೇ ಬಹುತೇಕ ನಿಲ್ಲಿಸಿಬಿಟ್ಟಿದ್ದಾವೆ ಎಂದರೆ ತಪ್ಪೇನಲ್ಲ. ತರ್ಕಕ್ಕೆ ಎಳ್ಳು ನೀರು ಬಿಟ್ಟು ಅರ್ಥವಿಲ್ಲದ ಸತ್ವವಿಲ್ಲದ ಸಾಧ್ಯವಿಲ್ಲದ ಸನ್ನಿವೇಶಗಳಿಂದ ತುಂಬಿದ ಧಾರಾವಾಹಿಗಳು, ರಿಯಾಲಿಟಿ ಶೋ ಹೆಸರಲ್ಲಿ ಅಸಹಜ ಸ್ಪರ್ಧೆಗಳು, ಅತಿರೇಕದ ನಡುವಳಿಕೆಯ ಸ್ಪರ್ಧೆಗಳು, ಸ್ವಲ್ಪವೂ ಲಾಲಿತ್ಯವಿಲ್ಲದ ನೃತ್ಯ, ದ್ವಂದ್ವಾರ್ಥವೇ ವಿಜೃಂಭಿಸುವ ಹಾಸ್ಯ(?) ಕಾರ್ಯಕ್ರಮಗಳು ಒಟ್ಟಿನಲ್ಲಿ ಜನರ ಅಭಿರುಚಿಯ ಮಟ್ಟವನ್ನೇ ಸುವ್ಯವಸ್ಥಿತವಾಗಿ ಕೀಳುಮಟ್ಟಕ್ಕಿಳಿಸುವ ಹುನ್ನಾರವೇನೋ ಎನಿಸುತ್ತದೆ.

ಆದರೆ ಈ ಭರಾಟೆಯಲ್ಲಿಯೂ, ದೂರದರ್ಶನದ ಯಾವುದೇ ಚಾನೆಲ್ಲು 'ಸತ್ಯಂ ಶಿವಂ ಸುಂದರಂ' ಎನ್ನುವ ತನ್ನ ಧ್ಯೇಯವಾಕ್ಯವನ್ನು ಸ್ವಲ್ಪವೂ ಮರೆಯದೇ ಇಂದಿಗೂ ಗಂಭೀರವಾದ ಮೌಲ್ಯಭರಿತ ಕಾರ್ಯಕ್ರಮಗಳನ್ನು ನಿರ್ಮಿಸುತ್ತಾ ತನ್ನ ಘನತೆಯನ್ನು ಕಾಪಾಡಿಕೊಂಡು ಬಂದಿದೆ. ಸ್ವಾತಂತ್ರ್ಯ ದಿನಾಚರಣೆಯ ಅಮೃತ ಕಾಲವನ್ನು ಸಂಭ್ರಮಿಸಲು ದೂರದರ್ಶನ ಸಿದ್ಧಪಡಿಸಿದ 'ಸ್ವರಾಜ್' ಕಾರ್ಯಕ್ರಮವೇ ಇದಕ್ಕೆ ಸಾಕ್ಷಿ. ಜೊತೆಗೆ ಹಾಡು ನೃತ್ಯಗಳ ರಿಯಾಲಿಟಿ ಶೋಗಳನ್ನು ಯಾವುದೇ ಅತಿ ಎನಿಸುವ ಭರಾಟೆ ಇಲ್ಲದೆ ಆ ಕಲಾ ಪ್ರಕಾರಕ್ಕೆ ಧಕ್ಕೆ ಬರದಂತೆ ನಡೆಸಿಕೊಂಡು ಬರುತ್ತಿದೆ. ನಮ್ಮ ಚಂದನ ವಾಹಿನಿಯಲ್ಲಿಯೇ ಕನ್ನಡ ಚಿತ್ರಗೀತೆಗಳನ್ನು ಅವುಗಳ ಸ್ವಾರಸ್ಯಕರ ಹಿನ್ನೆಲೆಯೊಂದಿಗೆ ಪ್ರಸ್ತುತಪಡಿಸುವ ಮಧುರ ಮಧುರವೀ ಮಂಜುಳಗಾನ ಅಂದಿನ ನಿರ್ದೇಶಕರಾದ ಮಹೇಶ್ ಜೋಶಿ ಅವರ ಕನಸಿನ ಕೂಸು. ಅತ್ಯಂತ ಯಶಸ್ವಿಯಾದ ಈ ಕಾರ್ಯಕ್ರಮ ರಾಜ್ಯದೆಲ್ಲೆಡೆ ಆಯೋಜಿತವಾಯಿತು. ಈಗ ಥಟ್ ಅಂತ ಹೇಳಿ, ಜಾನಪದ ಸಂಭ್ರಮ, ಬೆಳಗು ಅಂತಹ ಕಾರ್ಯಕ್ರಮಗಳನ್ನು ನೋಡುಗರು ಕಾದು ಕುಳಿತು ವೀಕ್ಷಿಸುತ್ತಾರೆ.

ಕಣ್ಣಿಗೆ ವರ್ಣಮಯ ಎನಿಸುವಂತಹ ಆಡಂಬರ ತುಂಬಿದ ಖಾಸಗಿ ವಾಹಿನಿಗಳ ಮಧ್ಯೆ ದೂರದರ್ಶನ ಹೊಳೆಯುವ ವಜ್ರದಂತೆ ತನ್ನ ವರ್ಚಸ್ಸನ್ನು ಇನ್ನೂ ಉಳಿಸಿಕೊಂಡು ಮಿನುಗುತ್ತಲೇ ಇದೆ. ಜನರ ಅಭಿರುಚಿಗೆ ತಕ್ಕಂತೆ ಬದಲಾಗುತ್ತಿದ್ದೇವೆ ಎಂಬ ಹಸೀ ಸುಳ್ಳನ್ನು ಹೇಳುವ ಖಾಸಗಿ ವಾಹಿನಿಗಳ ಮಧ್ಯೆ ಜನರಲ್ಲಿ ಉತ್ತಮ ಅಭಿರುಚಿಯ ಬೆಳವಣಿಗೆಗೆ ಇಂಬು ನೀಡುತ್ತಿರುವ ದೂರದರ್ಶನ ಎಂದಿಗೂ ಅಳಿದು ಹೋಗದೆ ಹಾಗೆಯೇ ತನ್ನ ಅಸ್ತಿತ್ವವನ್ನು ಕಾಪಾಡಿಕೊಳ್ಳುತ್ತದೆ ಎಂಬುದು ಸತ್ಯ.ಸತ್ಯ!!

ಎನ್.ಆರ್.ಪೊಲೀಸರಿಂದ ಮೂವರು ಸುಲಿಗೆ ಕೋರರ ಬಂಧನ





ಫರ್ವಿಜ್



ಸೈಯದ್ ರೆಹಮಾನ್



ಯಾಸಿನ್

ಮೈಸೂರು, ಸೆ.25(ಆರ್‌ಕೆ)–ಹಾಡುಹಗಲೇ ಸಾರ್ವಜನಿಕರ ದೋಚುತ್ತಿದ್ದ ಮೂವರನ್ನು ಮೈಸೂರಿನ ನರಸಿಂಹರಾಜ ಠಾಣೆ ಪೊಲೀಸರು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಮೈಸೂರಿನ ಗೌಸಿಯಾನಗರ ಫಾರಂ ಕಾಲೋನಿ ನಿವಾಸಿ ಸೈಯ್ಯದ್ ಅಕ್ಬರ್ ಮಗ ಸೈಯ್ಯದ್ ರೆಹಮಾನ್ (18), 7ನೇ ಕ್ರಾಸ್ ನಿವಾಸಿ ಲೇಟ್ ಮುನೀರ್ ಅಹಮದ್ ಮಗ ಫರ್ವಿಜ್ ಅಲಿಯಾಸ್ ಮೊಹಮದ್ ಫರ್ವಿಜ್(18) ಹಾಗೂ 9ನೇ ಕ್ರಾಸ್ ನಿವಾಸಿ ನಾಸಿರ್ ಮಗ ಯಾಸಿನ್ ಅಲಿಯಾಸ್ ತೋತು(19) ಬಂಧಿತ ಆರೋಪಿಗಳು. 2024ರ ಸೆಪ್ಟೆಂಬರ್ 19ರಂದು ಮಧ್ಯಾಹ್ನ 3.30 ಗಂಟೆ ವೇಳೆಗೆ ರಾಕೇಶ್ ತನ್ನ ಸ್ನೇಹಿತ ಆರ್.ಶ್ರೇಯಸ್‌ನೊಂದಿಗೆ ಟಿವಿಎಸ್ ಅಪಾಚೆ ಆರ್‌ಟಿಆರ್ ಬೈಕಿನಲ್ಲಿ ಹೋಗುತ್ತಿದ್ದಾಗ, ಹಳೆ ಕೆಸರೆಯ ವರುಣ ನಾಲೆಯ ಹುದಾ ಶಾಲೆ ರಸ್ತೆಯ ಸೇತುವೆ ಬಳಿ ಬೈಕ್ ನಿಲ್ಲಿಸಿ ಬಹಿರ್ದೆಸೆಗೆ ಹೋಗುತ್ತಿದ್ದಾಗ ನಂಬರ್ ಪ್ಲೇಟ್ ಇಲ್ಲದ ಎರಡು ಸ್ಕೂಟರ್‌ನಲ್ಲಿ ಬಂದ ಐವರು ಯುವಕರು ಬೆದರಿಸಿ ರಾಕೇಶ್ ಕತ್ತಿನಲ್ಲಿದ್ದ ಬೆಳ್ಳಿ ಸರ, 500 ರೂ. ಹಣ ಕಿತ್ತುಕೊಂಡು, ಸ್ಕ್ಯಾನರ್‌ಗೆ ಹಣ ಕಳುಹಿಸುವಂತೆ ಒತ್ತಾಯಿಸಿದ್ದರು. ನಮ್ಮ ಬಳಿ ಹಣ ಇಲ್ಲ ಎಂದಾಗ ಕಬ್ಬಿಣದ ರಾಡ್‌ನಿಂದ ಹೊಡೆದಿದ್ದಾರೆ. ಆಗ ಶ್ರೇಯಸ್ ತಮ್ಮ ಸ್ನೇಹಿತ ಪ್ರವೀಣ್‌ಗೆ ಫೋನ್ ಮಾಡಿ 10,000 ರೂ. ತರಿಸಿ, ಆರೋಪಿಗಳ ಸ್ಕ್ಯಾನರ್‌ಗೆ ಕಳುಹಿಸಿದ್ದಾರೆ. ಮತ್ತೆ ಒತ್ತಾಯಿಸಿದ್ದರಿಂದ ಶ್ರೇಯಸ್ ತನ್ನ ಮತ್ತೋರ್ವ ಸ್ನೇಹಿತ ಆರ್.ಸುದೀಪ್‌ನಿಂದ 5,000 ರೂ. ಹಣ ತರಿಸಿ, ಕಳುಹಿಸಿದ್ದಾನೆ. ನಂತರ ಅವರು ಎನ್.ಆರ್.ಠಾಣೆಗೆ ಬಂದು ನಡೆದ ಘಟನೆ ವಿವರಿಸಿ ದೂರು ನೀಡಿದ ಮೇರೆಗೆ ಪ್ರಕರಣ ದಾಖಲಿಸಿಕೊಂಡ ಎನ್.ಆರ್.ಠಾಣೆ ಸಬ್ ಇನ್ಸ್‌ಪೆಕ್ಟರ್ ಎಸ್.ಕೆ.ಗಣೇಶ, ಸ್ಥಳ ಮಹಜರು ನಡೆಸಿ ತನಿಖೆ ಕೈಗೊಂಡಿದ್ದರು. ಸೆಪ್ಟೆಂಬರ್ 23ರಂದು ಬೆಳಗ್ಗೆ 10 ಗಂಟೆ ವೇಳೆ ಉದಯಗಿರಿ ಠಾಣಾ ವ್ಯಾಪ್ತಿಯ ಶಾಂತಿನಗರ, ಉಸ್ಮಾನಿಯ ಬ್ಲಾಕ್ ಬಳಿ ಸೈಯ್ಯದ್ ರಯಾಸ್, ಯಾತಿನ್ ಅಲಿಯಾಸ್ ತೋತು ಹಾಗೂ ಮೊಹಮದ್ ಫರ್ವಿಜ್ ಅಲಿಯಾಸ್ ಪಾಪ್ಪಡ ಎಂಬುವರನ್ನು ಬಂಧಿಸಿ ಯಾಸಿನ್ ವಶದಲ್ಲಿದ್ದ ಟಿವಿಎಸ್ ಅಪಾಚೆ ಬೈಕ್ ಅನ್ನು ವಶಪಡಿಸಿಕೊಳ್ಳಲಾಯಿತು.

ಠಾಣೆಯಲ್ಲಿ ವಿಚಾರಣೆಗೊಳಪಡಿಸಿದಾಗ ಈ ಮೂವರೂ 20 ದಿನಗಳ ಹಿಂದೆ ಲಲಿತ ಮಹಲ್ ರಸ್ತೆಯ ಕೆ.ಸಿ.ಲೇಔಟ್ ಪಾರ್ಕ್‌ನಲ್ಲಿ ವ್ಯಕ್ತಿಯೊಬ್ಬರಿಂದ ಎರಡು ಮೊಬೈಲ್ ಫೋನ್ ಕಿತ್ತುಕೊಂಡು ಪರಾರಿಯಾಗಿದ್ದರು ಎಂಬುದು ತಿಳಿಯಿತು.

ವಿಚಾರಣೆ ನಡೆಸಿದ ನಂತರ ಆರೋಪಿಗಳನ್ನು ನ್ಯಾಯಾಧೀಶರ ಮುಂದೆ ಹಾಜರುಪಡಿಸಲಾಗಿ ಅವರನ್ನು ಅ.7ರವರೆಗೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಡಿಸಿಪಿ ಎಸ್.ಜಾಹ್ನವಿ ನಿರ್ದೇಶನದಂತೆ ಎನ್.ಆರ್. ಎಸಿಪಿ ಅಶ್ವತ್ಥನಾರಾಯಣ ಅವರ ಮಾರ್ಗದರ್ಶನದಲ್ಲಿ ಎನ್.ಆರ್.ಠಾಣೆ ಇನ್ಸ್‌ಪೆಕ್ಟರ್ ಲಕ್ಷ್ಮೀಕಾಂತ ತಳವಾರ್ ಹಾಗೂ ಸಿಬ್ಬಂದಿ ಪತ್ತೆ ಕಾರ್ಯ ನಡೆಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy News papers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com



ಮೈಸೂರು ಸ್ಕೌಟ್ಸ್–ಗೈಡ್ಸ್ ಮೈದಾನದಲ್ಲಿ ಅ.3ರಿಂದ 11ರವರೆಗೆ ಪುಸ್ತಕ ಮೇಳ



ಮೈಸೂರು,ಸೆ.25(ಎಂಟಿವೈ)– ದಸರಾ ಮಹೋತ್ಸವದ ಅಂಗವಾಗಿ ಮೈಸೂರಿನ ಸ್ಕೌಟ್ಸ್ ಮತ್ತು ಗೈಡ್ಸ್ ಮೈದಾನದಲ್ಲಿ ಅ.3ರಿಂದ 11ರವರೆಗೆ 'ಮೈಸೂರು ದಸರಾ ಕನ್ನಡ ಪುಸ್ತಕ ಮಾರಾಟ ಮೇಳ–2024' ಆಯೋಜಿಸಲಾಗಿದೆ ಎಂದು ಕನ್ನಡ ಪುಸ್ತಕ ಪ್ರಾಧಿಕಾರ ಆಡಳಿತಾಧಿಕಾರಿ ಕೆ.ಬಿ. ಕಿರಣ್ ಸಿಂಗ್ ತಿಳಿಸಿದ್ದಾರೆ.

ನಾಡಹಬ್ಬ ದಸರಾ ಮಹೋತ್ಸವದ ಹಿನ್ನೆಲೆಯಲ್ಲಿ ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಮೈಸೂರು ದಸರಾ ಮಹೋತ್ಸವ ಸಮಿತಿ ವತಿಯಿಂದ ಈ ಬಾರಿ ಕನ್ನಡ ಪುಸ್ತಕ ಮಾರಾಟ ಮೇಳ ಆಯೋಜಿಸಲಾಗಿದೆ. ಈ ಮೇಳದಲ್ಲಿ ಕನ್ನಡ ಪ್ರಕಾಶಕರು, ಮಾರಾಟಗಾರರು ಭಾಗವಹಿಸಲಿದ್ದಾರೆ.

ಮೇಳದಲ್ಲಿ 60 ಮಳಿಗೆಗಳನ್ನು ನಿರ್ಮಿಸಲಾಗುತ್ತದೆ. ಮಳಿಗೆ ಪಡೆಯಲು ಆಡಳಿತಾಧಿಕಾರಿಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು ಹೆಸರಿನಲ್ಲಿ 1000 ರೂ. ಭದ್ರತಾ ಠೇವಣಿಯನ್ನು ಡಿಡಿ ಪಡೆದು ಸಲ್ಲಿಸಬೇಕು. ಪ್ರಾಧಿಕಾರದ ವೆಬ್‌ಸೈಟ್ https://kpp. karnataka. gov.inನಲ್ಲಿ ಉಚಿತವಾಗಿ ಅರ್ಜಿ ಪಡೆದುಕೊಳ್ಳಬಹುದಾಗಿದೆ. ಭರ್ತಿ ಮಾಡಿದ ಅರ್ಜಿಯನ್ನು ಡಿಡಿಯೊಂದಿಗೆ ಸೆ.30ರಂದು ಸಂಜೆ 5 ಗಂಟೆಯೊಳಗೆ ಆಡಳಿತಾಧಿಕಾರಿಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು ಅವರ ಹೆಸರಿಗೆ ಅಂಚೆ ಮೂಲಕ ಹಾಗೂ ಇ–ಮೇಲ್ kannadappradhikara@gmail.comರ' ಮೂಲಕ ಸಲ್ಲಿಸಲು ಕೋರಿದೆ. ನಿರ್ಮಿಸಲಾಗುವ 60 ಮಳಿಗೆಗಳನ್ನು ಆದ್ಯತೆ ಮೇರೆಗೆ ಹಂಚಿಕೆ ಮಾಡಲಾಗುವುದು. ಹೆಚ್ಚಿನ ಮಾಹಿತಿಗಾಗಿ ದೂ:080–22484516 / 22107704 ಅನ್ನು ಸಂಪರ್ಕಿಸುವಂತೆ ಕೋರಿದ್ದಾರೆ.

ದಸರಾ ಬಂದೋಬಸ್ತ್; ಮೈಸೂರಲ್ಲಿ ಎಡಿಜಿಪಿ ಪರಿಶೀಲನಾ ಸಭೆ

ಅಹಿತಕರ ಘಟನೆಗಳಿಗೆ ಆಸ್ಪದವಿರದಂತೆ ಕಟ್ಟೆಚ್ಚರ ವಹಿಸಲು ಪೊಲೀಸ್ ಅಧಿಕಾರಿಗಳಿಗೆ ಸೂಚನೆ

ಮೈಸೂರು,ಸೆ.25(ಆರ್‌ಕೆ)– ಅಕ್ಟೋಬರ್ 3ರಿಂದ 12ರವರೆಗೆ ನಡೆಯಲಿರುವ ಮೈಸೂರು ದಸರಾ ಮಹೋತ್ಸವಕ್ಕೆ ಅಗತ್ಯ ಬಂದೋಬಸ್ತ್ ವ್ಯವಸ್ಥೆ ಮಾಡಿ ಕಟ್ಟೆಚ್ಚರ ವಹಿಸುವಂತೆ ರಾಜ್ಯ ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ಎಡಿಜಿಪಿ ಆರ್.ಹಿತೇಂದ್ರ, ಮೈಸೂರು ಪೊಲೀಸ್ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.



ಮೈಸೂರಿನ ನಜರ್‌ಬಾದ್‌ನಲ್ಲಿರುವ ನಗರ ಪೊಲೀಸ್ ಆಯುಕ್ತರ ಕಚೇರಿ ಸಭಾಂಗಣದಲ್ಲಿ ರಾಜ್ಯ ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ಎಡಿಜಿಪಿ ಆರ್.ಹಿರೇಂದ್ರ, ಮೈಸೂರು ಪೊಲೀಸ್ ಅಧಿಕಾರಿಗಳೊಂದಿಗೆ ಸಭೆ ನಡೆಸಿದರು.

ಮೈಸೂರಿನ ನಜರ್‌ಬಾದ್‌ನಲ್ಲಿರುವ ನಗರ ಪೊಲೀಸ್ ಆಯುಕ್ತರ ಕಚೇರಿ ಸಭಾಂಗಣದಲ್ಲಿ ಇಂದು ಮೈಸೂರು ನಗರ ಸೇರಿದಂತೆ ದಕ್ಷಿಣ ವಲಯ ಡಿಐಜಿ ವ್ಯಾಪ್ತಿಯ ಜಿಲ್ಲೆಗಳ ಎಸ್ಪಿಗಳೊಂದಿಗೆ ಸಭೆ ನಡೆಸಿದ ಹಿತೇಂದ್ರ, ಮೊದಲಿಗೆ ಮೈಸೂರು ದಸರಾ ಮಹೋತ್ಸವಕ್ಕೆ ಮಾಡಿಕೊಂಡಿರುವ ಬಂದೋಬಸ್ತ್ ವ್ಯವಸ್ಥೆ ಕುರಿತು ಮಾಹಿತಿ ಪಡೆದರು.

ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ಅಕ್ಟೋಬರ್ 3ರಿಂದ 12ರವರೆಗೆ ನಡೆಯುವ ನಾಡಹಬ್ಬ ಉದ್ಘಾಟನೆ, ವಿವಿಧ ಕಾರ್ಯಕ್ರಮಗಳು, ನವರಾತ್ರಿಯ ಅಂತಿಮ ದಿನ ವಿಜಯ ದಶಮಿ ಮೆರವಣಿಗೆ, ಪಂಜಿನ ಕವಾಯತು ಪ್ರದರ್ಶನಕ್ಕೆ ಅಗತ್ಯ ಭದ್ರತೆ, ಅಧಿಕಾರಿಗಳು, ಸಿಬ್ಬಂದಿ ನಿಯೋಜನೆ, ಸಿಸಿ ಕ್ಯಾಮರಾ, ಮೊಬೈಲ್ ಕಮಾಂಡ್ ಸೆಂಟರ್, ಕಾರ್ಯಕ್ರಮ ನಡೆಯುವ ಸ್ಥಳಗಳಲ್ಲಿ ಮೆಟಲ್ ಡೋರ್ ಡಿಟೆಕ್ಟರ್, ಶ್ವಾನದಳ, ಬಾಂಬ್ ಪತ್ತೆ ಮತ್ತು ನಿಗ್ರಹ ದಳದ ಸಿಬ್ಬಂದಿಗಳ ನಿಯೋಜನೆಗೆ ಅಗತ್ಯವಿರುವ ಸಿಬ್ಬಂದಿಗಳ ಬಗ್ಗೆ ಎಡಿಜಿಪಿಯವರಿಗೆ ಪವರ್ ಪಾಯಿಂಟ್ ಪ್ರೆಸೆಂಟೇಷನ್ ಮೂಲಕ ವಿವರಿಸಿ ಈಗಾಗಲೇ ತಾವು ಮಾಡಿಕೊಂಡಿರುವ ಸಿದ್ಧತೆಗಳನ್ನು ಪ್ರಸ್ತುತಪಡಿಸಿದರು.

ಈ ಬಾರಿ ಖ್ಯಾತ ಸಂಗೀತ ಸಂಯೋಜಕರಾದ ಎ.ಆರ್.ರೆಹಮಾನ್, ಇಳಯ ರಾಜರಂತಹ ಸಂಗೀತ ದಿಗ್ಗಜರನ್ನು ಯುವ ದಸರಾಕ್ಕೆ ಆಹ್ವಾನಿಸಿರುವುದರಿಂದ ಒಂದು ಲಕ್ಷಕ್ಕೂ ಹೆಚ್ಚು ಮಂದಿ ಭಾಗವಹಿಸುವ ನಿರೀಕ್ಷೆ ಇರುವುದರಿಂದ ಯುವ ದಸರಾ ಕಾರ್ಯಕ್ರಮದ ಸ್ಥಳ, ಮಾರ್ಗದುದ್ದಕ್ಕೂ ಪೊಲೀಸ್ ಸಿಬ್ಬಂದಿಗಳನ್ನು ನಿಯೋಜನೆ ಮಾಡಬೇಕಾಗಿದೆ ಎಂದು ಪೊಲೀಸ್ ಆಯುಕ್ತರು ಇದೇ ಸಂದರ್ಭ ತಿಳಿಸಿದರು.

ಅಂತಿಮ ದಿನ ಅರಮನೆ ಆವರಣ, ಸುತ್ತಲಿನ ಪ್ರದೇಶ, ಜಂಬೂ ಸವಾರಿ ಮಾರ್ಗ, ಬನ್ನಿಮಂಟಪದ ಪಂಜಿನ ಕವಾಯತು ಮೈದಾನದಲ್ಲೂ ಹೆಚ್ಚಿನ ಸಂಖ್ಯೆಯಲ್ಲಿ ಸಿಬ್ಬಂದಿಗಳನ್ನು ಭದ್ರತೆಗಾಗಿ ನಿಯೋಜಿಸಬೇಕಾಗಿದ್ದು, ನಗರ ಸಿವಿಲ್, ಸಿಎಆರ್, ಕೆಎಸ್‌ಆರ್‌ಪಿ, ಚಾಮುಂಡಿ ಪಡೆ, ಮೌಂಟೆಡ್, ಮಹಿಳಾ ಮತ್ತು ಸಂಚಾರ ಪೊಲೀಸ್ ಜೊತೆಗೆ ಜಿಲ್ಲಾ ಪೊಲೀಸ್, ಡಿಎಆರ್ ತುಕಡಿಗಳನ್ನೂ ಬಳಸಿಕೊಳ್ಳಲು ಪೂರ್ವ ತಯಾರಿ ಮಾಡಿಕೊಳ್ಳಲಾಗಿದೆ ಎಂದು ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ಎಡಿಜಿಪಿ ಅವರಿಗೆ ತಿಳಿಸಿದರು.

ಈ ಬಾರಿ ಅದ್ಧೂರಿಯಾಗಿ ದಸರಾ ಆಚರಿಸಲು ಸರ್ಕಾರ ನಿರ್ಧರಿಸಿರುವುದರಿಂದ ಲಕ್ಷಾಂತರ ಮಂದಿ ಭಾಗವಹಿಸುವ ನಿರೀಕ್ಷೆ ಇದ್ದು, ಅದಕ್ಕನುಗುಣವಾಗಿ ಭದ್ರತಾ ವ್ಯವಸ್ಥೆ ಮಾಡಿ ಕಟ್ಟೆಚ್ಚರ ವಹಿಸಲು ಹೆಚ್ಚುವರಿ ಸಿಬ್ಬಂದಿ ಅಗತ್ಯವಿದೆ ಎಂದು ಸೀಮಾ ಲಾಟ್ಕರ್ ತಿಳಿಸಿದರು.

> "ಮೈಸೂರು ನಗರ ಮತ್ತು ಜಿಲ್ಲಾ ಪೊಲೀಸರ ಜೊತೆಗೆ ನೆರೆಯ ಜಿಲ್ಲೆಗಳೂ ಸೇರಿದಂತೆ ರಾಜ್ಯದಾದ್ಯಂತ ಇನ್ನಿತರೆ ಜಿಲ್ಲೆಗಳಿಂದ ಉನ್ನತ ಅಧಿಕಾರಿಗಳು, ಸಿಬ್ಬಂದಿಯನ್ನು ದಸರಾ ಬಂದೋಬಸ್ತ್‌ಗೆ ಮಂಜೂರು ಮಾಡಲಾಗುವುದು. ಅವರಿಗೆ ಸೂಕ್ತ ಮಾರ್ಗದರ್ಶನ ನೀಡಿ ಕರ್ತವ್ಯ ನಿರ್ವಹಿಸಲು ಸೂಚಿಸುವ ಜೊತೆಗೆ ಊಟ–ತಿಂಡಿ, ವಸತಿ ವ್ಯವಸ್ಥೆ ಕಲ್ಪಿಸಬೇಕು.
>
> –ಆರ್.ಹಿತೇಂದ್ರ, ಎಡಿಜಿಪಿ

ಒಟ್ಟಾರೆ ಈ ಬಾರಿಯ ದಸರಾ ಮಹೋತ್ಸವಕ್ಕೆ ವ್ಯವಸ್ಥಿತವಾಗಿ ಭದ್ರತೆ ಒದಗಿಸಿ ಯಾವುದೇ ಸಣ್ಣಪುಟ್ಟ ಲೋಪ ದೋಷವಾಗದಂತೆ ಕಟ್ಟೆಚ್ಚರ ವಹಿಸಿ ನಾಡಹಬ್ಬವನ್ನು ಯಶಸ್ವಿಗೊಳಿಸಬೇಕೆಂದು ಎಡಿಜಿಪಿಯವರು ಇದೇ ಸಂದರ್ಭ ತಾಕೀತು ಮಾಡಿದರು.

ದಕ್ಷಿಣ ವಲಯ ಡಿಐಜಿ ಡಾ. ಬೋರಲಿಂಗಯ್ಯ, ಎಸ್ಪಿ ಎನ್. ವಿಷ್ಣುವರ್ಧನ, ಡಿಸಿಪಿಗಳಾದ ಎಂ. ಮುತ್ತುರಾಜ್, ಎಸ್. ಜಾಹ್ನವಿ, ಮಂಡ್ಯ, ಕೊಡಗು, ಹಾಸನ ಮತ್ತು ಚಾಮರಾಜನಗರ ಎಸ್ಪಿಗಳೂ ಸಭೆಯಲ್ಲಿ ಭಾಗವಹಿಸಿದ್ದರು.

ಜಂಬೂ ಸವಾರಿಯಲ್ಲಿ ಭಾಗವಹಿಸುವ ಜಾನಪದ ಕಲಾವಿದರಿಗೆ 5 ಸಾವಿರ ರೂ. ಸಂಭಾವನೆ ನೀಡಲು ಆಗ್ರಹ

ಮೈಸೂರು, ಸೆ.25 (ಜಿಎ)–ಜಂಬೂ ಸವಾರಿ ಮೆರವಣಿಗೆಯಲ್ಲಿ ಪಾಲ್ಗೊಳ್ಳುವ ಜಾನಪದ ಕಲಾವಿದರಿಗೆ 5 ಸಾವಿರ ರೂ. ಸಂಭಾವನೆ ನೀಡುವಂತೆ ಮೈಸೂರು, ಚಾಮರಾಜನಗರ, ಮಂಡ್ಯ ಜಿಲ್ಲೆಗಳ ಜಾನಪದ ಕಲಾವಿದರ ಒಕ್ಕೂಟ ಒತ್ತಾಯಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಒಕ್ಕೂಟದ ಅಧ್ಯಕ್ಷ ಎಲ್.ಮಹದೇವಪ್ಪ ಮಾತನಾಡಿ, ದಸರಾ ಮಹೋತ್ಸವದ ವಿವಿಧ ಕಾರ್ಯಕ್ರಮದಲ್ಲಿ ಭಾಗವಹಿಸುವ ಕಲಾವಿದರಿಗೆ ಉತ್ತಮ ಹೋಟೆಲ್‌ಗಳಲ್ಲಿ ತಂಗಲು ಅವಕಾಶ ಕಲ್ಪಿಸಿ, ಲಕ್ಷಾಂತರ ರೂ. ಸಂಭಾವನೆ ನೀಡುತ್ತಾರೆ. ಆದರೆ, ಜಂಬೂಸವಾರಿ ಮೆರವಣಿಗೆ ಮಾರ್ಗದಲ್ಲಿ ಸಾಗಿ ನಾಡಿನ ಸಂಸ್ಕೃತಿ, ಕಲೆಯನ್ನು ಸಾರುವ ಕಲಾವಿದರಿಗೆ 1,750 ರೂ. ನಿಗದಿಪಡಿಸಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.

ಕಲಾವಿದರು ಉಳಿದುಕೊಳ್ಳುವ ಚೌಲ್ಟ್ರಿಗಳಲ್ಲಿ ಸೂಕ್ತ ಶೌಚಾಲಯ, ಊಟ ತಿಂಡಿ ಮೊದಲಾದ ವ್ಯವಸ್ಥೆ ಇರುವುದಿಲ್ಲ. ವೇಷ ಭೂಷಣ, ಜಾನಪದ ಸಾಮಗ್ರಿ ಹೊತ್ತು ಬಾಡಿಗೆ ವಾಹನದಲ್ಲಿ ಬರುವ ವೆಚ್ಚವೇ ಅಧಿಕವಾಗಿರುತ್ತದೆ. ಹೀಗಾಗಿ ಕನಿಷ್ಠ ತಲಾ 5 ಸಾವಿರ ರೂ., ನೀಡಬೇಕು. ಸಿಎಂ ಈ ಬಾರಿ ದಸರಾ ವೆಚ್ಚಕ್ಕಾಗಿ ಹತ್ತು ಕೋಟಿ ರೂ., ಹೆಚ್ಚುವರಿಯಾಗಿ ನೀಡಿದ್ದಾರೆ. ಹೀಗಾಗಿ ತಲಾ ಐದು ಸಾವಿರ ರೂ. ನೀಡುವುದರಿಂದ ಕೇವಲ 35 ಲಕ್ಷ ಮಾತ್ರ ವೆಚ್ಚವಾಗುತ್ತದೆ. ಹಾಡುವ ಕಲಾವಿದರಿಗೆ ಲಕ್ಷಾಂತರ ರೂ., ನೀಡಿ ಕರೆಸಿಕೊಳ್ಳುವವರು ಜಾನಪದ ಕಲಾವಿದರ ಬಗ್ಗೆ ತಾರತಮ್ಯ ತೋರುವುದು ಏಕೆ ಎಂದು ಪ್ರಶ್ನಿಸಿದರು.

ದಸರಾ ಉಪ ಸಮಿತಿಗಳಲ್ಲಿ ಕಲಾವಿದರೇ ಇರುವುದಿಲ್ಲ. ಎಲ್ಲಾ ಅಧಿಕಾರಿಗಳ ದರ್ಬಾರ್ ಆಗಿರುತ್ತದೆ. ಹೀಗಾದರೆ ನಮ್ಮ ಸಂಕಷ್ಟ ಕೇಳುವವರು ಯಾರು, ತಮ್ಮ ಸಮಸ್ಯೆ, ಬೇಡಿಕೆ ಬಗ್ಗೆ ಜಿಲ್ಲಾ ಉಸ್ತುವಾರಿ ಸಚಿವರು, ಜಿಲ್ಲಾಡಳಿತ, ಪೊಲೀಸ್ ಆಯುಕ್ತರು ಗಮನಹರಿಸಬೇಕೆಂದು ಕೋರಿದರು.

ಸುದ್ದಿಗೋಷ್ಠಿಯಲ್ಲಿ ಒಕ್ಕೂಟದ ಸದಸ್ಯರಾದ ಕಿರಾಳು ಮಹೇಶ್, ರೇವಣ್ಣ, ಶಿವಲಿಂಗಪ್ಪ, ಮಲ್ಲೇಶ್, ಪ್ರಭು, ಕಂಸಾಳೆ ರವಿ ಉಪಸ್ಥಿತರಿದ್ದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ತನಿಖೆಗೆ ಆದೇಶ

ದಸರಾ ಮಹೋತ್ಸವದ ಮೇಲೆ ಕರಿ ನೆರಳು?...

ಮೈಸೂರು, ಸೆ.25(ಬಿಎಲ್‌ಯು)– ಶಕ್ತಿ ಕೇಂದ್ರ ವಿಧಾನಸೌಧದ ಮೂರನೆ ಮಹಡಿಯಲ್ಲಿ ಆಸೀನರಾಗುವ ಪ್ರಜಾ 'ಪ್ರಭು' ವಿರುದ್ಧವೇ ಎಫ್‌ಐಆರ್ ದಾಖಲಾದರೆ ಎದುರಾಗುವ ರಾಜಕೀಯ ಅಸ್ಥಿರತೆ ವಿಶ್ವ ವಿಖ್ಯಾತ ಮೈಸೂರು ದಸರಾ ಮಹೋತ್ಸವದ ಮೇಲೆ ಕರಿ ನೆರಳು ಬೀರಬಹುದೇ ಎಂಬ ಆತಂಕ ಎದುರಾಗಿದೆ.



ಮೈಸೂರು ದಸರಾ ಮಹೋತ್ಸವದ ಉದ್ಘಾಟನೆಗೆ ದಿನಗಣನೆ ಆರಂಭವಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಉಪಸ್ಥಿತಿಯಲ್ಲಿ ಅ.3ರಂದು ಖ್ಯಾತ ಸಾಹಿತಿ ಹಂಪ ನಾಗರಾಜಯ್ಯ ಚಾಮುಂಡಿಬೆಟ್ಟದಲ್ಲಿ ದಸರಾ ಮಹೋತ್ಸವಕ್ಕೆ ಚಾಲನೆ ನೀಡಲಿದ್ದಾರೆ.

ತರುವಾಯ ಅಕ್ಟೋಬರ್ 12ರಂದು ಮೈಸೂರು ಅರಮನೆಯಲ್ಲಿ ವಿಶ್ವ ವಿಖ್ಯಾತ ಜಂಬೂ ಸವಾರಿ ಮೆರವಣಿಗೆಗೆ ಸಿದ್ದರಾಮಯ್ಯ ಚಾಲನೆ ನೀಡಬೇಕಿದೆ. ಆದರೆ ಜನಪ್ರತಿನಿಧಿಗಳ ನ್ಯಾಯಾಲಯದ ಆದೇಶದ ಪ್ರಕಾರ ನಾಳೆಯೊಳಗೆ ಸಿದ್ದರಾಮಯ್ಯ ವಿರುದ್ಧ ಎಫ್‌ಐಆರ್ ದಾಖಲಾಗಲಿದೆ.

ಇಂತಹ ಗಂಭೀರ ಆರೋಪ ಬಂದ ಸಂದರ್ಭದಲ್ಲಿ ಮುಖ್ಯಮಂತ್ರಿ ಸ್ಥಾನದಲ್ಲಿ ಇರುವವರಿಗೆ ಸಹಜವಾಗಿ ಮುಜುಗರ ಉಂಟಾಗಲಿದೆ. ಜೊತೆಗೆ ರಾಜೀನಾಮೆಗೆ ರಾಜ್ಯ ಹಾಗೂ ರಾಷ್ಟ್ರ ಮಟ್ಟದಲ್ಲಿ ವಿಪಕ್ಷಗಳಿಂದ ತೀವ್ರ ಒತ್ತಡ ಉಂಟಾಗಿ, ಹೋರಾಟಗಳು ನಡೆಯಲಿದೆ. ಈ ಎಲ್ಲಾ ಕಾರಣಗಳಿಂದ ಒಂದು ರೀತಿಯಲ್ಲಿ ರಾಜಕೀಯ ಅಸ್ಥಿರತೆಯ ವಾತಾವರಣ ನಿರ್ಮಾಣವಾಗಲಿದೆ. ಇದರಿಂದ ಸಿದ್ದರಾಮಯ್ಯ ಏನಾದರೂ ರಾಜೀನಾಮೆ ನೀಡುತ್ತಾರೆಯೇ... ಎಂಬ ಹತ್ತಾರು ಪ್ರಶ್ನೆಗಳು ಜನರನ್ನು ಕಾಡಲಿದೆ.

ಒಂದು ವೇಳೆ ಸಿದ್ದರಾಮಯ್ಯ ರಾಜೀನಾಮೆ ನೀಡಿದರೆ ದಸರಾ ಆಚರಣೆಯಲ್ಲಿ ಏನೆಲ್ಲಾ ಬದಲಾವಣೆ ಆಗಬಹುದು, ಯಾವ ರೀತಿ ಶಿಷ್ಟಾಚಾರ ಪಾಲಿಸಬೇಕು, ಯಾವ ಗಣ್ಯರನ್ನು ಆಹ್ವಾನಿಸಬೇಕು ಎಂಬ ಗೊಂದಲ ಅಧಿಕಾರಿಗಳನ್ನು ಕಾಡದೆ ಇರದು. ಈ ಎಲ್ಲಾ ಬೆಳವಣಿಗೆಗಳ ಕರಿ ನೆರಳು ಮೈಸೂರು ದಸರಾ ಮೇಲೆ ಬೀರಲಿದೆ ಎಂಬ ಆತಂಕ ಎದುರಾಗಿದೆ.

ದಸರಾ ವಸ್ತುಪ್ರದರ್ಶನದಲ್ಲಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ

ಮೈಸೂರು, ಸೆ.25– ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ವತಿಯಿಂದ ನಾಡಹಬ್ಬ ಮೈಸೂರು ದಸರಾ–2024ರ ಅಂಗವಾಗಿ ಅ.3ರಿಂದ ಡಿ.31 ರವರೆಗೆ ಪ್ರತಿದಿನ ಸಂಜೆ 6.30 ಗಂಟೆಯಿಂದ 9.30 ಗಂಟೆವರೆಗೆ ದಸರಾ ವಸ್ತು ಪ್ರದರ್ಶನ ಪ್ರಾಧಿಕಾರದ ಆವರಣದಲ್ಲಿನ ಪಿ.ಕಾಳಿಂಗರಾವ್ ಗಾನ ಮಂಟಪದಲ್ಲಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ.



ಆಸಕ್ತ ಕಲಾವಿದರು, ಸಂಘ ಸಂಸ್ಥೆಯವರು ಕಳೆದ ಎರಡು ವರ್ಷಗಳಿಂದ ಪ್ರಾಧಿಕಾರ ಆವರಣದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಭಾಗವಹಿಸದೇ ಇರುವವರು ಭಾಗವಹಿಸಲು ಇಚ್ಛಿಸಿದಲ್ಲಿ ಕರ್ನಾಟಕ ದಸರಾ ವಸ್ತು ಪ್ರದರ್ಶನ ಪ್ರಾಧಿಕಾರದ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳ ಕಚೇರಿ ಅಥವಾ ಅಂಚೆ ಮೂಲಕ ಹಾಗೂ www.keaonline.in. ವೆಬ್‌ಸೈಟ್‌ನ ಮೂಲಕ ಅ.1ರೊಳಗೆ ಅರ್ಜಿಯನ್ನು ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ದೂ.ಸಂ: 0821–2523626, ಅಥವಾ ಕಚೇರಿಯ ವ್ಯವಸ್ಥಾಪಕರಾದ ನಂದಕುಮಾರ್ ಅವರ ಮೊ.ಸಂ: 72042–02444 ಅಥವಾ ವೆಂಕಟೇಶ್ ಅವರ ಮೊ.ಸಂ:9986846047 ಅನ್ನು ಸಂಪರ್ಕಿಸಬಹುದು ಎಂದು ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಮುಖ್ಯ ಅವರನ್ನು ಸಂಪರ್ಕಿಸಬಹುದು ಎಂದು ಪತ್ರಿಕಾ ಪ್ರಕಟಣೆ ತಿಳಿಸಿದೆ.

ದಸರಾ ಗಜಪಡೆ, ಅಶ್ವಪಡೆ ಸಮ್ಮುಖ ಇಂದು ಸಿಡಿಮದ್ದು ಸಿಡಿಸುವ ತಾಲೀಮು

ಮೈಸೂರು,ಸೆ.25(ಎಂಟಿವೈ)– ದಸರಾ ಮಹೋತ್ಸವದ ಜಂಬೂಸವಾರಿ ಮೆರವಣಿಗೆಯಲ್ಲಿ ಪಾಲ್ಗೊಳ್ಳುವ ಗಜಪಡೆ, ಅಶ್ವಪಡೆಗೆ ನಾಳೆ(ಸೆ.26) ಬೆಳಗ್ಗೆ 11 ಗಂಟೆಗೆ ದಸರಾ ವಸ್ತು ಪ್ರದರ್ಶನ ವಾಹನ ನಿಲುಗಡೆ ಸ್ಥಳದಲ್ಲಿ ಸಿಡಿಮದ್ದು ಸಿಡಿಸುವ ತಾಲೀಮು ನಡೆಸಲಾಗುತ್ತದೆ ಎಂದು ಡಿಸಿಎಫ್ ಡಾ.ಐ.ಬಿ.ಪ್ರಭುಗೌಡ ತಿಳಿಸಿದ್ದಾರೆ.



ದಸರಾ ಮಹೋತ್ಸವದ ಗಜಪಡೆಗೆ ಈಗಾಗಲೇ ಭಾರ ಹೊರುವ, ಮರದ ಅಂಬಾರಿ ಕಟ್ಟುವ ತಾಲೀಮು ನಡೆಸಲಾಗುತ್ತಿದ್ದು, ಗಜಪಡೆಯನ್ನು ಜಂಬೂಸವಾರಿ ಮೆರವಣಿಗೆಗೆ ಅಣಿಗೊಳಿಸಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಅಂತಿಮ ಹಂತದ ತಾಲೀಮು ಪ್ರಕ್ರಿಯೆ ಆರಂಭಿಸಲಾಗಿದ್ದು, ಜಂಬೂಸವಾರಿ ದಿನ ಸಿಡಿಸುವ ಸಿಡಿಮದ್ದಿನ ಶಬ್ದಕ್ಕೆ ಆನೆಗಳನ್ನು ಪಳಗಿಸುವ ನಿಟ್ಟಿನಲ್ಲಿ ತಾಲೀಮು ನಡೆಸಲಾಗುತ್ತಿದೆ. ಕಳೆದ ವರ್ಷದಂತೆ ಈ ಬಾರಿಯೂ ದಸರಾ ವಸ್ತು ಪ್ರದರ್ಶನ ವಾಹನ ನಿಲುಗಡೆ ಸ್ಥಳದಲ್ಲಿ ಸಿಡಿಮದ್ದು ಸಿಡಿಸುವ ತಾಲೀಮು ನಡೆಸಲಾಗುತ್ತಿದೆ. ನಾಳೆ ಗಜಪಡೆಯ ಆನೆಗಳ ಮುಂದೆ ಮೊದಲ ಹಂತದ ಸಿಡಿಮದ್ದು ತಾಲೀಮು ನಡೆಸಲಾಗುತ್ತಿದೆ. ಸೆ.29ರಂದು ಎರಡನೇ ಹಾಗೂ ಅ.1ರಂದು ಮೂರನೇ ಸಿಡಿಮದ್ದು ತಾಲೀಮು ನಡೆಸಲಾಗುತ್ತದೆ ಎಂದು ತಿಳಿಸಿದ್ದಾರೆ.

ಅಶ್ವಪಡೆಯೂ ಭಾಗಿ: ಸಿಡಿಮದ್ದು ಸಿಡಿಸುವ ತಾಲೀಮಿನ ವೇಳೆ ಅಶ್ವಾರೋಹಿ ದಳದ 35ಕ್ಕೂ ಹೆಚ್ಚು ಕುದುರೆಗಳು ಪಾಲ್ಗೊಳ್ಳಲಿವೆ. ಜಂಬೂಸವಾರಿ ಮೆರವಣಿಗೆಯಲ್ಲಿ ಚಿನ್ನದ ಅಂಬಾರಿ ಹೊತ್ತ ಆನೆ ಮುಂದೆ ಅಶ್ವಪಡೆಯ ಒಂದು ತುಕಡಿ ಹಾಗೂ ಮೆರವಣಿಗೆ ಆರಂಭದಲ್ಲಿ ಕೆಲ ಕುದುರೆಗಳು ಪಾಲ್ಗೊಳ್ಳಲಿವೆ. ಈ ಹಿನ್ನೆಲೆಯಲ್ಲಿ ಸಿಡಿಮದ್ದು ಶಬ್ದಕ್ಕೆ ಒಗ್ಗಿಕೊಳ್ಳುವಂತೆ ಸಿಡಿಮದ್ದು ಸಿಡಿತದ ತಾಲೀಮಿನಲ್ಲಿ ಜಂಬೂಸವಾರಿ ಮೆರವಣಿಗೆಯಲ್ಲಿ ಪಾಲ್ಗೊಳ್ಳುವ ಅಶ್ವಪಡೆಯೂ ಸಿಡಿಮದ್ದು ಸಿಡಿತದ ತಾಲೀಮಿನಲ್ಲಿ ಪಾಲ್ಗೊಳ್ಳಲಿವೆ.

7 ಫಿರಂಗಿ 3 ಸುತ್ತು: ನಗರ ಸಶಸ್ತ್ರ ಮೀಸಲು ಪಡೆಯ 30 ಸಿಬ್ಬಂದಿಯುಳ್ಳ ಸಿಡಿಮದ್ದು ಸಿಡಿಸುವ ತಂಡವನ್ನು ಈಗಾಗಲೇ ರಚಿಸಲಾಗಿದ್ದು, ಕಳೆದ ಒಂದು ವಾರದಿಂದ ಒಣ ತಾಲೀಮು ನಡೆಸಿದ್ದರು. ನಾಳೆ ನಡೆಯುವ ಮೊದಲ ಸಿಡಿಮದ್ದು ತಾಲೀಮಿನಲ್ಲಿ 7 ಫಿರಂಗಿ ಬಳಸಲಾಗುತ್ತಿದ್ದು, ಒಂದೊಂದು ಫಿರಂಗಿಯಲ್ಲೂ 3 ಸುತ್ತಿನಲ್ಲಿ ಸಿಡಿಮದ್ದು ಸಿಡಿಸಲಾಗುತ್ತದೆ. ಈಗಾಗಲೇ ಸಿಡಿಮದ್ದು ತಯಾರಿಸುವ ಪ್ರಕ್ರಿಯೆ ಪೂರ್ಣಗೊಂಡಿದ್ದು, ನಾಳೆ ಬೆಳಗ್ಗೆ 11ರಿಂದ 12 ಗಂಟೆಯೊಳಗೆ 21 ಬಾರಿ ಸಿಡಿಮದ್ದು ಸಿಡಿಸಲಾಗುತ್ತದೆ.

ನಾಳೆ ಮೈಸೂರಲ್ಲಿ ಶ್ರೀ ಅಂಬಾ ಪೂಜಾ ಮಹೋತ್ಸವ

ಮೈಸೂರು, ಸೆ.25(ಜಿಎ)–ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಚಿಕ್ಕ ಗರಡಿ ಸಂಘದ ವತಿಯಿಂದ 112ನೇ ವರ್ಷದ ಶ್ರೀ ಅಂಬಾ ಪೂಜಾ ಮಹೋತ್ಸವವನ್ನು ಅಶೋಕಪುರಂನ 11ನೇ ಕ್ರಾಸ್‌ನಲ್ಲಿರುವ ಚಿಕ್ಕಗರಡಿ ಆವರಣದಲ್ಲಿ ಸೆ.27ರಂದು 11 ಗಂಟೆಗೆ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಂಘದ ಉಪಾಧ್ಯಕ್ಷ ಶಾಂತರಾಜು ಈ ವಿಷಯ ತಿಳಿಸಿ, ಅಂದು ಬೆಳಗ್ಗೆ 8 ಗಂಟೆಗೆ ರಥೋತ್ಸವ ನಡೆಯಲಿದ್ದು, ನಂತರ ವೇದಿಕೆ ಕಾರ್ಯಕ್ರಮ ಆರಂಭವಾಗಲಿದೆ. ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಕಾರ್ಯಕ್ರಮ ಉದ್ಘಾಟಿಸುವರು, ಶಾಸಕ ಟಿ.ಎಸ್.ಶ್ರೀವತ್ಸ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಸಂಸದರಾದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಸುನಿಲ್ ಬೋಸ್, ಶಾಸಕ ದರ್ಶನ್ ಧ್ರುವ ನಾರಾಯಣ್, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ಬಿ.ರಂಗೇಗೌಡ, ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ಆದಿ ಕರ್ನಾಟಕ ಮಹಾ ಸಂಸ್ಥೆ ಅಧ್ಯಕ್ಷ ಪಿ.ಸಿದ್ದರಾಜು, ಮಾಜಿ ಮೇಯರ್ ಪುರುಷೋತ್ತಮ ಮತ್ತಿತರರು ಆಗಮಿಸಲಿದ್ದಾರೆ ಎಂದರು. ಗೋಷ್ಠಿಯಲ್ಲಿ ಸಂಘದ ಅಧ್ಯಕ್ಷ ಗಂಗಾಧರ್, ಸಿದ್ದೇಶ್, ಕುಮಾರ್, ಪೈಲ್ವಾನ್ ಕೃಷ್ಣ ಉಪಸ್ಥಿತರಿದ್ದರು.

ದಸರಾ: ಐನಾಕ್ಸ್, ಡಿಆರ್‌ಸಿಯಲ್ಲಿ ಅ.4ರಿಂದ ಚಲನಚಿತ್ರಗಳ ಪ್ರದರ್ಶನ

ಮೈಸೂರು, ಸೆ.25(ಜಿಎ)–ದಸರಾ ಚಲನಚಿತ್ರೋತ್ಸವದ ಅಂಗವಾಗಿ ಉಪ ಸಮಿತಿ ವತಿಯಿಂದ ಅಕ್ಟೋಬರ್ 4ರಿಂದ 10ರವರೆಗೆ ನಗರದ ಮಾಲ್ ಆಫ್ ಮೈಸೂರಿನ ಐನಾಕ್ಸ್ ಹಾಗೂ ಡಿಆರ್‌ಸಿ ಮಲ್ಟಿಪ್ಲೆಕ್ಸ್‌ನಲ್ಲಿ ಚಲನಚಿತ್ರಗಳ ಪ್ರದರ್ಶನವನ್ನು ಏರ್ಪಡಿಸಲಾಗಿದೆ.

ಈ ಸಂಬಂಧ ಸೆ.26ರಂದು ಬೆಳಗ್ಗೆ 10.30ರಿಂದ ಸಂಜೆ 4.30ರವರೆಗೆ ನಗರದ ಧನ್ವಂತರಿ ರಸ್ತೆಯಲ್ಲಿರುವ ವಾರ್ತಾ ಹಾಗೂ ಸಾರ್ವಜನಿಕ ಸಂಪರ್ಕ ಇಲಾಖೆ ಕಚೇರಿಯಲ್ಲಿ ಸಿನಿಮಾ ಪ್ರಿಯರಿಗೆ ಚಲನಚಿತ್ರೋತ್ಸವ ಪ್ರದರ್ಶನದ ಪಾಸ್ ವಿತರಣೆ

ಇಂದು ಪಾಸ್ ವಿತರಣೆ

ಮಾಡಲಾಗುವುದು. ಪಾಸ್ ದರ ಸಾಮಾನ್ಯರಿಗೆ 500 ರೂ.ಗಳಾಗಿದ್ದರೆ, ವಿದ್ಯಾರ್ಥಿಗಳಿಗೆ ಹಾಗೂ ಹಿರಿಯ ನಾಗರಿಕರಿಗೆ 300 ರೂ.ಗಳಾಗಿರುತ್ತವೆ. ಈ ಪಾಸ್ ಏಳು ದಿನಗಳವರೆಗೂ ಚಾಲ್ತಿಯಲ್ಲಿರುತ್ತದೆ.

ಪಾಸ್ ಪಡೆದುಕೊಳ್ಳಲು ಆಧಾರ್ ಕಾರ್ಡ್ ಪ್ರತಿಯನ್ನು ತರತಕ್ಕದ್ದು. ಹೆಚ್ಚಿನ ಮಾಹಿತಿಗಾಗಿ ಶ್ರೇಯಸ್, ಮೊ.ಸಂ: 7892543852 ಅನ್ನು ಸಂಪರ್ಕಿಸಬಹುದು ಎಂದು ಚಲನಚಿತ್ರೋತ್ಸವ ಉಪ ಸಮಿತಿ ಕಾರ್ಯದರ್ಶಿ ಹರೀಶ್ ತಿಳಿಸಿದ್ದಾರೆ.

ಶ್ರೀ ಶಂಕರ ಮಠದ ಅಭಿನವ ಶಂಕರಾಲಯದ ಶ್ರೀ ಶಾರದಾಪರಮೇಶ್ವರಿಯವರ ಸನ್ನಿಧಿಯಲ್ಲಿ

ಅ.2ರಿಂದ 17ರವರೆಗೆ ಶ್ರೀ ಶಾರದಾ ಶರನ್ನವರಾತ್ರೋತ್ಸವ



ಮೈಸೂರು,ಸೆ.25(ಪಿಎಂ)–ಮೈಸೂರಿನ ಫೋರ್ಟ್ ಮೊಹಲ್ಲಾದ ಶೃಂಗೇರಿ ಶ್ರೀಶಂಕರ ಮಠದ ಅಭಿನವ ಶಂಕರಾಲಯದ ಶ್ರೀಶಾರದಾಪರಮೇಶ್ವರಿಯವರ ಸನ್ನಿಧಿಯಲ್ಲಿ ಅ.2ರಿಂದ 17ರವರೆಗೆ ಶ್ರೀ ಶಾರದಾ ಶರನ್ನವರಾತ್ರೋತ್ಸವ 2024 ಹಾಗೂ ಇದರ ಪ್ರಯುಕ್ತ ಮಹಾಪೂಜೆ ಮತ್ತು ವಿವಿಧ ಹೋಮಗಳನ್ನು ಆಯೋಜಿಸಲಾಗಿದೆ.

ಶ್ರೀ ಶಾರದಾ ಪೀಠಾಧೀಶ ಶ್ರೀ ಭಾರತೀ ತೀರ್ಥ ಸ್ವಾಮೀಜಿ ಹಾಗೂ ಶ್ರೀ ವಿಧುಶೇಖರ ಭಾರತೀ ಸ್ವಾಮೀಜಿ ಅವರ ಪೂರ್ಣಾನುಗ್ರಹದಿಂದ ಈ ಪೂಜಾ ವಿಧಿವಿಧಾನ ಆಯೋಜಿಸಲಾಗಿದೆ. ಅ.2ರಂದು ಬೆಳಗ್ಗೆ 7ರಿಂದ 9.30ರವರೆಗೆ ಶ್ರೀ ಶಾರದಾ ಪರಮೇಶ್ವರಿಯವರ ಸನ್ನಿಧಿಯಲ್ಲಿ ಮಹಾಭಿಷೇಕ, ಹರಿದ್ರಾಲಂಕಾರ ದರ್ಶನ (10 ನಿಮಿಷಗಳು ಮಾತ್ರ), ಜಗತ್ಪ್ರಸೂತಿಕಾಲಂಕಾರ–ಮಹಾಪೂಜೆ, ಮಹಾಮಂಗಳಾರತಿ ಮತ್ತು ತೀರ್ಥ ಪ್ರಸಾದ ವಿನಿಯೋಗ, ಶ್ರೀ ಚಂದ್ರಶೇಖರ ಭಾರತೀ ಮಹಾಸ್ವಾಮಿಗಳವರ ಚರಣಾರಾಧಾನ ಪ್ರಯುಕ್ತ ಶ್ರೀ ಶಂಕರ ಸನ್ನಿಧಿಯಲ್ಲಿ ಮಹಾನ್ಯಾಸಪೂರ್ವಕ ರುದ್ರಾಭಿಷೇಕ, ಮಹಾಪೂಜೆ ಮತ್ತು ಮಂಗಳಾರತಿ ವಿಧಿವಿಧಾನಗಳು ನಡೆಯಲಿವೆ.

ಹೋಮಗಳ ವಿವರ: ಅ.2ರಂದು ಮಹಾಭಿಷೇಕ, 3ರಂದು ಶ್ರೀಸೂಕ್ತ ಹೋಮ, 4ರಂದು ಪುರುಷ ಸೂಕ್ತ ಹೋಮ, 5ರಂದು ರುದ್ರೈಕಾದಶಿನೀ ಹೋಮ, 6ರಂದು ಸಹಸ್ರ ಮೋದಕ ಗಣಪತಿ ಹೋಮ, 7ರಂದು ಲಲಿತಾ ಹೋಮ, 8ರಂದು ಶ್ರೀಸುಬ್ರಹ್ಮಣ್ಯ ಹೋಮ, 9ರಂದು ವಿದ್ಯಾಸರಸ್ವತೀ ಹೋಮ, 10ರಂದು ಶ್ರೀ ದುರ್ಗಾ ಹೋಮ, 11ರಂದು ಶ್ರೀ ನವಚಂಡಿಕಾ ಹೋಮ, 12ರಂದು ಶ್ರೀಧನ್ವಂತರಿ ಹೋಮ, 13ರಂದು ಶ್ರೀಲಕ್ಷ್ಮೀನಾರಾಯಣ ಹೃದಯ ಹೋಮ, 14ರಂದು ನವಗ್ರಹ ಸಹಿತ ಮೃತ್ಯುಂಜಯ ಹೋಮ, 15ರಂದು ಶ್ರೀ ಗಾಯತ್ರಿ ಹೋಮ, 16ರಂದು ಶ್ರೀ ಕುಬೇರಲಕ್ಷ್ಮೀ ಹೋಮ, 17ರಂದು ಏಕಚಂಡಿ ಹೋಮ ನಡೆಯಲಿದೆ.

ಶ್ರೀ ಶರನ್ನವರಾತ್ರಿಯ ಸೇವಾರ್ಥಗಳು ಹಾಗೂ ಹೋಮ ಸಂಕಲ್ಪ ಕಾಣಿಕೆಗಳ ಲಭ್ಯವಿವೆ. ಪ್ರತಿನಿತ್ಯ ಪ್ರತ್ಯೇಕ ಚಂಡಿ ಹೋಮ ಹಾಗೂ ಇತರೆ ಎಲ್ಲಾ ಹೋಮಗಳನ್ನು ಮಾಡಲು ಭಕ್ತಾದಿಗಳಿಗೆ ಅವಕಾಶ ಇರುತ್ತದೆ. ವಿಶೇಷ ಪೂಜೆ, ಹೋಮ ಸಂಕಲ್ಪ ಕಾಣಿಕೆಗಳನ್ನು ಸಮರ್ಪಣೆ ಮಾಡಲಿಚ್ಛಿಸುವ ಭಕ್ತರು ಶ್ರೀ ಮಠದ ಕಾರ್ಯಾಲಯ ಸಂಪರ್ಕಿಸಬಹುದು. ಶರನ್ನವರಾತ್ರಾ ಮಹೋತ್ಸವದಲ್ಲಿ ಭಕ್ತರು ದವಸಧಾನ್ಯ, ಹಣ್ಣುಗಳು ಹಾಗೂ ಖಾದ್ಯಗಳನ್ನು ಸಮರ್ಪಿಸಬಹುದು. ದೇಣಿಗೆ, ಕಾಣಿಕೆಗಳನ್ನು ಚೆಕ್ ಅಥವಾ ಡ್ರಾಫ್ಟ್ ಮೂಲಕ 'ಶ್ರೀ ಶಾರದಾ ಪೀಠಂ, ಮೈಸೂರು' ಎಂದು ನಮೂದಿಸಿ ಸಮರ್ಪಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಶ್ರೀ ಶರನ್ನವರಾತ್ರಿಯ ಸೇವಾರ್ಥಗಳ ವಿವರ: ಶರನ್ನವರಾತ್ರಿಯ ಒಂದು ದಿವಸದ ಪೂಜಾ ಕಾಣಿಕೆ–800 ರೂ., ಚಂಡಿಕಾ ಪಾರಾಯಣ (1ಕ್ಕೆ)–500, ಪಂಚಾಮೃತ ಅಭಿಷೇಕ–150, ಅಕ್ಷರಾಭ್ಯಾಸ (ಪ್ರತಿ ದಿವಸ)–200, ಲಕ್ಷಾರ್ಚನೆ ಕಾಣಿಕೆ–100, ಸಹಸ್ರನಾಮ–60, ತ್ರಿಶತಿ–40, ಅಷ್ಟೋತ್ತರ–20 ರೂ. ನಿಗದಿಪಡಿಸಲಾಗಿದೆ.

ಹೋಮ ಸಂಕಲ್ಪ ಕಾಣಿಕೆಗಳ ವಿವರ: ಎಲ್ಲಾ ತರಹದ ಹೋಮ ಸಂಕಲ್ಪ ಕಾಣಿಕೆ–600 ರೂ., ಶ್ರೀ ರುದ್ರೈಕಾದಶಿನಿ ಹೋಮ–1 ಸಾವಿರ ರೂ., ಶ್ರೀ ಲಲಿತಾ ಹೋಮ–ಸಾವಿರ ರೂ., ಶ್ರೀ ನವಚಂಡಿಕಾ ಹೋಮ–ಸಾವಿರ ರೂ., ಒಂದು ದಿವಸದ ಪ್ರಸಾದ ವಿತರಣೆ ಕಾಣಿಕೆ–3 ಸಾವಿರ ರೂ., ಶ್ರೀ ಶಾರದಾ ಪರಮೇಶ್ವರಿಯವರ ಮೂಲ ಸನ್ನಿಧಿಯಲ್ಲಿ 1 ದಿನದ ಪುಷ್ಪಾಲಂಕಾರ ಸೇವಾ ಕಾಣಿಕೆ–10 ಸಾವಿರ ರೂ., ಪ್ರತಿ ದಿನ ಅನ್ನ ಸಂತರ್ಪಣೆ ಕಾಣಿಕೆ–10 ಸಾವಿರ ರೂ, ಶ್ರೀ ಶಾರದಾ ಪರಮೇಶ್ವರಿಯವರ ಒಂದು ದಿನದ ಹೊರ ಪ್ರಾಕಾರ ಪುಷ್ಪಾಲಂಕಾರ ಸೇವಾಕಾಣಿಕೆ–15 ಸಾವಿರ ರೂ., ಒಂದು ದಿನದ ಸಂಪೂರ್ಣ ಪ್ರಸಾದ ವಿತರಣೆ ಕಾಣಿಕೆ–15 ಸಾವಿರ ರೂ ನಿಗದಿಪಡಿಸಲಾಗಿದೆ. ಹೆಚ್ಚಿನ ವಿವರಗಳಿಗೆ ದೂ.ಸಂ. 0821–2448213, ಮೊ.ಸಂ. 9448185448 ಅನ್ನು ಸಂಪರ್ಕಿಸಬಹುದು.

ಮೈಸೂರು ಮಿತ್ರ

ಗುರುವಾರ 26 ಸೆಪ್ಟೆಂಬರ್ 2024

ಜೆಡಿಎಸ್ ಭದ್ರಕೋಟೆಯಲ್ಲಿ ಕಾಂಗ್ರೆಸ್ ಕಮಾಲ್

ಕೆಆರ್‌ಪೇಟೆ ಪುರಸಭಾ ಅಧ್ಯಕ್ಷರ ಚುನಾವಣೆಯಲ್ಲಿ ಜೆಡಿಎಸ್ ಸದಸ್ಯರ ಅಡ್ಡ ಮತದಾನ, ಕೆಲ ಸದಸ್ಯರ ಗೈರು, ಅಧ್ಯಕ್ಷೆಯಾಗಿ ಕಾಂಗ್ರೆಸ್ಸಿನ ಪಂಕಜಾ ಆಯ್ಕೆ



ಕಾಂಗ್ರೆಸ್ ಮುಖಂಡರೊಂದಿಗೆ ಪುರಸಭೆಯ ನೂತನ ಅಧ್ಯಕ್ಷೆಯಾಗಿ ಆಯ್ಕೆಯಾದ ಪಂಕಜಾ ಪ್ರಕಾಶ್.

ಕೆ.ಆರ್.ಪೇಟೆ: ಜೆಡಿಎಸ್ ಭದ್ರಕೋಟೆಯಾದ ಕೆ.ಆರ್.ಪೇಟೆ ಪುರಸಭೆಯಲ್ಲಿ ಕಾಂಗ್ರೆಸ್ ಕಮಾಲ್ ಮಾಡಿದೆ. ಕಾಂಗ್ರೆಸ್ ಪಕ್ಷದ ತಂತ್ರಗಾರಿಕೆಯಿಂದ ಪುರಸಭೆಯ ನೂತನ ಅಧ್ಯಕ್ಷೆಯಾಗಿ ಕಾಂಗ್ರೆಸ್ ಅಭ್ಯರ್ಥಿ ಪಂಕಜಾ ಪ್ರಕಾಶ್ ಆಯ್ಕೆಯಾಗಿದ್ದಾರೆ.

ಅಧ್ಯಕ್ಷ ಸ್ಥಾನದ ಆಕಾಂಕ್ಷಿಗಳಾಗಿ ಕಾಂಗ್ರೆಸ್ ಪಕ್ಷದಿಂದ ಪಂಕಜಾ ಹಾಗೂ ಜೆಡಿಎಸ್‌ನಿಂದ ಗಾಯತ್ರಿ ಸುಬ್ಬಣ್ಣ ನಾಮಪತ್ರವನ್ನು ಸಲ್ಲಿಸಿದ್ದರು. ನಂತರ ನಡೆದ ಚುನಾವಣೆಯಲ್ಲಿ ಜೆಡಿಎಸ್-ಬಿಜೆಪಿ ಪಕ್ಷದಿಂದ ಆಯ್ಕೆಯಾಗಿರುವ 12 ಸದಸ್ಯರು ಜೊತೆಗೆ ಶಾಸಕರು ಮತ್ತು ಸಂಸದರ ಮತವನ್ನು ಸಹ ಹೊಂದಿದ್ದು, 14 ಮತಗಳ ಬೆಂಬಲವಿತ್ತು ಅಧಿಕಾರದ ಗದ್ದುಗೆಯನ್ನು ಏರಲು ಅಗತ್ಯವಾದ ಮತಗಳನ್ನು ಹೊಂದಿತ್ತು. ಆದರೆ 10 ಮತಗಳನ್ನು ಹೊಂದಿದ್ದ ಕಾಂಗ್ರೆಸ್ ಪಕ್ಷವು ಜೆಡಿಎಸ್ ಪಕ್ಷದ ಮೂವರು ಸದಸ್ಯರು ಅಡ್ಡ ಮತದಾನ ಮಾಡುವಂತೆ ಮಾಡಿತು. ಜೊತೆಗೆ ಇಬ್ಬರು ಜೆಡಿಎಸ್ ಸದಸ್ಯರು ಹಾಗೂ ಓರ್ವ ಬಿಜೆಪಿ ಸದಸ್ಯ ಚುನಾವಣೆಗೆ ಗೈರು ಹಾಜರಾಗುವಂತೆ ತಂತ್ರಗಾರಿಕೆ ನಡೆಸಿ ಭರ್ಜರಿ ಗೆಲುವು ದಾಖಲಿಸುವ ಮೂಲಕ ಮೈತ್ರಿ ಕೂಟಕ್ಕೆ ಆಘಾತ ನೀಡಿತು.

ಅಧ್ಯಕ್ಷರ ಚುನಾವಣೆಯಲ್ಲಿ ಮತದಾನದ ಹಕ್ಕನ್ನು ಹೊಂದಿದ್ದ ಶಾಸಕ ಮಂಜು ಹಾಗೂ ಸಂಸದ ಹೆಚ್.ಡಿ.ಕುಮಾರಸ್ವಾಮಿ ಅವರು ಇಂದಿನ ಚುನಾವಣೆಗೆ ಗೈರು ಹಾಜರಾಗಿದ್ದರು. ಅಧಿಕಾರದ ಗದ್ದುಗೆ ಏರಲು ಬೇಕಾದ ಸ್ಪಷ್ಟ ಬಹುಮತಗಳನ್ನು ಹೊಂದಿದ್ದರೂ ಸ್ವತಃ ಶಾಸಕರೇ ಮುಂದೆ ನಿಂತು ಅಧ್ಯಕ್ಷರ ಆಯ್ಕೆ ಮಾಡಬೇಕಾಗಿತ್ತಾದರೂ ಅವರು ಚುನಾವಣೆಗೆ ಗೈರು ಹಾಜರಾಗಿದ್ದು ಅಚ್ಚರಿ ಮೂಡಿಸಿತು. ತಾಲೂಕು ದಂಡಾಧಿಕಾರಿಗಳು ಹಾಗೂ ಚುನಾವಣಾಧಿಕಾರಿಯಾದ ತಹಸೀಲ್ದಾರ್ ಅಶೋಕ್ ಅವರು ಕೈಎತ್ತುವ ಚುನಾವಣಾ ಪ್ರಕ್ರಿಯೆ ನಡೆಸಿದರು. ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದ ಪಂಕಜಾ ಪ್ರಕಾಶ್ 14 ಮತಗಳನ್ನು ಪಡೆದು ಅಧ್ಯಕ್ಷೆಯಾಗಿ ಆಯ್ಕೆ ಯಾಗಿದ್ದಾರೆ ಎಂದು ಘೋಷಿಸಿದರು. ಜೆಡಿಎಸ್ ಸದಸ್ಯರಾದ ಇಂದ್ರಾಣಿ ವಿಶ್ವನಾಥ್, ಪದ್ಮರಾಜು ಹಾಗೂ ಗಿರೀಶ್ ಕಾಂಗ್ರೆಸ್ ಅಭ್ಯರ್ಥಿ ಪರ ಕೈ ಎತ್ತುವ ಮೂಲಕ ಅಡ್ಡ ಮತದಾನ ಮಾಡಿದರು. ಬಿಜೆಪಿ ಸದಸ್ಯ ನಟರಾಜು, ಜೆಡಿಎಸ್ ಸದಸ್ಯರಾದ ಹೆಚ್.ಡಿ.ಅಶೋಕ್ ಮತ್ತು ಶೋಭಾ ದಿನೇಶ್ ಚುನಾವಣೆಗೆ ಗೈರು ಹಾಜರಾಗಿದ್ದರು. ಜೆಡಿಎಸ್ ಅಭ್ಯರ್ಥಿ ಗಾಯತ್ರಿ ಸುಬ್ಬಣ್ಣ 6 ಮತ ಪಡೆದು ಪರಾಜಿತರಾದರು.

ಆದಿಚುಂಚನಗಿರಿಯನ್ನು ಚಿನ್ನದ ಗಿರಿಯಾಗಿಸಿದವರು ಬಾಲಗಂಗಾಧರರು

ಮಂಡ್ಯ/ಆದಿಚುಂಚನಗಿರಿ,ಸೆ.25- ಚುಂಚನಗಿರಿಯನ್ನು ಚಿನ್ನದಗಿರಿಯಾಗಿಸಿದ ಸಂತಶ್ರೇಷ್ಠ, ಮಾತೃ ಹೃದಯಿ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಯವರ 50ನೇ ವರ್ಷದ ಪಟ್ಟಾಭಿಷೇಕ ಮಹೋತ್ಸವದಲ್ಲಿ ನಾವಿದ್ದೇವೆ. ಗುರುಗಳ ದೂರದರ್ಶಿತ್ವ ಮತ್ತು ದಿವ್ಯ ಜ್ಞಾನದ ಫಲದಿಂದ ಗುರು-ಹಿರಿಯರನ್ನು ಗೌರವಿಸುವ ಸಂಸ್ಕಾರವನ್ನು ಕಲಿಸುವ ಸಾವಿರಾರು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ ಮಾದರಿ ಗುರುಶ್ರೇಷ್ಠರೆನಿಸಿದ್ದಾರೆ ಎಂದು ಕೃಷಿ ಮತ್ತು ಮಂಡ್ಯ ಜಿಲ್ಲೆ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಅಭಿಪ್ರಾಯಪಟ್ಟರು.

ಬುಧವಾರ ಮಂಡ್ಯ ಜಿಲ್ಲೆಯ ನಾಗಮಂಗಲ ತಾಲೂಕಿನ ಶ್ರೀ ಕ್ಷೇತ್ರ ಆದಿಚುಂಚನಗಿರಿ ಕ್ಷೇತ್ರದ ಬಿಜಿಎಸ್ ಸಭಾಮಂಟಪದಲ್ಲಿ ನಡೆದ ಪದ್ಮಭೂಷಣ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಯವರ ವಾರ್ಷಿಕ ಪಟ್ಟಾಭಿಷೇಕ ಮಹೋತ್ಸವ, ಗುರು ಸಂಸ್ಮರಣೋತ್ಸವ ಮತ್ತು ರಾಜ್ಯಮಟ್ಟದ 45ನೇ "ಶ್ರೀ ಕಾಲಭೈರವೇಶ್ವರ ಜಾನಪದ ಕಲಾ ಮೇಳ" ಸಮಾರೋಪ ಸಮಾರಂಭದಲ್ಲಿ ಮಾತನಾಡಿದರು.

ಪ್ರತಿಯೊಬ್ಬರ ಸಾಧನೆಗೆ ಅವರ ಮಾತಾಪಿತೃಗಳ ಕೃಪಾಕಟಾಕ್ಷವೂ ದಾರಿದೀಪ ಎಂಬುದನ್ನು ಮನಗಂಡ ಶ್ರೀಗಳು ಆಧುನಿಕ ತಂತ್ರಜ್ಞಾನಾಧಾರಿತ ಸೌಲಭ್ಯಗಳುಳ್ಳ ಸುಸಜ್ಜಿತ ಆಸ್ಪತ್ರೆಗಳನ್ನು ಸ್ಥಾಪಿಸಿರುವುದು ಶ್ರೀಗಳು ಸಮಾಜದ ಮೇಲೆ ಇಟ್ಟಿದ್ದ ಅಗಾಧ ಕಾಳಜಿಯನ್ನು ತೋರಿಸುತ್ತದೆ. ಧಾರ್ಮಿಕ ಆಧ್ಯಾತ್ಮಿಕ ಮೌಲ್ಯಗಳನ್ನು ಬಿತ್ತರಿಸುತ್ತ ಇಷ್ಟೆಲ್ಲವನ್ನು ಸಮರ್ಥವಾಗಿ ಮುನ್ನಡೆಸುತ್ತಿರುವ ಜ್ಞಾನವಂತರು ಪ್ರತಿಭಾಸಂಪನ್ನರೂ ಆದ ಶ್ರೀ ನಿರ್ಮಲಾನಂದನಾಥರಿಗೆ ತಮ್ಮೆಲ್ಲರ ಪರವಾಗಿ ಗೌರವ ವಂದನೆಗಳು. ಭಾರತ ಸ್ವಾತಂತ್ರ್ಯ ಪಡೆದು 78 ವರ್ಷ ಕಳೆದರೂ ಪ್ರಜಾಪ್ರಭುತ್ವದ ಬೆಲೆಯನ್ನು ಕೆಲವರು ಅರ್ಥ ಮಾಡಿಕೊಂಡಿಲ್ಲ. ಇಂಥ ಸಂದರ್ಭದಲ್ಲಿಯೂ ಸನಾತನ ಸಂಸ್ಕೃತಿಯನ್ನು ಬಿಂಬಿಸುವ ಜಾತ್ಯತೀತ ಮಠವಾಗಿ ವಿಶ್ವದೆಲ್ಲೆಡೆ ಪಸರಿಸುವ, ಕ್ಷೇತ್ರದ ಗೌರವವನ್ನು ಎತ್ತಿಹಿಡಿಯುವ ಕಾಯಕದಲ್ಲಿ ನಾವೆಲ್ಲ ಕೈಜೋಡಿಸೋಣ ಎಂದು ಶುಭ ಹಾರೈಸಿದರು.



ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಯವರ ವಾರ್ಷಿಕ ಪಟ್ಟಾಭಿಷೇಕ ಮಹೋತ್ಸವ ಸಮಾರಂಭ

ಚಿತ್ರದುರ್ಗ ಕಬೀರಾನಂದ ಆಶ್ರಮದ ಶ್ರೀ ಶಿವಲಿಂಗಾನಂದ ಸ್ವಾಮೀಜಿ ಮಾತನಾಡಿ, ಡಾ.ಬಾಲಗಂಗಾಧರನಾಥ ಸ್ವಾಮೀಜಿ ಶ್ರೀಪೀಠವನ್ನಲಂಕರಿಸಿ ಐವತ್ತು ವರ್ಷಗಳು ಪೂರ್ಣಗೊಂಡು ಸುವರ್ಣ ಸಂಭ್ರಮವನ್ನು ಆಚರಿಸುತ್ತಿದ್ದೇವೆ. ಅನ್ನ ಅಕ್ಷರ ಆರೋಗ್ಯದೊಂದಿಗೆ ಹಸಿರು ವನ ಸಂವರ್ಧನೆಗಾಗಿ ಐದು ಕೋಟಿ ಗಿಡ ನೆಟ್ಟು ಬೆಳೆಸುವ ಸಂಕಲ್ಪ ತೊಟ್ಟು ಬೆಳೆಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಗೋಸಂರಕ್ಷಣೆ ಮಾಡಿ ಗೋ ಉತ್ಪನ್ನಗಳ ಪುನರುಜ್ಜೀವನಗೊಳಿಸಿ ಜನಮಾನಸದ ಸಿಂಹಾಸನದಲ್ಲಿ ರಾರಾಜಿಸುತ್ತಿರುವ ದೊರೆಯಾಗಿದ್ದಾರೆ ಎಂದು ಕೊಂಡಾಡಿದರು.

ದಿವ್ಯ ಸಾನ್ನಿಧ್ಯ ವಹಿಸಿದ್ದ ಪೀಠಾಧಿಪತಿ ಡಾ.ನಿರ್ಮಲಾನಂದನಾಥ ಸ್ವಾಮೀಜಿಯವರು ಆಶೀರ್ವಚನದಲ್ಲಿ ನಮ್ಮೆಲ್ಲರ ಆರಾಧ್ಯ ದೈವ ಶ್ರೀ ಬಾಲಗಂಗಾಧರನಾಥ ಗುರುಗಳು ಸಂಕಲ್ಪಿಸಿದ ಜಾನಪದ ಸಂಗಮ ಇಂದು 45ರ ಸಂಭ್ರಮವನ್ನು ಕಾಣುತ್ತಿದೆ. ಇದು ಸಮಾಜಕ್ಕೂ ಜಾನಪದಕ್ಕೂ ಇರುವ ಅವಿನಾಭಾವ ಸಂಬಂಧವಾಗಿದೆ, ಶಿಷ್ಟ ಸಾಹಿತ್ಯಕ್ಕೆ ಸ್ಫೂರ್ತಿ ನೀಡಿದ ಜಾನಪದ ಸಾಹಿತ್ಯವೇ ಶ್ರೇಷ್ಠ. ಆಗತಾನೆ ಕಂಪ್ಯೂಟರ್ ಕಣ್ಣು ಬಿಡುತ್ತಿದ್ದ ವೇಳೆಯಲ್ಲಿ ಗುರುಗಳ ಮುಂದಾಲೋಚನೆಯೇ ಜಾನಪದ ರಕ್ಷಣೆಯಾಗಿತ್ತು. ಹಾಗಾಗಿ ಇಂತಹ ಜಾನಪದ ಜಾತ್ರೆಯನ್ನು ಆಯೋಜಿಸಲಾಗುತ್ತಿದೆ. ಗುರುಗಳ ಆಧ್ಯಾತ್ಮಿಕ ಮಾನಸ ಪುತ್ರರಾದ ಸನ್ಯಾಸ ಪರಂಪರೆಯಿಂದ ಸಾಧ್ಯವಾಗಿಸಿದ್ದು ಹೆಮ್ಮೆಯ ವಿಷಯವಾಗಿದೆ. 'ಗುರುವೊಬ್ಬ ಜೊತೆಗಿರಲು ಜಗವೇ ಎದುರಾದರೂ ಭಯವಿಲ್ಲ' ಎಂಬ ಕುವೆಂಪು ಅವರ ವಾಣಿಯನ್ನು ಸ್ಮರಿಸಿದರು. ಎಲ್ಲ ಬಗೆಯ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿದ್ದ ಶ್ರೀ ಮಠವು ಕೃಷಿ ವಿಜ್ಞಾನ ಕಾಲೇಜನ್ನು ಸ್ಥಾಪಿಸುವ ಸಿದ್ಧತೆಯಲ್ಲಿದೆ ಎಂಬುದನ್ನು ತಿಳಿಸಲು ಹರ್ಷಿಸುತ್ತ, ಸಹಕರಿಸಿದ ಕೃಷಿ ಸಚಿವರಿಗೂ ಕೃತಜ್ಞತೆಗಳನ್ನು ಸಲ್ಲಿಸಿದರು.

ಶ್ರೀ ಮಠದ ಪ್ರಧಾನ ಕಾರ್ಯದರ್ಶಿ ಶ್ರೀ ಪ್ರಸನ್ನನಾಥ ಸ್ವಾಮೀಜಿ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಕಾರ್ಯಕ್ರಮದಲ್ಲಿ ಶಾಸಕ ರಮೇಶ್ ಬಂಡಿಸಿದ್ದೇಗೌಡ, ಮಂಡ್ಯ ವಿಶ್ವವಿದ್ಯಾಲಯದ ಕುಲಪತಿ ಡಾ.ಪುಟ್ಟ ರಾಜು, ಶಾಖಾ ಮಠದ ಯತಿಗಳಾದ ಪುರುಷೋತ್ತಮಾನಂದನಾಥ ಸ್ವಾಮೀಜಿ, ಪ್ರಕಾಶನಾಥ ಸ್ವಾಮೀಜಿ, ಅನ್ನದಾನೇಶ್ವರ ಸ್ವಾಮೀಜಿ, ಸೋಮೇಶ್ವರನಾಥ ಸ್ವಾಮೀಜಿ, ಶಂಭೂನಾಥ ಸ್ವಾಮೀಜಿ, ಸೌಮ್ಯನಾಥ ಸ್ವಾಮೀಜಿ, ಮಂಗಳನಾಥಸ್ವಾಮೀಜಿ, ಚಂದ್ರಶೇಖರನಾಥ ಸ್ವಾಮೀಜಿ, ಗಣ್ಯರು ಹಾಗೂ ಇತರರಿದ್ದರು.

ಶ್ರೀರಂಗಪಟ್ಟಣ ದಸರಾ ಆಚರಣೆಗೆ ಸಕಲ ಸಿದ್ಧತೆ ಕೈಗೊಳ್ಳಿ

ಶ್ರೀರಂಗಪಟ್ಟಣ, ಸೆ.25- ಈ ಬಾರಿ ಶ್ರೀರಂಗಪಟ್ಟಣ ದಸರೆಯನ್ನು ಅಕ್ಟೋಬರ್ 4 ರಿಂದ 7 ರವರೆಗೆ ವಿಜೃಂಭಣೆಯಿಂದ ಆಚರಿಸಲಾಗುತ್ತಿದ್ದು, ಅಧಿಕಾರಿಗಳು ಸಕಲ ಸಿದ್ಧತೆ ಮಾಡಿಕೊಳ್ಳಿ ಎಂದು ಜಿಲ್ಲಾಧಿಕಾರಿ ಡಾ.ಕುಮಾರ ತಿಳಿಸಿದರು.

ಇಂದು ಶ್ರೀರಂಗಪಟ್ಟಣ ಪುರಸಭೆ ಸಭಾಂಗಣದಲ್ಲಿ ನಡೆದ ದಸರಾ ಆಚರಣೆಯ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ ಕಾರ್ಯಕ್ರಮದ ಸಂದರ್ಭದಲ್ಲಿ ಯಾವುದೇ ರೀತಿಯ ಅಡಚಣೆ ಉಂಟಾಗದಂತೆ ನಿಗಾವಹಿಸಿ ಎಂದರು

ಶ್ರೀರಂಗಪಟ್ಟಣ ದಸರಾ ಆಚರಣೆಯ ಸಕಲಸಿದ್ಧತೆಗಳ ಬಗ್ಗೆ ಸಂಬಂಧ ಪಟ್ಟ ಅಧಿಕಾರಿಗಳೊಂದಿಗೆ ಕಾರ್ಯಕ್ರಮದ ವಿಚಾರಗಳನ್ನು ಚರ್ಚಿಸಿ ಕಳೆದ ದಸರಾ ಸಂದರ್ಭದಲ್ಲಿ ಕಾರ್ಯಕ್ರಮದ ವೇದಿಕೆ ತುಂಬಾ ಚಿಕ್ಕದಿದ್ದ ಕಾರಣ ಸ್ವಲ್ಪ ಪ್ರಮಾಣದ ತೊಂದರೆಗಳು ಆಗಿತ್ತು, ಆದ್ದರಿಂದ ಈ ಬಾರಿ ಕಾರ್ಯಕ್ರಮದ ವೇದಿಕೆಯನ್ನು ಅಗತ್ಯತೆಗೆ ತಕ್ಕಂತೆ ದೊಡ್ಡದಾಗಿ ನಿರ್ಮಾಣ ಮಾಡಬೇಕು ಎಂದರು.



ದಸರಾ ಆಚರಣೆಯ ಪೂರ್ವಭಾವಿ ಸಭೆಯನ್ನು ಡಿಸಿ ಕುಮಾರ್ ನಡೆಸಿದರು.

ಆಹ್ವಾನ ಪತ್ರಿಕೆ ವಿತರಣೆ: ದಸರಾ ಆಚರಣೆಯ ಆಹ್ವಾನ ಪತ್ರಿಕೆಗಳನ್ನು ಆದಷ್ಟು ಬೇಗ ಸಿದ್ಧಪಡಿಸಬೇಕು. ಜನಪ್ರತಿನಿಧಿಗಳು, ಗ್ರಾಮ ಪಂಚಾಯಿತಿ, ಸಂಘ ಸಂಸ್ಥೆಗಳಿಗೆ ವಿತರಿಸಿ ಗೌರವಪೂರ್ವಕವಾಗಿ ಆಹ್ವಾನಿಸಬೇಕು. ಆಹ್ವಾನ ಪತ್ರಿಕೆಯೊಂದಿಗೆ ದಸರಾ ಕಾರ್ಯಕ್ರಮಗಳ ವಿವರ ನೀಡುವ 5 ದಸರಾ ಕರಪತ್ರಗಳನ್ನು ಸೇರಿಸಿ ಕೊಡಬೇಕು, ಆಹ್ವಾನ ಪತ್ರಿಕೆ ವಿತರಣೆಯಲ್ಲಿ ಯಾವುದೇ ದೂರು ಬರಬಾರದು ಎಂದರು.

ಆಹಾರ ಮೇಳ: ಆಹಾರ ಮೇಳದಲ್ಲಿ 40 ಮಳಿಗೆ (ಕೌಂಟರ್) ಗಳನ್ನು ತೆರೆಯಲಿದ್ದು, ಆಹಾರ ಮಳಿಗೆಗಳನ್ನು ಪರವಾನಗಿ ಹೊಂದಿರುವವರಿಗೆ ಮಾತ್ರ ನೀಡಬೇಕು. ಅನುಮತಿ ಪಡೆಯುವ ಎಲ್ಲಾ ಮಳಿಗೆಯ ತಯಾರಿಕೆಯ ಗುಣಮಟ್ಟವನ್ನು ಪರಿಶೀಲಿಸಬೇಕು ಎಂದು ಹೇಳಿದರು.

ಆಹಾರ ಮೇಳದಲ್ಲಿ ಕೆಲಸಮಾಡುವವರು ಶುಚಿತ್ವ ಕಾಪಾಡಬೇಕು. ಆಹಾರ ವಿತರಣೆ ಮಾಡುವವರು ಕೈಗೆ ಗ್ಲೌಸ್ ಹಾಗೂ ಡ್ರೆಸ್ ಕೋಡ್ ಕಡ್ಡಾಯವಾಗಿ ಪಾಲಿಸಬೇಕು ಎಂದು ತಿಳಿಸಿದರು.

ಸಭೆಯಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶೇಖ್ ತನ್ವೀರ್ ಆಸಿಫ್, ಜಿಲ್ಲಾ ಅಪರ ಪೊಲೀಸ್ ವರಿಷ್ಠಾಧಿಕಾರಿ ತಿಮ್ಮಯ್ಯ, ಮಂಡ್ಯ ಉಪ ವಿಭಾಗಾಧಿಕಾರಿ ಶಿವಮೂರ್ತಿ ಸೇರಿದಂತೆ ಇನ್ನಿತರ ಅಧಿಕಾರಿಗಳು ಉಪಸ್ಥಿತರಿದ್ದರು.

ಬದರಿಕೊಪ್ಪಲು ಗ್ರಾಮದಲ್ಲಿ ಅಕ್ಕಿ ಚೀಲಗಳ ವಿತರಣೆ


ನಾಗಮಂಗಲ,ಸೆ.25- ಗಣೇಶ ವಿಸರ್ಜನೆ ವೇಳೆ ಉಂಟಾದ ಘರ್ಷಣೆ ಹಿನ್ನೆಲೆಯಲ್ಲಿ ಬದರಿಕೊಪ್ಪಲು ಗ್ರಾಮದ ಮನೆಯ ಯಜಮಾನರು ಹಾಗೂ ಯುವಕರು ಗ್ರಾಮವನ್ನು ತೊರೆದಿದ್ದು ಆ ಕುಟುಂಬಗಳ ನಿರ್ವಹಣೆಗಾಗಿ ರಾಜ್ಯ ಪಡಿತರ ಸಂಘದ ರಾಜ್ಯಾಧ್ಯಕ್ಷರಾದ ಟಿ. ಕೃಷ್ಣಪ್ಪನವರು ಅಕ್ಕಿ ಚೀಲಗಳನ್ನು ವಿತರಿಸಿದರು.

ನಾಗಮಂಗಲ ಪಟ್ಟಣದ ಬದರಿಕೊಪ್ಪಲು ಗ್ರಾಮದ ಗಲಭೆ ಪ್ರಕರಣದ ಹಿನ್ನೆಲೆಯಲ್ಲಿ ಅಮಾಯಕರನ್ನು ಬಂಧಿಸಿದ್ದು ಅಂತಹವರನೊಂದ ಬಡ ಕುಟುಂಬಗಳಿಗೆ ಸುಮಾರು 80ಕ್ಕೂ ಹೆಚ್ಚು ಜನರಿಗೆ ಅಕ್ಕಿ ಚೀಲಗಳನ್ನು ತಮ್ಮ ಸ್ವಂತ ಹಣದಲ್ಲಿ ವಿತರಿಸಿದರು.

ಪ್ರಕರಣದ ಕುಟುಂಬಗಳ ಸಾಂತ್ವನಕ್ಕೆ ಅನೇಕರು ಆತ್ಮಸ್ಥೈರ್ಯ ತುಂಬಿದ್ದು ಇನ್ನೂ ಬಡ ಕುಟುಂಬಗಳಿದ್ದರೆ ಅವರಿಗೂ ಕೂಡ ಅಕ್ಕಿ ಚೀಲಗಳನ್ನು ವಿತರಿಸುವುದಾಗಿ ಇದೆ ಸಂದರ್ಭದಲ್ಲಿ ತಿಳಿಸಿದರು. ಕೋವಿಡ್ 19ರ ಸಂದರ್ಭದಲ್ಲಿ ಪಡಿತರ ಸಂಘದ ರಾಜ್ಯಾಧ್ಯಕ್ಷರಾದ ಕೃಷ್ಣಪ್ಪನವರು ಸಾವಿರಾರು ಜನರಿಗೆ ಮಾಸ್ಕ್, ಕೋವಿಡ್ ಕಿಟ್‌ಗಳನ್ನು ಹಾಗೂ ದಿನನಿತ್ಯ ಬಳಸುವ ಅಕ್ಕಿ, ಬೇಳೆ, ಎಣ್ಣೆ, ಜೀರಿಗೆ, ಸಾಸಿವೆ, ಕಡ್ಲೆ ಕಾಳು, ಗೋಧಿ ಹಿಟ್ಟು, ಕಡಲೆಬೇಳೆ, ಕಡಲೆ ಹಿಟ್ಟು ಸೇರಿದಂತೆ ಮುಂತಾದವುಗಳನ್ನು ವಿತರಿಸಿ ಬಡ ಕುಟುಂಬಗಳಿಗೆ ನೆರವಾಗಿದ್ದರು.

ಇದೇ ಸಂದರ್ಭದಲ್ಲಿ ಗ್ರಾಮದ ಮುಖಂಡರಾದ ಕುಮಾರ್ (ರಾಯ) ಅಂಗಡಿ ನಾರಾಯಣ, ನ್ಯಾಯಬೆಲೆ ಅಂಗಡಿ ವೆಂಕಟೇಶ್, ಶ್ರೀನಿವಾಸ ಪೈಂಟರ್ ತಿಮ್ಮಪ್ಪ ಜಗದೀಶ ವೆಂಕಟೇಶ ಹಾಗೂ ಊರಿನ ಹಿರಿಯರು ಹಾಜರಿದ್ದು ಅಕ್ಕಿ ಚೀಲಗಳ ವಿತರಣೆಯಲ್ಲಿ ಉಪಸ್ಥಿತರಿದ್ದರು.

ಪುಟ್ಟರಾಜು ನಿಧನ



ಕೆ.ಆರ್.ಪೇಟೆ: ತಾಲೂಕಿನ ಸಿಂಧಘಟ್ಟ ಗ್ರಾಮದ ಶಿವಜ್ಯೋತಿಪಣ ಸಮುದಾಯದ ಹಿರಿಯ ಮುಖಂಡರು ಹಾಗೂ ಪ್ರಗತಿಪರ ರೈತರಾದ ಪುಟ್ಟರಾಜು (73) ಬುಧವಾರ ನಿಧನರಾದರು. ಮೃತರು ಪತ್ನಿ ಸುಶೀಲಮ್ಮ, ವಕೀಲ ಎಸ್.ಪಿ.ಮಂಜುನಾಥ್, ಪಾಪಣ್ಣ ಸೇರಿದಂತೆ ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಗುರುವಾರ(ಸೆ.26) ಬೆಳಿಗ್ಗೆ 12 ಗಂಟೆಗೆ ಸಿಂಧಘಟ್ಟ ಗ್ರಾಮದ ಮೃತರ ಜಮೀನಿನಲ್ಲಿ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಒಂದನೇ ಪುಟದಿಂದ

ಎಫ್‌ಐಆರ್ ದಾಖಲಿಸಿ

ಉಪಮುಖ್ಯ ಮಂತ್ರಿಯಾಗಿ, ಎರಡು ಬಾರಿ ಮುಖ್ಯಮಂತ್ರಿ ಆಗಿದ್ದ ಸಂದರ್ಭದಲ್ಲೇ ಮುಡಾ ವತಿಯಿಂದ 14 ನಿವೇಶನ ಪಡೆಯುವ ಪ್ರಕ್ರಿಯೆ ನಡೆದಿದೆ. ಮುಡಾ ಅಭಿವೃದ್ಧಿಪಡಿಸಿದ ಬಡಾವಣೆಯಲ್ಲಿ ಮೃತನ ಹೆಸರಿನಲ್ಲಿ 3.16 ಎಕರೆ ಭೂಮಿಯನ್ನು ಖರೀದಿ ಮಾಡಲಾಗಿದೆ.

ನಂತರ ಈ ಭೂಮಿಯನ್ನು, ಕೃಷಿ ಭೂಮಿಯಾಗಿ ಪರಿವರ್ತಿಸಿ, ಡಿ-ನೋಟಿಫಿಕೇಷನ್ ಮಾಡಿಸಿಕೊಂಡಿದ್ದಾರೆ. ಮುಖ್ಯಮಂತ್ರಿ ಅವರ ಪತ್ನಿ, ಅವರ ಸಹೋದರ ಖರೀದಿ ಮಾಡಿದ ಭೂಮಿ ಯನ್ನು, ನಂತರ ತಮ್ಮ ಸಹೋದರಿಗೆ ದಾನವಾಗಿ ನೀಡಿದ್ದಾರೆ. ಇದಾದ ನಂತರ ಮುಡಾದಿಂದ 50:50ರ ಅನುಪಾತದಲ್ಲಿ ಹಳೆಯ ಬಡಾವಣೆಯಲ್ಲಿ 14 ನಿವೇಶನ ಗಳನ್ನು ಪಡೆದಿದ್ದಾರೆ, ಎಲ್ಲಾ ಸಂದರ್ಭ ದಲ್ಲೂ ಸಿದ್ದರಾಮಯ್ಯ ಒಂದಲ್ಲಾ ಒಂದು ಅಧಿಕಾರದ ಹುದ್ದೆಯಲ್ಲಿದ್ದರು. ಅವರಲ್ಲದೆ, ಬೇರೆ ಸಾಮಾನ್ಯ ವ್ಯಕ್ತಿಯಿಂದ ಈ ಮಟ್ಟದ ಪ್ರಕ್ರಿಯೆಗಳನ್ನು ನಡೆಸಲು ಸಾಧ್ಯವಿಲ್ಲ ಎಂದರು. ರಾಷ್ಟ್ರದಲ್ಲಿ ಪ್ರಸ್ತುತ ಭಾರತೀಯ ನ್ಯಾಯ ಸಂಹಿತೆ (ಬಿಎನ್‌ಎಸ್) ಜಾರಿಯಲ್ಲಿದ್ದರೂ ಈ ಕೃತ್ಯಗಳು ನಡೆದಾಗ ಅಪರಾಧ ದಂಡ ಸಂಹಿತೆ (ಸಿಆರ್‌ಪಿಸಿ) ಜಾರಿಯಲ್ಲಿತ್ತು ಆದ್ದರಿಂದ ಸಿಆರ್‌ಪಿಸಿ ಅಡಿಯಲ್ಲೇ ತನಿಖೆ ನಡೆಸುವಂತೆಯೂ ನ್ಯಾಯಾಧೀಶರು ಆದೇಶ ಮಾಡಿದರು. ಆರೋಪಿಯ ಬಂಧನ ಸೇರಿದಂತೆ ತನಿಖೆಯ ಸಂಪೂರ್ಣ ಅಧಿಕಾರವನ್ನು ಮೈಸೂರು ಲೋಕಾಯುಕ್ತ ಎಸ್‌ಪಿ ಅವರಿಗೆ ನೀಡಿರುವ ನ್ಯಾಯಾಧೀಶರು, ಅವಶ್ಯಕತೆಗೆ ಅನುಸಾರವಾಗಿ ತನಿಖಾಧಿಕಾರಿ ಅಧಿಕಾರ ಬಳಸಬಹುದು ಎಂದು ಆದೇಶದಲ್ಲಿ ತಿಳಿಸಿದ್ದಾರೆ.

ರಾಜೀನಾಮೆ ನೀಡಲೇಬೇಕಾಗುತ್ತದೆ

ಘಟನೆಗೆ ನೈತಿಕ ಹೊಣೆ ಹೊತ್ತು ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಅಲ್ಲಿ ಶಾಸ್ತ್ರಿ ಅವರು ರೈಲು ಚಾಲನೆ ಮಾಡುತ್ತಿರಲಿಲ್ಲ ಅಥವಾ ರೈಲು ಅಪಘಾತವಾಗಲು ಅವರು ಕಾರಣರಾಗಿರಲಿಲ್ಲವಾದರೂ ಜವಾಬ್ದಾರಿ ಹೊತ್ತು ರಾಜೀನಾಮೆ ನೀಡಿದ ಉದಾಹರಣೆ ಇದೆ ಎಂದರು.

ಇಲ್ಲಿ ತನಿಖೆಗೆ ಆದೇಶಿಸಿರುವುದು ಸ್ವತಃ ಸಿದ್ದರಾಮಯ್ಯ ಅವರಿಗೇ ಸಂಬಂಧಿಸಿದ ಪ್ರಕರಣವಾಗಿರುವುದರಿಂದ ಎಫ್‌ಐಆರ್ ದಾಖಲಾಗುತ್ತಿದ್ದಂತೆಯೇ ಆರೋಪಿಯಾಗುತ್ತಾರೆ. ಬೇರೆ ವ್ಯಕ್ತಿಗಳಾದರೆ ನಾವು ಕೈಗೊಳ್ಳುವ ಕ್ರಮವೇ ಸಿದ್ದರಾಮಯ್ಯರಿಗೂ ಅನ್ವಯಿಸುತ್ತದೆ ಎಂದು ನಿವೃತ್ತ ನ್ಯಾಯಮೂರ್ತಿಗಳು ತಿಳಿಸಿದರು.

ಉನ್ನತ ಹುದ್ದೆಯಲ್ಲಿ ಮುಂದುವರೆದರೆ, ಅಧೀನಾಧಿಕಾರಿಗಳು ನಿಷ್ಪಕ್ಷಪಾತ, ನಿರ್ಭೀತಿಯಿಂದ ತನಿಖೆ ಮಾಡಲು ಸಾಧ್ಯವಾಗುವುದಿಲ್ಲ. ಆಗ ಮಾಡಿದ ತನಿಖೆ ಸಂಶಯಾಸ್ಪದವಾಗಿ ಕಾಣಿಸುತ್ತದೆ. ಅಲ್ಲದೆ ಸಾಕ್ಷ್ಯ ನಾಶಪಡಿಸಬಹುದು, ಒತ್ತಡ ತರುವ ಸಾಧ್ಯತೆ ಇದೆ. ತಮ್ಮ ವಿರುದ್ಧ ಭ್ರಷ್ಟಾಚಾರದಂತಹ ಗಂಭೀರ ಆರೋಪ ಬಂದಾಗ ಉನ್ನತ ಹುದ್ದೆಯಲ್ಲಿರುವ ಸಿದ್ದರಾಮಯ್ಯ ಒಂದು ಕ್ಷಣವೂ ಅಧಿಕಾರದಲ್ಲಿರಬಾರದು. ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿ ತನಿಖೆಗೆ ಸಹಕರಿಸಬೇಕು ಎಂದ ಸಂತೋಷ್ ಹೆಗ್ಡೆ ಅವರು, ಒಂದು ವೇಳೆ ನಿರಪರಾಧಿ ಎಂದು ದೃಢಪಟ್ಟಲ್ಲಿ ಮತ್ತೆ ಅದೇ ಹುದ್ದೆ ಅಲಂಕರಿಸಲಿ ಎಂದರು.

ತನಿಖೆಗೆ ಸಹಕರಿಸದಿದ್ದಲ್ಲಿ ಅಥವಾ ತೊಂದರೆಯಾಗುತ್ತಿದೆ ಎಂದಾಗ ಯಾವುದೇ ಸಂದರ್ಭದಲ್ಲಾದರೂ ಸಿದ್ದರಾಮಯ್ಯರನ್ನು ಲೋಕಾಯುಕ್ತ ತನಿಖಾಧಿಕಾರಿಗಳು ಬಂಧಿಸಬಹುದು. ಅವರಿಗೆ ಕಾನೂನಿನಡಿ ಅಧಿಕಾರವಿರುತ್ತದೆ ಎಂದ ಅವರು, ಎಫ್‌ಐಆರ್ ಆಗುತ್ತಿದ್ದಂತೆಯೇ ಬೇರೆಯವರನ್ನು ಬಂಧಿಸಿ ಕಾನೂನು ಕ್ರಮ ಕೈಗೊಳ್ಳುವುದಿಲ್ಲವೆ? ಕಾನೂನು, ಕಾಯ್ದೆಗಳು ಎಲ್ಲರಿಗೂ ಅನ್ವಯಿಸುತ್ತವೆ ಎಂದರು.

ಸಂಕಷ್ಟ ತಂದೊಡ್ಡಿದೆ!

ಸಂಕಷ್ಟಕ್ಕೀಡು ಮಾಡಿದೆ. ತಮ್ಮ ರಾಜಕೀಯದ ಸಂಧ್ಯಾಕಾಲದಲ್ಲಿನ ಈ ಬೆಳವಣಿಗೆ ಸಹಜವಾಗಿಯೇ ನೋವು ತಂದಿದೆ. ಆದರೆ ಆ ನೋವನ್ನು ಸಿದ್ದರಾಮಯ್ಯ ತೋರಿಸಿಕೊಳ್ಳುತ್ತಿಲ್ಲ ಎಂದು ಅವರ ಆಪ್ತರೇ ಹೇಳುತ್ತಾರೆ. ಒಂದು ವೇಳೆ ಸಿದ್ದರಾಮಯ್ಯ ಈ ಪ್ರಕರಣದಲ್ಲಿ ರಾಜೀನಾಮೆ ನೀಡಿದರೆ, ರಾಜಕೀಯ ಬದುಕು ಕೊಟ್ಟ ಜಿಲ್ಲೆ ಮೈಸೂರು ಪ್ರಕರಣವೇ ಅವರ ರಾಜಕೀಯ ಬದುಕಿಗೆ ಕಪ್ಪು ಚುಕ್ಕೆಯಾಗಲಿದೆ.

ರಾಜೀನಾಮೆ ನೀಡಿ ತನಿಖೆ ಎದುರಿಸಬೇಕು

ನಡೆದ ಬೆಳವಣಿಗೆಯಲ್ಲಿ ಸರ್ಕಾರ ಮೊದಲಿದ್ದ ಎಸ್ಪಿ ಎತ್ತಂಗಡಿ ಮಾಡಿ ಉದೇಶ್ ಅವರನ್ನು ಲೋಕಾಯುಕ್ತ ಎಸ್ಪಿಯಾಗಿ ತಂದು ಕೂರಿಸಿದೆ. ಇದು ದುರುದ್ದೇಶಪೂರಿತ ತೀರ್ಮಾನವಾಗಿರಬಹುದು ಎಂದು ಪ್ರದೀಪ್‌ಕುಮಾರ್ ಆಪಾದಿಸಿದರು. ಎಫ್‌ಐಆರ್ ದಾಖಲಿಸುವುದಿರಲಿ, ಹಿಂಬರಹ ನೀಡಲು ಇಷ್ಟೊಂದು ಆಟವಾಡಿಸುತ್ತಿರುವ ಲೋಕಾಯುಕ್ತರಿಂದ ನಿಷ್ಪಕ್ಷಪಾತ ತನಿಖೆ ನಿರೀಕ್ಷೆ ಮಾಡಲು ಸಾಧ್ಯವೆ ಎಂದು ಪ್ರಶ್ನಿಸಿದರು. ಆದ ಕಾರಣ ಈ ಪ್ರಕರಣವನ್ನು ಸಿಬಿಐಗೆ ವಹಿಸಬೇಕು. ಆಗ ಮಾತ್ರ ನ್ಯಾಯಯುತ ತನಿಖೆ ನಿರೀಕ್ಷೆ ಸಾಧ್ಯ ಎಂದು ಪ್ರದೀಪ್ ಕುಮಾರ್ ಅಭಿಪ್ರಾಯಪಟ್ಟರು.

ಕಚೇರಿ ಬಳಿ ಹೈಡ್ರಾಮಾ

ಹಿಂಬರಹವನ್ನಾದರೂ ನೀಡುವಂತೆ ಪ್ರದೀಪ್ ಕುಮಾರ್ ಕೋರಿದರು. ಈ ಬಗ್ಗೆ ಹಿರಿಯ ಅಧಿಕಾರಿಗಳ ಜೊತೆ ಸಮಾಲೋಚನೆ ನಡೆಸಲು ಉದೇಶ್ ಅರ್ಧ ಗಂಟೆ ಕಾಲಾವಕಾಶ ಕೋರಿದರು. ಲೋಕಾಯುಕ್ತ ಕಚೇರಿಯಿಂದ ಹೊರಗೆ ಬಂದ ಪ್ರದೀಪ್ ಕುಮಾರ್ ಪತ್ರಕರ್ತರ ಜೊತೆ ಮಾತನಾಡಿ, ಲೋಕಾಯುಕ್ತ ಎಸ್ಪಿ ಉದೇಶ್ ಅವರ ನಡೆ ಬಗ್ಗೆ ಆಕ್ರೋಶ ವ್ಯಕ್ತಪಡಿಸಿದರು. ಹೈಕೋರ್ಟ್ ನಿನ್ನೆ ನೀಡಿರುವ ತೀರ್ಪಿನ 17 ಎ ಪ್ರಕಾರ ಲೋಕಾಯುಕ್ತರು ನೇರವಾಗಿ ಎಫ್‌ಐಆರ್ ದಾಖಲಿಸಬಹುದು. ಅಲ್ಲದೆ ಈ ಪ್ರಕರಣ ಬಂಧನ ರಹಿತ ಅಪರಾಧವಾಗಿರುವ ಕಾರಣ ಸಿದ್ದರಾಮಯ್ಯ ವಿರುದ್ಧ ತನಿಖೆ ನಡೆಸಬಹುದು ಹಾಗೂ ಬಂಧನ ಕೂಡ ಮಾಡಬಹುದು. ಆದರೆ ಈಗಲೇ ಪ್ರಕರಣ ದಾಖಲಿಸಲು ಸಾಧ್ಯವಿಲ್ಲ ಎಂದು ಎಸ್ಪಿ ಹೇಳುತ್ತಿದ್ದಾರೆ ಎಂದು ಕಿಡಿಕಾರಿದರು. ನಾನು ಈ ಮೊದಲೇ ಅಂದರೆ ಜುಲೈ 31ರಂದೇ ಸಿದ್ದರಾಮಯ್ಯ ವಿರುದ್ಧ ದೂರು ದಾಖಲಿಸಿದ್ದೆ. ಆಗ ಪ್ರಕರಣ ದಾಖಲು ಮಾಡುವುದಿರಲಿ, ಹಿಂಬರಹ ಕೂಡ ನೀಡಲಿಲ್ಲ. ಈ ರೀತಿಯ ಧೋರಣೆಯಿಂದ ಲೋಕಾಯುಕ್ತರು ಕಾಲಹರಣದ ಜಾಣತನ ಪ್ರದರ್ಶಿಸುತ್ತಿದ್ದಾರೆ ಎಂದು ಪ್ರದೀಪ್ ಕುಮಾರ್ ಆರೋಪಿಸಿದರು.

ನಾವು ಕೊಟ್ಟ ದೂರಿನ ಆಧಾರದ ಮೇಲೆ ಸಿದ್ದರಾಮಯ್ಯ, ಪಾರ್ವತಿ, ಡಾ.ಯತೀಂದ್ರ, ಮಲ್ಲಿಕಾರ್ಜುನ ಸ್ವಾಮಿ ಹಾಗೂ ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಪ್ರಕರಣ ದಾಖಲಿಸಬೇಕು. ಆದರೆ ಲೋಕಾಯುಕ್ತರು ಪ್ರಕರಣ ದಾಖಲಿಸಲು ಹಿಂದೇಟು ಹಾಕುತ್ತಿರುವುದೇಕೆ ಎಂದು ಪ್ರಶ್ನಿಸಿದರು.

ಲೋಕಾಯುಕ್ತರು ಇಂದು ಎಫ್‌ಐಆರ್ ದಾಖಲಿಸಬೇಕು, ಇಲ್ಲವೆ ದೂರಿಗೆ ಹಿಂಬರಹ ನೀಡಬೇಕು. ಇಲ್ಲದಿದ್ದರೆ ನಾನು ಇಲ್ಲೇ ಧರಣಿ ನಡೆಸುತ್ತೇನೆ ಎಂದು ಪ್ರದೀಪ್ ಕುಮಾರ್ ಎಚ್ಚರಿಸಿದರು.

ಅರ್ಧ ಗಂಟೆ ನಂತರ ಮತ್ತೆ ಪ್ರದೀಪ್ ಕುಮಾರ್ ಲೋಕಾಯುಕ್ತ ಎಸ್ಪಿ ಉದೇಶ್ ಭೇಟಿ ಮಾಡಿದಾಗ ಈಗಲೇ ಎಫ್‌ಐಆರ್ ದಾಖಲಿಸಲು ಹಾಗೂ ದೂರಿಗೆ ಹಿಂಬರಹ ನೀಡಲು ಸಾಧ್ಯವಿಲ್ಲ. ಹೈಕೋರ್ಟ್ ತೀರ್ಪು ಹಾಗೂ ನಿಮ್ಮ ದೂರಿನ ಬಗ್ಗೆ ಕಾನೂನು ತಜ್ಞರ ಅಭಿಪ್ರಾಯ ಪಡೆಯಬೇಕು. ಆದ ಕಾರಣ ಎಂಟತ್ತು ದಿನ ಕಾಲಾವಕಾಶ ಬೇಕು ಎಂದು ಕೋರಿ, ಸ್ವೀಕೃತಿ ಪತ್ರ ಮಾತ್ರ ನೀಡಿದರು.

ನೀವು ಕೇಳಿರುವಂತೆ ಎಂಟತ್ತು ದಿನ ಕಾಲಾವಕಾಶ ನೀಡಲು ಸಾಧ್ಯವಿಲ್ಲ. ಮೂರು ದಿನದೊಳಗೆ ಎಫ್‌ಐಆರ್ ದಾಖಲಿಸಬೇಕು, ಇಲ್ಲವೇ ಹಿಂಬರಹ ನೀಡಬೇಕು ಎಂದು ಪ್ರದೀಪ್ ಕುಮಾರ್ ತಿಳಿಸಿ, ಅಲ್ಲಿಂದ ನಿರ್ಗಮಿಸಿದರು.

ಕ್ಲಾಸ್‌ಗೆ ಅಟೆಂಡ್ ಮಾಡಬಹುದು

ಬಾರಿಗೆ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಜಾರಿಗೊಳಿಸಿದೆ. ವಿದ್ಯಾರ್ಥಿಗಳು ಮರು ದಾಖಲಾತಿ ಪಡೆದು ಕೇವಲ ತಾವು ಫೇಲ್ ಆಗಿರುವ ವಿಷಯಕ್ಕೆ ಮಾತ್ರ ಕ್ಲಾಸ್‌ಗೆ ಹಾಜರಾಗಬಹುದು ಅಥವಾ ಎಲ್ಲ ವಿಷಯಗಳಿಗೂ ಹಾಜರಾಗಬಹುದು. ಇದು ವಿದ್ಯಾರ್ಥಿಯ ಆಸಕ್ತಿಗೆ ಬಿಟ್ಟ ವಿಷಯವಾಗಿದೆ. ಒಂದು ವೇಳೆ ಎಲ್ಲ ವಿಷಯಗಳನ್ನು ಮತ್ತೊಮ್ಮೆ ಕಲಿತು ಪರೀಕ್ಷೆಗೆ ಹಾಜರಾಗಲು ಕೂಡ ವಿದ್ಯಾರ್ಥಿಗೆ ಅವಕಾಶವಿದೆ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಪ್ರಧಾನ ಕಾರ್ಯದರ್ಶಿ ರಿತೇಶ್ ಕುಮಾರ್ ಸಿಂಗ್ ತಿಳಿಸಿದ್ದಾರೆ. ಪ್ರತಿ ವರ್ಷವು ಸಹ ಹತ್ತನೇ ತರಗತಿ ಹಾಗೂ ದ್ವಿತೀಯ ಪಿಯುಸಿಯಲ್ಲಿ ಪ್ರತಿ ವರ್ಷ ಕನಿಷ್ಠ ಒಂದು ಲಕ್ಷ ವಿದ್ಯಾರ್ಥಿಗಳು ಅನುತ್ತೀರ್ಣರಾಗುತ್ತಾರೆ. ಇಂತಹವರು ಬಹುತೇಕ ಶಿಕ್ಷಣ ಮೊಟಕುಗೊಳಿಸುತ್ತಾರೆ. ವಿದ್ಯಾರ್ಥಿಗಳು ಡ್ರಾಪ್‌ಔಟ್ ಆಗಬಾರದು ಎಂಬ ಉದ್ದೇಶದಿಂದ ಮರು ದಾಖಲಾತಿಗೆ ಅವಕಾಶ ಕಲ್ಪಿಸಲಾಗಿದೆ ಎಂದು ಸಿಂಗ್ ಮಾಹಿತಿ ನೀಡಿದ್ದಾರೆ.

ಜಮ್ಮು-ಕಾಶ್ಮೀರ ವಿಧಾನಸಭೆ ಚುನಾವಣೆ

ಎರಡನೇ ಹಂತದಲ್ಲೂ ಭರ್ಜರಿ ಮತದಾನ: ವೈಷ್ಣೋದೇವಿ ಕ್ಷೇತ್ರದಲ್ಲಿ ಶೇ.75ರಷ್ಟು ವೋಟಿಂಗ್

ಶ್ರೀನಗರ, ಸೆ. 25-ಜಮ್ಮು ಮತ್ತು ಕಾಶ್ಮೀರದಲ್ಲಿ ಬುಧವಾರ ಎರಡನೇ ಹಂತದ ಮತದಾನ ಮುಕ್ತಾಯಗೊಂಡಿದೆ. ಸಂಜೆ 5 ಗಂಟೆಯವರೆಗೆ ಕಣಿವೆ ರಾಜ್ಯದಲ್ಲಿ ಶೇ 54ರಷ್ಟು ಮತದಾನವಾಗಿದೆ ಎಂದು ಚುನಾವಣಾ ಆಯೋಗ ತಿಳಿಸಿದೆ. ಬಿಗಿ ಭದ್ರತೆಯ ನಡುವೆ ಬೆಳಗ್ಗೆ 7 ಗಂಟೆಗೆ ಮತದಾನ ಆರಂಭವಾಗಿದ್ದು ಸಂಜೆ 6 ಗಂಟೆಗೆ ಶಾಂತಿಯುತವಾಗಿ ಪೂರ್ಣಗೊಂಡಿದೆ.

ಜಮ್ಮು ಪ್ರದೇಶದ ಶ್ರೀ ಮಾತಾ ವೈಷ್ಣೋದೇವಿ ವಿಧಾನಸಭಾ ಕ್ಷೇತ್ರದಲ್ಲಿ ದಾಖಲೆಯ ಮತದಾನವಾಗಿದೆ. ಈ ಕ್ಷೇತ್ರದಲ್ಲಿ ಒಟ್ಟಾರೆ ಅತಿ ಹೆಚ್ಚು ಅಂದರೆ ಶೇಕಡಾ 75.29 ರಷ್ಟು ವೋಟಿಂಗ್ ದಾಖಲಿಸಿದೆ, ಪೂಂಚ್-ಹವೇಲಿ ಶೇ. 72.71ರಷ್ಟು, ಗುಲ್ಬ್‌ಗಢ STಯಲ್ಲಿ ಶೇ.72.19 ಮತ್ತು ಸುರನ್‌ಕೋಟೆ ವ್ಯಾಪ್ತಿಯಲ್ಲಿ ಶೇ.72.18ರಷ್ಟು ಮತದಾನವಾಗಿದೆ ಎಂದು ಕೇಂದ್ರ ಚುನಾವಣಾ ಆಯೋಗದ ಅಂಕಿ- ಅಂಶಗಳು ಮಾಹಿತಿ ನೀಡಿವೆ.



ಕಾಶ್ಮೀರ ಕಣಿವೆಯ 15 ವಿಧಾನಸಭಾ ಕ್ಷೇತ್ರಗಳಲ್ಲಿ ಖಾನ್‌ಸಾಹಿಬ್‌ನಲ್ಲಿ ಶೇಕಡಾ 67.70 ರಷ್ಟು ಮತದಾನ ದಾಖಲಾಗಿದೆ. ಇನ್ನು ಕಂಗನ್ (ಎಸ್‌ಟಿ) ಶೇ.67.60 ಮತ್ತು ಚ್ರಾರ್-ಇ-ಶರೀಫ್ ಶೇ.66ರಷ್ಟು ಹಕ್ಕು ಚಲಾವಣೆ ಆಗಿರುವ ಮಾಹಿತಿ ದೊರೆತಿದೆ. ಇಲ್ಲಿನ ಹಬ್ಬಕಡಲ್ ಕ್ಷೇತ್ರದಲ್ಲಿ ಸಂಜೆ 5 ಗಂಟೆಯವರೆಗೆ ಅತಿ ಕಡಿಮೆ ಶೇ.15.80ರಷ್ಟು ಮತದಾನವಾಗಿದೆ. ಸಂಜೆ 6 ಗಂಟೆಗೆ ಮತದಾನ ಮುಕ್ತಾಯವಾಯಿತು.

ಮೊದಲ ಹಂತದ ಮತದಾನ ಸೆಪ್ಟೆಂಬರ್ 18 ರಂದು ನಡೆದಿದ್ದರೆ ಮೂರನೇ ಮತ್ತು ಕೊನೆಯ ಹಂತದ ಮತದಾನ ಅಕ್ಟೋಬರ್ 1 ರಂದು ನಡೆಯಲಿದೆ. ಅಕ್ಟೋಬರ್ 8 ರಂದು ಮತ ಎಣಿಕೆ ನಡೆಯಲಿದೆ.

ರಾಮೇಶ್ವರ ಕೆಫೆ ಸ್ಫೋಟ ಪ್ರಕರಣ: ಶಂಕಿತರ ವಿರುದ್ಧ NIA ಮತ್ತೊಂದು ಚಾರ್ಜ್‌ಶೀಟ್ ಸಲ್ಲಿಕೆ

ಬೆಂಗಳೂರು: ರಾಮೇಶ್ವರಂ ಕೆಫೆಯಲ್ಲಿ ಸ್ಫೋಟ ಪ್ರಕರಣದ ಆರೋಪಿಗಳಾಗಿರುವ ಅಬ್ದುಲ್ ಮತೀನ್ ಅಹ್ಮದ್ ತಾಹಾ ಹಾಗೂ ಮಸ್ಸಾವೀರ್ ಹುಸೇನ್ ಶಾಜಿಬ್ ವಿರುದ್ಧ ರಾಷ್ಟ್ರೀಯ ತನಿಖಾ ದಳ ಮತ್ತೊಂದು ಚಾರ್ಜ್‌ಶೀಟ್ ಸಲ್ಲಿಕೆ ಮಾಡಿದೆ. ಶಿವಮೊಗ್ಗ ಮಾದರಿಯ ಇಸಿಸ್ ಸಂಚು ಪ್ರಕರಣದಲ್ಲಿಯೂ ಇಬ್ಬರ ಕೈವಾಡ ಇರುವ ಕುರಿತು ಚಾರ್ಜ್ ಶೀಟ್'ನಲ್ಲಿ ತಿಳಿಸಿದೆ.

ಬೆಂಗಳೂರಿನ ಎನ್‌ಐಎ ವಿಶೇಷ ನ್ಯಾಯಾಲಯಕ್ಕೆ ಚಾರ್ಜ್‌ಶೀಟ್ ಸಲ್ಲಿಕೆಯಾಗಿದ್ದು, ಈ ಮೂಲಕ ಶಿವಮೊಗ್ಗ ಮಾದರಿ ಪ್ರಕರಣದ ಆರೋಪಿಗಳ ಪಟ್ಟಿ ಹತ್ತಕ್ಕೇರಿದಂತಾಗಿದೆ.

ಆರೋಪಿಗಳಾದ ಅಬ್ದುಲ್ ಮತೀನ್ ಅಹ್ಮದ್ ತಾಹಾ ಮತ್ತು ಮಸ್ಸಾವೀರ್ ಹುಸೇನ್ ಮುಸ್ಲಿಂ ಯುವಕರನ್ನು ಮೂಲಭೂತವಾದಿ ಚಟುವಟಿಕೆಗಳಿಗೆ ಸೆಳೆಯುತ್ತಿದ್ದರಲ್ಲದೆ, ಪ್ರಚೋದನೆ ನೀಡುತ್ತಿದ್ದರು. ಭಯೋತ್ಪಾದಕರಿಗೆ ಹಣಕಾಸು ನೆರವನ್ನೂ ನೀಡುತ್ತಿದ್ದರು ಎಂದು ಚಾರ್ಜ್‌ಶೀಟ್‌ನಲ್ಲಿ ಉಲ್ಲೇಖಿಸಲಾಗಿದೆ.

ಶಿವಮೊಗ್ಗ ಜಿಲ್ಲೆಯ ಮೂಲದವರಾಗಿದ್ದ ಆರೋಪಿಗಳು, ಇಸಿಸ್‌ನ ವಿಚಾರಧಾರೆಗಳಿಂದ ಪ್ರೇರಿತರಾಗಿದ್ದು, ಮುಸ್ಲಿಂ ಯುವಕರನ್ನ ಇಸಿಸ್‌ನತ್ತ ಸೆಳೆಯುತ್ತಿದ್ದರು. ಭಾರತದಲ್ಲಿ ಭಯೋತ್ಪಾದನೆ ಹರಡಲು ಮತ್ತು ದೇಶದಲ್ಲಿ ಭದ್ರತೆ ಸೃಷ್ಟಿಸುವ ಭಾಗವಾಗಿ ಮುಸ್ಲಿಂ ಯುವಕರ ನೇಮಕ, ಭಯೋತ್ಪಾದಕ ಕೃತ್ಯಗಳಿಗೆ ನಿಧಿ ಸಂಗ್ರಹ, ಭಾರತೀಯ ರಾಷ್ಟ್ರೀಯ ಧ್ವಜವನ್ನು ಸುಡುವುದು, ಪ್ರಯೋಗ ಸ್ಫೋಟಗಳು ಮತ್ತಿತರ ಹಿಂಸಾತ್ಮಕ ಚಟುವಟಿಕೆಗಳಲ್ಲಿ ಆರೋಪಿಗಳು ಭಾಗಿಯಾಗಿದ್ದರು ಎಂದು ಎನ್‌ಐಎ ತಿಳಿಸಿದೆ.

ರಾಜ್ಯ ಒಕ್ಕಲಿಗ ವಿಕಾಸ ವೇದಿಕೆಯಿಂದ ಮೀಸಲಾತಿ ಸಂಭ್ರಮಾಚರಣೆ, ಪ್ರಶಸ್ತಿ ಪ್ರದಾನ ಸಮಾರೋಪ

ಮೈಸೂರು,ಸೆ.25(ಜಿಎ)-ಕರ್ನಾಟಕ ರಾಜ್ಯ ಒಕ್ಕಲಿಗರ ವಿಕಾಸ ವೇದಿಕೆ ವತಿಯಿಂದ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಮೀಸಲಾತಿ ನೀಡಿದ 105ನೇ ಸಂಭ್ರಮಾಚರಣೆ ಹಾಗೂ ಯಶೋಧರಮ್ಮ ದಾಸಪ್ಪ ಜೀವ ಮಾನ ಸಾಧಕ, ಆದರ್ಶ ಪುರುಷ ಹಾಗೂ ಸಾಧಕಿಯರಿಗೆ ಸೇವಾ ಭೂಷಣ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಸೆ.28ರಂದು ಮಧ್ಯಾಹ್ನ 2.30ಕ್ಕೆ ಕಲಾಮಂದಿರದ ಕಿರು ರಂಗ ಮಂದಿರದಲ್ಲಿ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ವೇದಿಕೆಯ ರಾಜ್ಯಾಧ್ಯಕ್ಷೆ ಹೆಚ್.ಎಲ್.ಯಮುನಾ ಈ ವಿಷಯ ತಿಳಿಸಿ, ವಿಧಾನಪರಿಷತ್ ಸದಸ್ಯ ಎಲ್.ವಿವೇಕಾನಂದ ಕಾರ್ಯಕ್ರಮ ಉದ್ಘಾಟಿಸುವರು, ಹೆಚ್.ಕೆ. ರಾಮು ಅಧ್ಯಕ್ಷತೆ ವಹಿಸಲಿದ್ದಾರೆ ಎಂದರು.

ಸಾಹಿತಿ ನಾರಾಯಣ ತಿರುಮಲಾಪುರ ಮೀಸಲಾತಿ ಕುರಿತು ಮಾತನಾಡಲಿದ್ದಾರೆ. ವಿಶೇಷ ಅತಿಥಿಗಳಾಗಿ ಡಾ.ಎಸ್.ಪಿ.ಯೋಗಣ್ಣ, ನಾಗರಾಜ್ ವಿ.ಭೈರಿ, ಡಾ.ವಸಂತಕುಮಾರ್, ಡಾ.ಕೆ.ಎಸ್. ಸಂಜಯರ್, ಡಾ.ಸುಶ್ರೂತ, ಹೆಚ್.ಎ.ವೆಂಕಟೇಶ್, ರೇಣುಕ ಟಿ.ಭಕ್ತರ ಹಳ್ಳಿ, ಕಸಾಪ ಜಿಲ್ಲಾಧ್ಯಕ್ಷ ಮಡ್ಡಿಕೆರೆ ಗೋಪಾಲ್ ಮತ್ತಿತರರು ಆಗಮಿಸಲಿದ್ದಾರೆ.

ಈ ವೇಳೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದವರಿಗೆ ಯಶೋಧರಮ್ಮ ದಾಸಪ್ಪ ಜೀವಮಾನ ಸಾಧಕ, ಆದರ್ಶ ಪುರುಷ ಹಾಗೂ ಸಾಧಕಿಯರಿಗೆ ಸೇವಾ ಭೂಷಣ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಡಾ.ಬಿ.ಸಿ.ವಿಜಯಕುಮಾರ್ ಬಲ್ಲೇನಹಳ್ಳಿ, ಸೇತು ರಾಮ್, ಪ್ರದೀಪ್ ಕೃಷ್ಣೇಗೌಡ, ಕಂಸಾಳೆ ಮಹದೇವು ಉಪಸ್ಥಿತರಿದ್ದರು.

ಮೈಸೂರು ಮಿತ್ರ

ಅ.24ರಿಂದ ಹಾಸನಾಂಬೆ ದರ್ಶನ

ಇಸ್ಕಾನ್ ತಯಾರಿಸಿದ ಪ್ರಸಾದ ವಿನಿಯೋಗ: ಜಿಲ್ಲಾಧಿಕಾರಿ ಸಿ. ಸತ್ಯಭಾಮ ಮಾಹಿತಿ



ಹಾಸನ, ಸೆ.25– ಕೆಲ ದಿನಗಳ ಹಿಂದೆ ತಿರುಪತಿ ದೇವಾಲಯದಲ್ಲಿ ಲಾಡುವಿನಲ್ಲಿ ಪ್ರಾಣಿಗಳ ಕೊಬ್ಬು ಮಿಶ್ರಣವಾದ ಬಗ್ಗೆ ವಿವಾದ ಕೇಳಿ ಬಂದ ಹಿನ್ನೆಲೆಯಲ್ಲಿ ಈ ಬಾರಿಯ ಹಾಸನಾಂಬ ಜಾತ್ರಾ ಮಹೋತ್ಸವದ ವೇಳೆ ಇಸ್ಕಾನ್ ಲಡ್ಡು ವಿತರಣೆ ಮಾಡಲು ಚಿಂತನೆ ನಡೆಸಿದೆ ಎಂದು ಜಿಲ್ಲಾಧಿಕಾರಿ ಸಿ.ಸತ್ಯಭಾಮ ತಿಳಿಸಿದರು.

ತಮ್ಮ ಕಚೇರಿಯಲ್ಲಿ ಮಾಧ್ಯಮಕ್ಕೆ ಮಾಹಿತಿ ನೀಡಿದ ಜಿಲ್ಲಾಧಿಕಾರಿ, ಈ ವರ್ಷದ ಹಾಸನಾಂಬೆ ಬಾಗಿಲು ಅಕ್ಟೋಬರ್ 24 ರಂದು ತೆರೆಯಲಾಗುವುದು. ಜೊತೆಗೆ ಶ್ರೀ ಸಿದ್ದೇಶ್ವರ ಜಾತ್ರಾ ಮಹೋತ್ಸವಕ್ಕೆ ಸಕಲ ಸಿದ್ಧತೆಯನ್ನು ಮಾಡಿಕೊಳ್ಳಲಾಗುತ್ತಿದೆ. ಈ ವರ್ಷದಿಂದ 300 ರೂ ಕೊಟ್ಟು ಟಿಕೆಟ್ ಪಡೆದವರಿಗೂ ಒಂದು ಲಾಡು, 1 ಸಾವಿರ ನೀಡಿ ಟಿಕೆಟ್ ಪಡೆದವರಿಗೆ ಎರಡು ಲಾಡು ಕೊಡಲು ನಿರ್ಧರಿಸಲಾಗಿದೆ. ಹೂವಿನ ಅಲಂಕಾರ, ನಗರ ಸೌಂದರ್ಯೀಕರಣ ಎಲ್ಲದರ ಬಗ್ಗೆ ಗಮನ ಕೊಡಲಾಗಿದೆ. ಈ ಬಾರಿ ತಿರುಪತಿಯ ತಿಮ್ಮಪ್ಪನ ಲಡ್ಡು ವಿವಾದ ಹಿನ್ನೆಲೆಯಲ್ಲಿ ಹಾಸನಾಂಬೆ ದೇವಾಲಯದ ಪಾವಿತ್ರ್ಯತೆ ಹಾಗೂ ಲಡ್ಡಿನ ಗುಣಮಟ್ಟ ಕಾಪಾಡಿಕೊಳ್ಳಲು ಜಿಲ್ಲಾಡಳಿತ ಮುಂದಾಗಿದ್ದು ಹಾಸನಾಂಬೆ ಭಕ್ತರಿಗೆ ಇಸ್ಕಾನ್ ಲಡ್ಡು ವಿತರಣೆಗೆ ಚಿಂತನೆ ನಡೆಸಿದೆ ಎಂದರು.

ಬಿಜೆಪಿ ಶಾಸಕ ಮುನಿರತ್ನಗೆ ಮತ್ತೊಂದು ಸಂಕಷ್ಟ

ಆರ್‌ಆರ್ ನಗರ ಕಾಮಗಾರಿ ಸಂಬಂಧ ತನಿಖೆಗೆ ಬಿಬಿಎಂಪಿ ಆದೇಶ



ಬೆಂಗಳೂರು, ಸೆ.25– ಗುತ್ತಿಗೆದಾರನಿಗೆ ಬೆದರಿಕೆ ಹಾಕಿದ, ಜಾತಿನಿಂದನೆ ಆರೋಪ ಮತ್ತು ಅತ್ಯಾಚಾರ ಪ್ರಕರಣದಲ್ಲಿ ಬಂಧನಕ್ಕೀಡಾಗಿರುವ ಬಿಜೆಪಿ ಶಾಸಕ ಮುನಿರತ್ನಗೆ ಮತ್ತೊಂದು ಸಂಕಷ್ಟ ಎದುರಾಗಿದ್ದು, ಅವರು ಪ್ರತಿನಿಧಿಸುತ್ತಿರುವ ಆರ್‌ಆರ್ ನಗರದ ಕಾಮಗಾರಿ ಸಂಬಂಧ ಬಿಬಿಎಂಪಿ ತನಿಖೆಗೆ ಆದೇಶಿಸಿದೆ.

ಆರ್‌ಆರ್ ನಗರ ಕ್ಷೇತ್ರದಲ್ಲಿ 2020 ರಿಂದ 2022ರ ವರೆಗೆ ನಡೆದ ಕಾಮಗಾರಿಗಳ ತನಿಖೆಗೆ ಪಾಲಿಕೆ ಆದೇಶ ಹೊರಡಿಸಿದ್ದು, 2020 ಸೆಪ್ಟೆಂಬರ್‌ನಿಂದ 2022ರ ಜುಲೈ 19ರ ಅವಧಿಯಲ್ಲಿ ನಡೆದ ಕಾಮಗಾರಿಗಳಲ್ಲಿ 500 ಕೋಟಿ ರೂ.ಗೂ ಅಧಿಕ ಅವ್ಯವಹಾರ ಶಂಕೆ ವ್ಯಕ್ತವಾಗಿದೆ.

ಈ ಹಿನ್ನೆಲೆಯಲ್ಲಿ ಪಾಲಿಕೆ ಕಂದಾಯ ವಿಭಾಗದ ವಿಶೇಷ ಆಯುಕ್ತ ನೇತೃತ್ವದಲ್ಲಿ ತನಿಖೆಗೆ ಆದೇಶ ನೀಡಲಾಗಿದೆ. ಬಿಬಿಎಂಪಿ ಕಂದಾಯ ವಿಶೇಷ ಅಧಿಕಾರಿ ಮುನೀಶ್ ಮೌದ್ಗಿಲ್ ನೇತೃತ್ವದಲ್ಲಿ ತನಿಖೆಗೆ ಸಮಿತಿ ರಚಿಸಿದೆ. ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಸೆ.23ರಂದೇ ತನಿಖೆಗೆ ಆದೇಶ ಹೊರಡಿಸಿದ್ದರು. ಅದರ ಆಧಾರದಲ್ಲಿ ಸಮಿತಿ ರಚನೆ ಮಾಡಲಾಗಿದೆ. ತನಿಖಾ ಸಮಿತಿಯಲ್ಲಿ ಯೋಜನೆ ವಿಶೇಷ, ಹಣಕಾಸು ವಿಶೇಷ ಆಯುಕ್ತರು, ಕ್ವಾಲಿಟಿ ಚೆಕ್ ಚೀಫ್ ಇಂಜಿನಿಯರ್ ಹಾಗೂ ಟಿವಿಸಿಸಿ ಚೀಫ್ ಇಂಜಿನಿಯರ್ ಒಳಗೊಂಡಿದ್ದಾರೆ ಎನ್ನಲಾಗಿದೆ

ಉಚಿತ ಆ್ಯಂಜಿಯೋಗ್ರಾಂ, ಆ್ಯಂಜಿಯೋಪ್ಲಾಸ್ಟಿ ಶಿಬಿರ

ಮೈಸೂರು,ಸೆ.25(ಜಿಎ)–ಮೈಸೂರಿನ ಸುಯೋಗ್ ಆಸ್ಪತ್ರೆಯ ಹೃದಯಶಾಸ್ತ್ರ ಘಟಕದಿಂದ ವಿಶ್ವ ಹೃದಯ ದಿನಾಚರಣೆಯನ್ನು ಹಮ್ಮಿಕೊಳ್ಳಲಾಗಿದ್ದು, ಸೆ.29ರಂದು ಬೆಳಗ್ಗೆ 7.30ಗಂಟೆಗೆ ರಾಮಕೃಷ್ಣ ನಗರದ ರಾಮಕೃಷ್ಣ ಪರಮಹಂಸ ವೃತ್ತದಿಂದ 'ನಮ್ಮ ನಡಿಗೆ ಹೃದಯದ ಆರೋಗ್ಯದ ಕಡೆಗೆ' ಘೋಷವಾಕ್ಯದೊಡನೆ ಸಾರ್ವಜನಿಕರಿಂದ ವಾಕಥಾನ್ ಆಯೋಜಿಸಲಾಗಿದೆ ಎಂದು ಸುಯೋಗ್ ಆಸ್ಪತ್ರೆ ಅಧ್ಯಕ್ಷ ಡಾ. ಎಸ್.ಪಿ.ಯೋಗಣ್ಣ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಮಕೃಷ್ಣನಗರದ ವಿವಿಧ ಪ್ರಮುಖ ಬೀದಿಗಳಲ್ಲಿ ವಾಕಥಾನ್ ಸಾಗಿ ಹೃದಯದ ಆರೋಗ್ಯಕ್ಕೆ ನಡಿಗೆ ಎಷ್ಟು ಪ್ರಾಮುಖ್ಯ ಎಂಬುದರ ಬಗ್ಗೆ ಅರಿವು ಮೂಡಿಸಲಾಗುವುದು. ಕಾರ್ಯಕ್ರಮವನ್ನು ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಉದ್ಘಾಟಿಸುವರು. ವಾಕಥಾನ್ ಕಾರ್ಯಕ್ರಮದಲ್ಲಿ ಸಾರ್ವಜನಿಕರು, ವಿದ್ಯಾರ್ಥಿಗಳು ಭಾಗವಹಿಸಲಿದ್ದಾರೆ ಎಂದರು.

ಉಚಿತ ಆ್ಯಂಜಿಯೋಗ್ರಾಂ ಹಾಗೂ ಆಂಜಿಯೋಪ್ಲಾಸ್ಟಿ ಶಿಬಿರವನ್ನು ಸೆ.29ರಂದು ಬೆಳಗ್ಗೆ 10 ಗಂಟೆಗೆ ಸುಯೋಗ ಆಸ್ಪತ್ರೆ ಸಭಾಂಗಣದಲ್ಲಿ ಏರ್ಪಡಿಸಲಾಗಿದ್ದು, ಉದ್ಘಾಟನಾ ಕಾರ್ಯಕ್ರಮದ ಸಾನ್ನಿಧ್ಯವನ್ನು ಬೇಬಿಮಠದ ಶ್ರೀ ತ್ರಿನೇತ್ರ ಮಹಂತೇಶ ಶಿವಯೋಗಿ ಸ್ವಾಮೀಜಿ ವಹಿಸಲಿದ್ದು, ಮೈಸೂರು ವಿಭಾಗದ ಕಾರ್ಡಿಯಾಲಜಿ ಸೊಸೈಟಿಯ ಅಧ್ಯಕ್ಷ ಡಾ.ಎಂ.ಮಂಜಪ್ಪ ಶಿಬಿರ ಉದ್ಘಾಟಿಸಲಿದ್ದಾರೆ ಎಂದರು.

ಉಚಿತ ಸಂಪೂರ್ಣ ಹೃದಯ ತಪಾಸಣಾ ಶಿಬಿರವೂ ಸಹ ನಡೆಯಲಿದೆ. ಆಸಕ್ತರು ತಮ್ಮ ಹೆಸರನ್ನು ಪೂರ್ವಭಾವಿಯಾಗಿ 0821-2566966, 9986399862 ದೂರವಾಣಿಗೆ ಕರೆ ಮಾಡಿ ನೋಂದಾಯಿಸಿಕೊಳ್ಳಲು ಕೋರಲಾಗಿದೆ. ಪ್ರತಿನಿತ್ಯ 50 ರೋಗಿಗಳಿಗೆ ಮಾತ್ರ ತಪಾಸಣೆಗಳಿಗೆ ಅವಕಾಶವಿರುತ್ತದೆ. ಪತ್ರಿಕಾಗೋಷ್ಠಿಯಲ್ಲಿ ಸುಯೋಗ್ ಆಸ್ಪತ್ರೆಯ ನಿರ್ದೇಶಕರಾದ ಡಾ.ಜಯಕುಮಾರ್, ಡಾ. ಸುಯೋಗ್ ಯೋಗಣ್ಣ, ಮತ್ತಿತರರು ಉಪಸ್ಥಿತರಿದ್ದರು.

ಸನ್ಮಾನ...



ಕರ್ನಾಟಕ ರಾಜ್ಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ವತಿಯಿಂದ 2023-24ನೇ ಸಾಲಿನ ಸಾಲ ವಸೂಲಾತಿಯಲ್ಲಿ ಉತ್ತಮ ಸಾಧನೆ ಮಾಡಿರುವ ಮೈಸೂರು ಜಿಲ್ಲೆಯ ಟಿ.ನರಸೀಪುರ ಪಿಕಾರ್ಡ್ ಬ್ಯಾಂಕ್ ಜಿಲ್ಲೆಗೆ ಪ್ರಥಮ ಮತ್ತು ರಾಜ್ಯಕ್ಕೆ 10ನೇ ಸ್ಥಾನ ಪಡೆದಿದೆ. ಈ ಹಿನ್ನೆಲೆಯಲ್ಲಿ ಬೆಂಗಳೂರಿನ ಕೇಂದ್ರ ಕಚೇರಿಯಲ್ಲಿ ನಡೆದ ಸಮಾರಂಭದಲ್ಲಿ ಬ್ಯಾಂಕ್ ಅಧ್ಯಕ್ಷ ಹಾಗೂ ಕಾಸ್ಕಾರ್ಡ್ ಬ್ಯಾಂಕ್ ಜಿಲ್ಲಾ ನಿರ್ದೇಶಕ ಕೆಂಪಯ್ಯನಹುಂಡಿ ಮಹದೇವಣ್ಣ, ಪಿಕಾರ್ಡ್ ಬ್ಯಾಂಕಿನ ಪ್ರಭಾರ ವ್ಯವಸ್ಥಾಪಕ ಮಹೇಶ ಹಾಗೂ ನಿರ್ದೇಶಕ ಲಿಂಗಾಪ್ಪಾಜಿ ಅವರಿಗೆ ಪ್ರಶಸ್ತಿ, ಪಾರಿತೋಷಕ ನೀಡಿ, ಆತ್ಮೀಯವಾಗಿ ಸನ್ಮಾನಿಸಲಾಯಿತು.

ಯುಪಿಎಸ್‌ಸಿ ಮಾದರಿ ಕೆಪಿಎಸ್‌ಸಿಯಲ್ಲಿ ಸುಧಾರಣೆ

ನೇಮಕಾತಿ ಗೊಂದಲ ನಿವಾರಣೆ ನಿಟ್ಟಿನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚನೆ



ಬೆಂಗಳೂರಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಬುಧವಾರ ಕೆಪಿಎಸ್‌ಸಿ ನೇಮಕಾತಿ ಸಂಬಂಧ ಅಧಿಕಾರಿಗಳ ಸಭೆ ನಡೆಸಿದರು.

ಬೆಂಗಳೂರು, ಸೆ.25(ಕೆಎಂಶಿ)– ಕೇಂದ್ರ ಲೋಕಸೇವಾ ಆಯೋಗ (ಯುಪಿಎಸ್‌ಸಿ) ಮಾದರಿ ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ) ನಿಗದಿತ ವೇಳಾಪಟ್ಟಿ ಅನ್ವಯ ಕಾರ್ಯನಿರ್ವಹಣೆಗೆ ಅನುಕೂಲವಾಗುವಂತಹ ಸುಧಾರಣಾ ಕ್ರಮ ಕೈಗೊಳ್ಳುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಸೂಚಿಸಿದ್ದಾರೆ.

ನೇಮಕಾತಿ ಪ್ರಕ್ರಿಯೆ ವಿಳಂಬವಾಗಲು ಎದುರಾಗಿರುವ ಕಾನೂನು ತೊಡಕುಗಳು ಹಾಗೂ 371ಜೆ ಅಡಿ ಮೀಸಲಾತಿಗೆ ಸಂಬಂಧಿಸಿದ ವಿಷಯ ಕುರಿತ ಸಭೆಯಲ್ಲಿ ಅವರು ಸರ್ಕಾರದ ವಿವಿಧ ಹುದ್ದೆಗಳ ನೇಮಕಾತಿ ಪ್ರಗತಿ ಪರಿಶೀಲನೆ ನಡೆಸಿದರು. ಪ್ರತಿ ವರ್ಷ ನೇಮಕಾತಿಗೆ ಏಕಕಾಲಕ್ಕೆ ಅಧಿಸೂಚನೆ ಹೊರಡಿಸಲು ಅನುವಾಗುವಂತೆ ಎಲ್ಲ ಇಲಾಖೆಗಳು ನಿಗದಿತ ಗಡುವಿನೊಳಗೆ ಪ್ರಸ್ತಾವನೆಗಳನ್ನು ಸಲ್ಲಿಸಬೇಕು ಹಾಗೂ ಪರೀಕ್ಷಾ ವೇಳಾಪಟ್ಟಿಯಲ್ಲಿ ಫಲಿತಾಂಶ ಪ್ರಕಟಣೆ ದಿನಾಂಕ ನಿಗದಿಪಡಿಸಬೇಕು. ವಿವಿಧ ನೇಮಕಾತಿ ಪ್ರಾಧಿಕಾರಗಳ ಪರೀಕ್ಷೆಗಳು ಒಂದೇ ದಿನಾಂಕದಡಿ ಬರದಂತೆ ನೋಡಿಕೊಳ್ಳಬೇಕು, ವಿವಿಧ ಇಲಾಖೆಗಳ ವೃಂದ ಮತ್ತು ನೇಮಕಾತಿ ನಿಯಮಗಳ ನ್ಯೂನತೆಯೂ ನೇಮಕಾತಿ ವಿಳಂಬಕ್ಕೆ ಕಾರಣವಾಗಿದೆ. ಕಲ್ಯಾಣ ಕರ್ನಾಟಕ ಅಭ್ಯರ್ಥಿಗಳ ನೇಮಕಾತಿಗೆ ಸಂಬಂಧಿಸಿದ ಗೊಂದಲಗಳನ್ನು ಸವಿಸ್ತಾರವಾಗಿ ಪರಿಶೀಲಿಸಿ, ಸಚಿವ ಸಂಪುಟ ಉಪಸಮಿತಿ ಆದೇಶಗಳ ಪಾಲನೆ ಕುರಿತು ಸಚಿವ ಸಂಪುಟದ ಮುಂದೆ ವಿಷಯ ಮಂಡಿಸಬೇಕು. ಸಚಿವ ಸಂಪುಟ ಉಪಸಮಿತಿ ಸೂಚನೆಗಳನ್ನು ಇಲಾಖಾ ಮುಖ್ಯಸ್ಥರು ಪಾಲಿಸಬೇಕು, ತಪ್ಪಿದಲ್ಲಿ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದರು.

ಪ್ರತಿ ನೇಮಕಾತಿ ಪ್ರಕ್ರಿಯೆಯು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಕಲ್ಯಾಣ ಕರ್ನಾಟಕ ಕೋಶದ ಸಹಮತಿಯೊಂದಿಗೆ ಅಧಿಸೂಚನೆ ಹೊರಡಿಸಬೇಕು. ಅಂತಿಮ ಆಯ್ಕೆ ಪಟ್ಟಿ ಪ್ರಕಟಣೆ ನಂತರ ಸಿಂಧುತ್ವ ಪ್ರಮಾಣಪತ್ರ ಹಾಗೂ ನೇಮಕಾತಿ ಆದೇಶ ನೀಡುವಲ್ಲಿಯೂ ವಿಳಂಬವಾಗುತ್ತಿದೆ. ಈ ಹಿನ್ನೆಲೆಯಲ್ಲಿ ನೇಮಕಾತಿ ಬಗ್ಗೆ ಇಲಾಖಾ ಮುಖ್ಯಸ್ಥರು, ಪ್ರತಿ ವಾರ ಪರಿಶೀಲನೆ ನಡೆಸಬೇಕು, ಸುತ್ತೋಲೆಗಳ ಕೈಪಿಡಿಗಳನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಕಳುಹಿಸಬೇಕು ಎಂದು ಸೂಚಿಸಿದರು.

ಮುಂದಿನ ವಾರ ಮತ್ತೊಮ್ಮೆ ಸಭೆ ನಡೆಸಿ ಸಂಪೂರ್ಣ ಮಾಹಿತಿ ಪಡೆದು ಚರ್ಚಿಸುವುದಾಗಿ ಅವರು ತಿಳಿಸಿದರು.



ಸಮೃದ್ಧಿ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿಯ 12ನೇ ವಾರ್ಷಿಕ ಸರ್ವ ಸದಸ್ಯರ ಸಭೆ



ಬೆಂಗಳೂರಿನ ಪ್ಯಾಲೇಸ್ ಮೈದಾನದಲ್ಲಿ ನಡೆದ ಸಮೃದ್ಧಿ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿಯ 12ನೇ ವಾರ್ಷಿಕ ಸರ್ವ ಸದಸ್ಯರ ಸಭೆಯನ್ನು ಆಹಾರ ಸಚಿವ ಕೆ.ಹೆಚ್.ಮುನಿಯಪ್ಪ ಹಾಗೂ ಶಾಸಕ ಜಿ.ಟಿ.ದೇವೇಗೌಡರು ಉದ್ಘಾಟಿಸಿದರು. ಕಾರ್ಯಕ್ರಮದಲ್ಲಿ ಮಾಜಿ ಸಚಿವ ಬಂಡೆಪ್ಪ ಕಾಶಂಪೂರ್, ಚಿತ್ರನಟ ಗೋಲ್ಡನ್ ಸ್ಟಾರ್ ಗಣೇಶ್, ಸಮೃದ್ಧಿ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿಯ ಸಂಸ್ಥಾಪಕ ಅಧ್ಯಕ್ಷರೂ ಆದ ಶಾಸಕ ಸಮೃದ್ಧಿ ಮಂಜುನಾಥ್, ಆಡಳಿತ ಮಂಡಳಿ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರು, ಸಿಬ್ಬಂದಿ ಹಾಗೂ ಸಾವಿರಾರು ಸದಸ್ಯರು ಪಾಲ್ಗೊಂಡಿದ್ದರು.

ಹದಿನಾರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಕ್ಕೆ 9.5 ಲಕ್ಷ ರೂ. ನಿವ್ವಳ ಲಾಭ



ಸುತ್ತೂರು, ಸೆ. 25– ನಂಜನಗೂಡು ತಾಲೂಕು ಹದಿನಾರು ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘವು 2023–24 ನೇ ಸಾಲಿನಲ್ಲಿ 9.5 ಲಕ್ಷ ನಿವ್ವಳ ಲಾಭ ಗಳಿಸಿದೆ ಎಂದು ಸಂಘದ ಅಧ್ಯಕ್ಷ ನಂಜುಂಡಸ್ವಾಮಿ ತಿಳಿಸಿದರು.

ಸಂಘದ 2023–24ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ಅಧ್ಯಕ್ಷತೆಯನ್ನು ವಹಿಸಿ, ಜ್ಯೋತಿ ಬೆಳಗಿಸುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತಾ, ಸಂಘವು ಸುಮಾರು 1782 ಸದಸ್ಯರನ್ನು ಹೊಂದಿದ್ದು, ಇಲ್ಲಿವರೆಗೆ ಹೈನುಗಾರಿಕೆ ಹಾಗೂ ಬೆಳೆಸಾಲ ಸೇರಿದಂತೆ ಸುಮಾರು 11 ಕೋಟಿ 23 ಲಕ್ಷ ರೂ ಸಾಲ ನೀಡಿದೆ. ಅಂದಾಜು 9.5 ಲಕ್ಷ ನಿವ್ವಳ ಲಾಭ ಗಳಿಸಿದೆ. ಸಂಘದ ಸದಸ್ಯರು ಸಂಘದಿಂದ ರೈತರಿಗಾಗೇ ಇರುವ ಸೌಲಭ್ಯಗಳನ್ನು ಪಡೆದುಕೊಳ್ಳುವ ಜೊತೆಗೆ ಸಂಘದಿಂದ ಪಡೆದಿರುವ ಸಾಲವನ್ನು ಸುಸ್ತಿದಾರರಾಗದೇ ಸಕಾಲದಲ್ಲಿ ಪಾವತಿ ಮಾಡುವ ಮೂಲಕ ಸಂಘದ ಅಭಿವೃದ್ಧಿಗೆ ಸಹಕಾರ ನೀಡಿ ಶ್ರಮಿಸಬೇಕೆಂದರು.

ಇದೇ ವೇಳೆ ಸಿ.ಇ.ಒ ಹೆಚ್.ಬಿ.ಶಂಕರ್ ಸಂಘದ ಆಯ-ವ್ಯಯದ ಬಗ್ಗೆ ಸಭೆಗೆ ಮಾಹಿತಿ ನೀಡಿದರು. ಜಿ.ಪಂ ಮಾಜಿ ಸದಸ್ಯ ಹೆಚ್.ಎನ್.ನಂಜಪ್ಪ, ತಾ.ಪಂ ಮಾಜಿ ಸದಸ್ಯ ಶ್ರೀಕಂಠು, ಪ್ರಾ.ಕೃ.ಪ.ಸ. ಸಂಘದ ಅಧ್ಯಕ್ಷ ನಂಜುಂಡಸ್ವಾಮಿ, ಉಪಾಧ್ಯಕ್ಷ ಬಿ.ಎಂ.ವೃಷಬೇಂದ್ರ, ಮಾಜಿ ಅಧ್ಯಕ್ಷ ಶಿವಣ್ಣ, ಸಂಘದ ನಿರ್ದೇಶಕರಾದ ಪಿ.ಶೇಖರ್, ಪ್ರಸಾದ್, ಮಹೇಂದ್ರ, ಪ್ರಭುಸ್ವಾಮಿ, ನಂಜುಂಡಯ್ಯ, ರವಿ, ಹೆಚ್.ಎಸ್.ರಾಜು, ಶ್ರೀಮತಿ ಎಂ.ಮಧು, ಗೌರಮ್ಮ, ಎಲ್.ಸಿದ್ದರಾಜು, ಬ್ಯಾಂಕ್ ಪ್ರತಿನಿಧಿ ಬಿ.ಸಿ.ಶಿವಲಿಂಗೇಗೌಡ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಹೆಚ್.ಬಿ. ಶಂಕರ್, ಸಿಬ್ಬಂದಿ ಸೇರಿದಂತೆ ಸಂಘದ ಸದಸ್ಯರು, ರೈತರು ಹಾಜರಿದ್ದರು.

ಇಂಡಿಯಾ ಬುಕ್ ಆಫ್ ರೆಕಾರ್ಡ್‌ಗೆ ಪ್ರವೇಶ



ಮೈಸೂರು, ಸೆ.25–ಮೈಸೂರಿನ ಜೆ.ಪಿ.ನಗರ ಜೆಎಸ್‌ಎಸ್ ಪಬ್ಲಿಕ್ ಶಾಲೆಯಲ್ಲಿ 4ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಸಾಯಿ ಸೋಹನ್ ಕೇವಲ 10 ಸೆಕೆಂಡ್‌ಗಳಲ್ಲಿ ಕಣ್‌ಪಟ್ಟಿ ಕಟ್ಟಿಕೊಂಡು ಹಾವಿನ ಘನವನ್ನು ಪೂರ್ಣಗೊಳಿಸಿ ಇಂಡಿಯಾ ಬುಕ್ ಆಫ್ ರೆಕಾರ್ಡ್ ಪ್ರವೇಶಿಸುವ ಮೂಲಕ, ಅತ್ಯಂತ ಕಿರಿಯ ಹಾಗೂ ಅತ್ಯಂತ ವೇಗವಾಗಿ ಈ ಸಾಧನೆ ಮಾಡಿರುವ ಬಾಲಕ ಎನಿಸಿಕೊಂಡಿದ್ದಾನೆ. ಈ ಸಾಧನೆ ಮಾಡಿದ ವಿದ್ಯಾರ್ಥಿಯನ್ನು ಶಾಲೆಯ ಪ್ರಾಂಶುಪಾಲರು ಹಾಗೂ ಸಿಬ್ಬಂದಿ ಅಭಿನಂದಿಸಿದ್ದಾರೆ.

ನೇಕಾರ್ ಸಮ್ಮಾನ್ ಯೋಜನೆಗೆ ಅರ್ಜಿ ಆಹ್ವಾನ

ಮೈಸೂರು,ಸೆ.25–ಕೈಮಗ್ಗ ಮತ್ತು ಜವಳಿ ಇಲಾಖೆ ವತಿಯಿಂದ 2024–25ನೇ ಸಾಲಿನ ನೇಕಾರ ಸಮ್ಮಾನ್ ಯೋಜನೆಯಡಿ ಕೈಮಗ್ಗ, ವಿದ್ಯುತ್ ಮಗ್ಗ ಮತ್ತು ಮಗ್ಗಪೂರ್ವ ಘಟಕಗಳ ನೇಕಾರರಿಗೆ ವಾರ್ಷಿಕ 5,000 ರೂ.ಗಳ ಆರ್ಥಿಕ ನೆರವನ್ನು ನೀಡುವ ಸಲುವಾಗಿ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತರು ಸೇವಾಸಿಂಧು ಪೋರ್ಟಲ್‌ನಲ್ಲಿ ನೇಕಾರರ ಮಾಹಿತಿಯನ್ನು ಅಪ್ಲೋಡ್ ಮಾಡಬಹುದು ಅಥವಾ ಜಿಲ್ಲಾ ಕಚೇರಿಯಿಂದ ಅರ್ಜಿ ಪಡೆದು, ದಾಖಲಾತಿಗಳೊಂದಿಗೆ ಅ.30ರೊಳಗೆ ಸಲ್ಲಿಸಬಹುದು. ಮಾಹಿತಿಗೆ ಕೈಮಗ್ಗ ಮತ್ತು ಜವಳಿ ಇಲಾಖೆ ಉಪನಿರ್ದೇಶಕರ ಕಚೇರಿಗೆ ಭೇಟಿ ನೀಡಬಹುದು ಅಥವಾ ಕಚೇರಿ ದೂ.ಸಂ:0821–2441353 ಅನ್ನು ಸಂಪರ್ಕಿಸಬಹುದು.

ಕಾಯಕದೊಡನೆ ಶಿಕ್ಷಣ ಪ್ರಜ್ಞೆ ಇದ್ದಲ್ಲಿ ಸಾಧನೆ ಸಾಧ್ಯ

ಸರ್ ಎಂ.ವಿಶ್ವೇಶ್ವರಯ್ಯ ಜಯಂತಿ, ಮಕ್ಕಳಿಗೆ ಪ್ರತಿಭಾ ಪುರಸ್ಕಾರ ವಿತರಣೆ ಸಮಾರಂಭದಲ್ಲಿ ಹಿರಿಯ ಸಾಹಿತಿ ಬನ್ನೂರು ರಾಜು ಅಭಿಮತ



ಮೈಸೂರಿನ ಸರಸ್ವತಿಪುರಂನ ರೋಟರಿ ಪಶ್ಚಿಮ ಶಾಲೆ ಸಭಾಂಗಣದಲ್ಲಿ ನಡೆದ ಸರ್ ಎಂ.ವಿಶ್ವೇಶ್ವರಯ್ಯ ನಲ್ಲಿ ಮತ್ತು ಒಳಚರಂಡಿ ಕಾರ್ಮಿಕರ ಕ್ಷೇಮಾಭಿವೃದ್ಧಿ ಸಂಘದ ವಾರ್ಷಿಕೋತ್ಸವ ಮತ್ತು ಭಾರತ ರತ್ನ ಸರ್ ಎಂ.ವಿಶ್ವೇಶ್ವರಯ್ಯ ಜಯಂತಿ, ಸಂಘದ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಸಮಾರಂಭವನ್ನು ಹಿರಿಯ ಸಾಹಿತಿ ಬನ್ನೂರು ರಾಜು ಉದ್ಘಾಟಿಸಿದರು

ಮೈಸೂರು, ಸೆ. 25–ಜಾತಿ,ಮತ, ಧರ್ಮ, ವರ್ಗಗಳೆಂಬ ಭೇದ-ಭಾವ ವಿರದೆ ಪ್ರತಿಯೊಬ್ಬರಿಗೂ ಸಿಗುವ ವಿದ್ಯೆವೊಂದಿದ್ದರೆ ಯಾರು ಬೇಕಾದರೂ ಎಷ್ಟು ಎತ್ತರಕ್ಕೆ ಬೇಕಾದರೂ ಏರಿ ಏನು ಬೇಕಾದರೂ ಸಾಧಿಸಬಹುದಾಗಿದ್ದು ಪ್ರತಿಯೊಬ್ಬರಲ್ಲೂ ಕಾಯಕ ಮತ್ತು ಶಿಕ್ಷಣ ಪ್ರಜ್ಞೆ ಇರಬೇಕೆಂದು ಪತ್ರಕರ್ತರೂ ಆದ ಸಾಹಿತಿ ಬನ್ನೂರು ಕೆ.ರಾಜು ಅಭಿಪ್ರಾಯಪಟ್ಟರು.

ಮೈಸೂರಿನ ಸರಸ್ವತಿಪುರಂನ ರೋಟರಿ ಪಶ್ಚಿಮ ಶಾಲೆಯ ಸಭಾಂಗಣದಲ್ಲಿ ನಡೆದ ಭಾರತ ರತ್ನ ಸರ್ ಎಂ.ವಿಶ್ವೇಶ್ವರಯ್ಯ ನಲ್ಲಿ ಮತ್ತು ಒಳಚರಂಡಿ ಕಾರ್ಮಿಕರ ಕ್ಷೇಮಾಭಿವೃದ್ಧಿ ಸಂಘದ ವಾರ್ಷಿಕೋತ್ಸವ ಮತ್ತು ಭಾರತ ರತ್ನ ಸರ್ ಎಂ. ವಿಶ್ವೇಶ್ವರಯ್ಯ ಜಯಂತಿ ಹಾಗೂ ಸಂಘದ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಮಾತನಾಡಿದ ಅವರು, ಯಂತ್ರರ್ಷಿ ಸರ್ ಎಂ.ವಿಶ್ವೇಶ್ವರಯ್ಯ ಮತ್ತು ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರನ್ನು ಆದರ್ಶವಾಗಿಟ್ಟುಕೊಂಡು ಪ್ರಾಮಾಣಿಕವಾಗಿ ಕೆಲಸಮಾಡುತ್ತಾ ನಲ್ಲಿ ಮತ್ತು ಒಳಚರಂಡಿಯಲ್ಲಿ ಸ್ವಚ್ಛವಾಗಿ ಸರಾಗವಾಗಿ ನೀರು ಹರಿಯುವ ಸುವ್ಯವಸ್ಥೆಗೆ ತಮ್ಮ ಬೆವರನ್ನೇ ಹರಿಸಿ ದುಡಿಯುತ್ತಿರುವ ನಲ್ಲಿ ಮತ್ತು ಒಳಚರಂಡಿ ಕಾರ್ಮಿಕರ ದುಡಿಮೆಯ ಬೆವರಿಗೆ ಬೆಲೆ ಕಟ್ಟಲಾಗದೆಂದರು. ನಾಲ್ವಡಿ ಮತ್ತು ಸರ್ ಎಂವಿ ಮಹಾತ್ಮರಿಬ್ಬರೂ ಆಧುನಿಕ ಮೈಸೂರಿನ ನಿರ್ಮಾತೃಗಳಾಗಿ ನಾಡನ್ನು ಕಟ್ಟಿದ ರೀತಿ ಅದ್ಭುತವಾದದ್ದು. ಹತ್ತು ಜನ್ಮಕ್ಕಾಗುವಷ್ಟು ಕೆಲಸವನ್ನು ಒಂದೇ ಜನ್ಮದಲ್ಲಿ ಮಾಡಿದವರಿವರು. ನಾಡಿನ ಎರಡು ಕಣ್ಣುಗಳಂತಿದ್ದ ಇವರು ಕತ್ತಲಲ್ಲಿದ್ದವರನ್ನೆಲ್ಲ ನಾಡಿನ ಸರ್ವತೋಮುಖ ಅಭಿವೃದ್ಧಿಯ ಮೂಲಕ ಬೆಳಕಿನತ್ತ ಕರೆತಂದವರು ಎಂದರು.

ಇದಕ್ಕೂ ಮುನ್ನ ತಾಯಿ ಶ್ರೀಭುವನೇಶ್ವರಿ ಮತ್ತು ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಹಾಗೂ ಸರ್ ಎಂ.ವಿಶ್ವೇಶ್ವರಯ್ಯ ಭಾವಚಿತ್ರಗಳಿಗೆ ಪುಷ್ಪಾರ್ಚನೆ ಮಾಡಿ ಜ್ಯೋತಿ ಬೆಳಗುವ ಮೂಲಕ ಕಾರ್ಯಕ್ರಮವನ್ನು ಶಾಸಕ ಶ್ರೀವತ್ಸ ಉದ್ಘಾಟಿಸಿದರು.

ಹಿಮಾಲಯ ಪರ್ವತ ಏರಿದ ಕರ್ನಾಟಕದ ಮೊದಲ ಮಹಿಳೆ ಎಂಬ ಖ್ಯಾತಿಯ ಡಾ. ಉಷಾ ಹೆಗ್ಗಡೆ ಅವರು ಕಾರ್ಮಿಕರ ಪ್ರತಿಭಾವಂತ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಿ, ತಮ್ಮ ಸಾಧನೆಯ ಬದುಕಿನ ಹಿನ್ನೆಲೆಯಲ್ಲಿ ಮಕ್ಕಳಿಗೆ ಸ್ಫೂರ್ತಿದಾಯಕ ಮಾತುಗಳನ್ನು ಹೇಳಿದರು. ಕನ್ನಡ ಪರ ಹೋರಾಟಗಾರ ಸೈಯದ್ ಇಸಾಕ್ ಮತ್ತು ಕಾರ್ಮಿಕ ಇಲಾಖೆಯ ನಿರೀಕ್ಷರಾದ ಮಂಗಳ ಗೌರಿ, ಜಿ.ಬಿ. ವೀಣಾ, ಉದ್ಯಮಿ ಮಹಾಂತೇಶ್ ಮುಂತಾದವರು ಮಾತನಾಡಿದರು.

ಸಂಘದ ನಿರ್ದೇಶಕ ಚಂದ್ರೇಗೌಡರು ಪ್ರಾಸ್ತಾವಿಕವಾಗಿ ಮಾತನಾಡಿ, ಎಲ್ಲರನ್ನೂ ಸ್ವಾಗತಿಸಿದರು. ಅಧ್ಯಕ್ಷರಾದ ಮಹೇಶ್ ಎಸ್. ಜಯನಗರ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಕಾನೂನು ಸಲಹೆಗಾರ ಎನ್.ಸುಂದರ್‌ರಾಜ್, ಲೆಕ್ಕ ಪರಿಶೋಧಕ ಡಿ.ಜಲೇಂದ್ರ, ಉಪಾಧ್ಯಕ್ಷ ಎಂ.ಎಸ್. ಸುರೇಶ್‌ಕುಮಾರ್, ಪ್ರಧಾನ ಕಾರ್ಯದರ್ಶಿ ಎಂ.ರವಿಕುಮಾರ್, ಜಂಟಿ ಕಾರ್ಯದರ್ಶಿ ಪಳನಿಸ್ವಾಮಿ, ಖಜಾಂಚಿ ಎಂ.ಪ್ರಕಾಶ್, ನಿರ್ದೇಶಕರಾದ ಕುಮಾರ್, ಯೋಗೇಶ್ ಹೆಬ್ಬಾಳ್, ಸುರೇಶ್, ಅನಿಲ್ ಕುಮಾರ್, ಮೊಹಮದ್ ಜಾಕಿರ್ ಹುಸೇನ್, ಸಂತೋಷ್‌ಕುಮಾರ್ ಬೇಹರ, ಯೋಗೇಶ್, ರುದ್ರಸ್ವಾಮಿ, ಶಿವರಾಜು ಮುಂತಾದವರು ಉಪಸ್ಥಿತರಿದ್ದರು.

ಇದೇ ಸಂದರ್ಭದಲ್ಲಿ ಹಿಮಾಲಯ ಪರ್ವತ ಏರಿದ ಕರ್ನಾಟಕದ ಪ್ರಥಮ ಸಾಹಸಿ ಮಹಿಳೆ ಡಾ.ಉಷಾ ಹೆಗ್ಗಡೆ ಮತ್ತು 35 ಸಾವಿರಕ್ಕೂ ಹೆಚ್ಚು ಪುಸ್ತಕಗಳುಳ್ಳ ಕನ್ನಡ ಗ್ರಂಥಾಲಯವನ್ನು ಸ್ಥಾಪಿಸಿರುವ ಕನ್ನಡ ಪರಿಚಾರಕ ಸೈಯದ್ ಇಸಾಕ್ ಹಾಗೂ ಖ್ಯಾತ ಸಾಹಿತಿ ಬನ್ನೂರು ಕೆ.ರಾಜು ಅವರನ್ನು ವಿಶೇಷವಾಗಿ ಗೌರವಿಸಲಾಯಿತು. ಕಾರ್ಮಿಕರ ಪ್ರತಿಭಾವಂತ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.

ದೇಶ - ವಿದೇಶ

ಉಕ್ರೇನ್ ಬಜೆಟ್‌ನಲ್ಲಿ ರಕ್ಷಣಾ ವಲಯಕ್ಕೆ ಶೇ.60ರಷ್ಟು ಹಣ ಮೀಸಲು

ಕೀವ್: ರಷ್ಯಾ ದಾಳಿಯ ಹಿನ್ನೆಲೆಯಲ್ಲಿ ಎಚ್ಚೆತ್ತುಕೊಂಡಿರುವ ಉಕ್ರೇನ್ 2025ನೇ ಸಾಲಿನಲ್ಲಿ ತನ್ನ ಬಜೆಟ್‌ನ ಶೇ.60ರಷ್ಟನ್ನು ರಕ್ಷಣಾ ಹಾಗೂ ಭದ್ರತಾ ವಲಯಕ್ಕೆ ಮೀಸಲಿಡಲು ನಿರ್ಧರಿಸಿದೆ.


ಬಜೆಟ್ ಕರಡಿನ ಆಧಾರದಲ್ಲಿ ಈ ಮಾಹಿತಿ ಲಭ್ಯವಾಗಿದೆ. ರಷ್ಯಾ, ಉಕ್ರೇನ್ ಮೇಲೆ ಯುದ್ಧ ಮಾಡುತ್ತಿರುವುದರ ಪರಿಣಾಮ ಕಳೆದ ಎರಡೂವರೆ ವರ್ಷಗಳಿಂದ ಉಕ್ರೇನ್‌ನ ಆರ್ಥಿಕತೆ ನೆಲಕಚ್ಚಿದೆ. ರಷ್ಯಾ–ಉಕ್ರೇನ್ ಯುದ್ಧ ಹತ್ತಾರು ಶತಕೋಟಿ ಡಾಲರ್‌ಗಳ ವಿನಾಶಕ್ಕೆ ಕಾರಣವಾಗಿದೆ. ರಾಜ್ಯದ ಹಣಕಾಸು ಪರಿಸ್ಥಿತಿ ನೆಲಕಚ್ಚಿದ್ದು, ಉಕ್ರೇನ್‌ಗೆ ಪಾಶ್ಚಿಮಾತ್ಯರ ಬೆಂಬಲ ಪಡೆಯುವುದು ಅನಿವಾರ್ಯವಾಗುವಂತೆ ಮಾಡಿದೆ. ಅಲ್ಲಿನ ಹಣಕಾಸು ಸಚಿವಾಲಯ ಪ್ರಸ್ತುತಪಡಿಸಿದ ಕರಡು ಯೋಜನೆಯಲ್ಲಿ, ಉಕ್ರೇನ್ 2025ರಲ್ಲಿ ರಾಷ್ಟ್ರೀಯ ಭದ್ರತೆ ಮತ್ತು ರಕ್ಷಣೆಗಾಗಿ 2.22 ಟ್ರಿಲಿಯನ್ ಹ್ರಿವ್ನಿಯಾವನ್ನು ($54 ಶತಕೋಟಿ) ಖರ್ಚು ಮಾಡುವುದಾಗಿ ಹೇಳಿದೆ. ಇದು ಉಕ್ರೇನ್‌ನ ಸುಮಾರು 26 ಪ್ರತಿಶತವನ್ನು ಪ್ರತಿನಿಧಿಸುತ್ತದೆ ಮತ್ತು 3.64 ಟ್ರಿಲಿಯನ್ ಹ್ರಿವ್ನಿಯಾದಲ್ಲಿ ಯೋಜಿಸಲಾದ ಸರ್ಕಾರದ ಒಟ್ಟಾರೆ ವೆಚ್ಚಗಳ 61 ಪ್ರತಿಶತವನ್ನು ಪ್ರತಿನಿಧಿಸುತ್ತದೆ. ರಷ್ಯಾ 10.8 ಟ್ರಿಲಿಯನ್ ರೂಬಲ್ಸ್‌ಗಳನ್ನು ($ 115 ಶತಕೋಟಿ)ರಕ್ಷಣೆಗಾಗಿ ಮೀಸಲಿಟ್ಟಿದ್ದು, ಇದು ಆ ರಾಷ್ಟ್ರದ ಬಜೆಟ್‌ನ ಶೇ.30ರಷ್ಟು ಪ್ರತಿಶತ ವೆಚ್ಚವಾಗಿದೆ.

ವಿಚ್ಛೇದನಕ್ಕಾಗಿ ಹೈಕೋರ್ಟ್ ಮೆಟ್ಟಿಲೇರಿದ 75 ವರ್ಷದ ಗಂಡ-ಹೆಂಡತಿ!

ಅಲಹಾಬಾದ್: ಜೀವನಾಂಶಕ್ಕಾಗಿ 75ರಿಂದ 80 ವರ್ಷ ವಯಸ್ಸಿನ ದಂಪತಿ ಪರಸ್ಪರರ ವಿರುದ್ಧ ಕಾನೂನು ಹೋರಾಟವನ್ನು ನಡೆಸುತ್ತಿರುವ ಅಪರೂಪದ ಘಟನೆಗೆ ಅಲಹಾಬಾದ್ ಹೈಕೋರ್ಟ್ ಸಾಕ್ಷಿಯಾಗಿದೆ. ಅಚ್ಚರಿ ಜೊತೆಗೆ ಆತಂಕಗೊಂಡ ನ್ಯಾಯಾಧೀಶರು ಕಲಿಯುಗ ಬಂದಂತೆ ತೋರುತ್ತಿದೆ ಎಂದು ಹೇಳಿರುವುದು ಸಾಕಷ್ಟು ಸುದ್ದಿಯಲ್ಲಿದೆ. ಪತ್ನಿ ಪರವಾಗಿ ಕೌಟುಂಬಿಕ ನ್ಯಾಯಾಲಯ ನೀಡಿರುವ ಆದೇಶದ ವಿರುದ್ಧ ಪತಿ ಅಲಿಘರ್‌ನ ಮುನೇಶ್‌ಕುಮಾರ್ ಗುಪ್ತಾ ಸಲ್ಲಿಸಿದ ಅರ್ಜಿಯನ್ನು ಆಲಿಸಿದ ನ್ಯಾಯಮೂರ್ತಿ ಸೌರಭ್ ಶ್ಯಾಮ್ ಶಂಶೇರಿ, ನಿಮ್ಮ ಕಾನೂನು ಹೋರಾಟ ಕಳವಳಕಾರಿ ವಿಷಯವಾಗಿದೆ ಎಂದು ದಂಪತಿಗೆ ಸಲಹೆ ನೀಡಲು ಪ್ರಯತ್ನಿಸಿದರು. ಪತಿಯಿಂದ ಪತ್ನಿ ಜೀವನಾಂಶವನ್ನು ಕೋರಿದ್ದರು, ಕೌಟುಂಬಿಕ ನ್ಯಾಯಾಲಯವು ಅವರ ಪರವಾಗಿ ತೀರ್ಪು ನೀಡಿತ್ತು. ಪತಿ ಆದೇಶವನ್ನು ಪ್ರಶ್ನಿಸಿ, ಪತ್ನಿಗೆ ನೋಟಿಸ್ ಜಾರಿಗೊಳಿಸಿ, ಮುಂದಿನ ವಿಚಾರಣೆಯ ದಿನಾಂಕದೊಳಗೆ ಅವರು ಒಪ್ಪಂದಕ್ಕೆ ಬರುತ್ತಾರೆ ಎಂದು ಭಾವಿಸುವುದಾಗಿ ಹೈಕೋರ್ಟ್ ಹೇಳಿದೆ.




ಕಮಲಾ ಹ್ಯಾರಿಸ್ ಕಚೇರಿ ಮೇಲೂ ಗುಂಡಿನ ದಾಳಿ



ನ್ಯೂಯಾರ್ಕ್: ಯುಎಸ್ ಅಧ್ಯಕ್ಷೀಯ ಚುನಾವಣೆ ಹಿನ್ನೆಲೆಯಲ್ಲಿ ಮಾಜಿ ಅಧ್ಯಕ್ಷ, ಹಾಲಿ ಅಭ್ಯರ್ಥಿ ಡೊನಾಲ್ಡ್ ಟ್ರಂಪ್ ಗುರಿಯಾಗಿಸಿಕೊಂಡು 2 ಬಾರಿ ಗುಂಡಿನ ದಾಳಿಯಾಗಿದೆ. ಇದೀಗ ಪ್ರತಿಸ್ಪರ್ಧಿ ಹಾಗೂ ಉಪಾಧ್ಯಕ್ಷೆ ಕಮಲಾ ಹ್ಯಾರಿಸ್ ಕಚೇರಿಯ ಮೇಲೂ ಗುಂಡು ಹಾರಿಸಲಾಗಿದೆ. ಅರಿಜೋನಾದ ಕಮಲಾ ಹ್ಯಾರಿಸ್ ಅವರ ಪ್ರಚಾರ ಕಚೇರಿಗೆ ಗುಂಡು ಹಾರಿಸಿರುವುದನ್ನು ಪೊಲೀಸರು ಖಚಿತಪಡಿಸಿದ್ದಾರೆ. ಮಧ್ಯರಾತ್ರಿಯ ನಂತರ ಯಾರೋ ಗುಂಡುಗಳನ್ನು ಹಾರಿಸಿದ್ದಾರೆ. ಟೆಂಪೆಯಲ್ಲಿನ ಸದರ್ನ್ ಅವೆನ್ಯೂ ಮತ್ತು ಪ್ರೀಸ್ಟ್ ಡ್ರೈವ್ ಬಳಿಯ ಡೆಮಾಕ್ರಟಿಕ್ ನ್ಯಾಷನಲ್ ಕಮಿಟಿ ಪ್ರಚಾರ ಕಚೇರಿಯಲ್ಲಿ ಗುಂಡುಗಳಿಂದ ಹಾನಿ ಕಂಡುಬಂದಿದೆ ಎಂದು ಟೆಂಪೆ ಪೊಲೀಸ್ ಇಲಾಖೆ ನ್ಯೂಯಾರ್ಕ್ ಪೋಸ್ಟ್‌ಗೆ ತಿಳಿಸಿದೆ. ಗುಂಡಿನ ದಾಳಿ ನಡೆದಾಗ ಕಚೇರಿಯೊಳಗೆ ಯಾರೂ ಇರಲಿಲ್ಲ, ಆದರೆ ಇದು ಆ ಕಟ್ಟಡದಲ್ಲಿ ಕೆಲಸ ಮಾಡುವವರ ಮತ್ತು ಹತ್ತಿರದವರ ಸುರಕ್ಷತೆಯ ಬಗ್ಗೆ ಕಳವಳವನ್ನು ಉಂಟುಮಾಡುತ್ತದೆ ಎಂದು ಸಾರ್ವಜನಿಕ ಮಾಹಿತಿ ಅಧಿಕಾರಿ ಸಾರ್ಜೆಂಟ್ ರಯಾನ್ ಕುಕ್ ಹೇಳಿದ್ದಾರೆ. ಘಟನಾ ಸ್ಥಳದಲ್ಲಿ ಪರಿಶೀಲನೆ ನಡೆಯುತ್ತಿದೆ.


ಪುರಿ ಜಗನ್ನಾಥ ದೇಗುಲದ ಪ್ರಸಾದದ ತುಪ್ಪವೂ ಪರೀಕ್ಷೆ



ಭುವನೇಶ್ವರ: ಪುರಿಯ ಜಗನ್ನಾಥ ದೇವಸ್ಥಾನದಲ್ಲಿ ನೈವೇದ್ಯ ತಯಾರಿಸಲು ಬಳಸುವ ತುಪ್ಪದ ಗುಣಮಟ್ಟವನ್ನು ಪರೀಕ್ಷಿಸಲು ಒಡಿಶಾ ಸರ್ಕಾರ ನಿರ್ಧರಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಆಂಧ್ರಪ್ರದೇಶದ ತಿರುಮಲ ದೇವಸ್ಥಾನದಲ್ಲಿ ನೀಡುವ ಲಡ್ಡುಗಳನ್ನು ತಯಾರಿಸುವ ತುಪ್ಪದಲ್ಲಿ ಪ್ರಾಣಿಗಳ ಕೊಬ್ಬನ್ನು ಬಳಸಲಾಗಿದೆ ಎಂಬ ಆರೋಪದ ಹಿನ್ನೆಲೆಯಲ್ಲಿ ಒಡಿಶಾ ಸರ್ಕಾರ ಈ ನಿರ್ಧಾರ ತೆಗೆದುಕೊಂಡಿದೆ. ಈ ಬಗ್ಗೆ ಮಾತನಾಡಿದ ಪುರಿಯ ಜಿಲ್ಲಾಧಿಕಾರಿ ಸಿದ್ಧಾರ್ಥ್ ಶಂಕರ್ ಸ್ವೈನ್, ಜಗನ್ನಾಥ ದೇಗುಲದಲ್ಲಿ ಕಲಬೆರಕೆಯಂತಹ ಯಾವುದೇ ಆರೋಪಗಳಿಲ್ಲ. ಅದಾಗ್ಯೂ ಆಡಳಿತ ಮಂಡಳಿಯು ಕೋತ ಭೋಗ (ದೇವತೆಗಳಿಗೆ ಪ್ರಸಾದ) ಮತ್ತು ಬಾರಾಡಿ ಭೋಗ (ಆದೇಶದ ಮೇರೆಗೆ ಪ್ರಸಾದ) ತಯಾರಿಸಲು ಬಳಸುವ ತುಪ್ಪದ ಗುಣಮಟ್ಟವನ್ನು ಪರೀಕ್ಷಿಸಲು ನಿರ್ಧರಿಸಿದೆ ಎಂದು ಮಾಹಿತಿ ನೀಡಿದರು.

ಪುರಿ ದೇವಸ್ಥಾನದಲ್ಲಿ ಬಳಕೆಗೆ ತುಪ್ಪದ ಏಕೈಕ ಪೂರೈಕೆದಾರ ಒಡಿಶಾ ಹಾಲು ಒಕ್ಕೂಟ(ಓಂಫೆಡ್)ವಾಗಿದೆ. ಕಲಬೆರಕೆ ಭಯ ಹೋಗಲಾಡಿಸಲು ಓಂಫೆಡ್‌ನಿಂದ ಪೂರೈಕೆಯಾಗುತ್ತಿರುವ ತುಪ್ಪದ ಗುಣಮಟ್ಟವನ್ನು ಪರಿಶೀಲಿಸಲು ನಿರ್ಧರಿಸಲಾಗಿದೆ. ಈ ಸಂಬಂಧ ಓಂಫೆಡ್ ಹಾಗೂ ಪ್ರಸಾದ ತಯಾರಿಸುವ ದೇವಸ್ಥಾನದ ಸೇವಕರೊಂದಿಗೆ ಚರ್ಚೆ ನಡೆಸಲಾಗುವುದು ಎಂದರು.

ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್‌ಗೆ 1 ಕೆಜಿ ಚಿನ್ನದ ಆಫರ್ ನೀಡಿದ ನಿರಾಣಿ



ಬೆಂಗಳೂರು: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್‌ಗೆ ಮಾಜಿ ಸಚಿವ ಮುರುಗೇಶ್ ನಿರಾಣಿ ಒಂದು ಕೆಜಿ ಚಿನ್ನದ ಆಫರ್ ನೀಡಿದ್ದಾರೆ. ಜತೆಗೊಂದು ಸವಾಲು ಹಾಕಿದ್ದಾರೆ. ಈ ಸವಾಲು ಸ್ವೀಕರಿಸಿ ಈಡೇರಿಸಿದರೆ ಒಂದು ಕೆಜಿ ಚಿನ್ನ ಉಡುಗೊರೆ ನೀಡಿ ಸನ್ಮಾನಿಸುವುದಾಗಿಯೂ ನಿರಾಣಿ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಮ್ಮ ಸರ್ಕಾರ ಇದ್ದಾಗ ಪಂಚಮಸಾಲಿ ಸಮುದಾಯಕ್ಕೆ 2ಎ ಮೀಸಲಾತಿ ಮಾಡಿಕೊಟ್ಟರೆ ಒಂದು ಕೆಜಿ ಕುಂದಾ ತಂದು ಸನ್ಮಾನ ಮಾಡುವುದಾಗಿ ಹೇಳಿದ್ದರು. ನಿಮ್ಮ ಕೈಯ್ಯಲ್ಲಿ ಆಗದಿದ್ದರೆ ಮೂರು ತಿಂಗಳ ನಂತರ ನಮ್ಮ ಸರ್ಕಾರ ಅಧಿಕಾರಕ್ಕೆ ಬರಲಿದ್ದು, 2ಎ ಮೀಸಲಾತಿ ಮಾಡಿಕೊಡುತ್ತೇವೆ. ಆಗ ನೀವು ಒಂದು ಜತೆ ಬಂಗಾರದ ಬಳೆ ಮಾಡಿಸಿ ಕೊಡಿ ಎಂದು ಲಕ್ಷ್ಮೀ ಹೆಬ್ಬಾಳ್ಕರ್ ಹೇಳಿದ್ದರು ಎಂದು ನಿರಾಣಿ ನೆನಪಿಸಿದರು. ಈಗ ಅವರದ್ದೇ ಸರ್ಕಾರ ಬಂದು ಒಂದೂವರೆ ವರ್ಷ ಆಯಿತು. ಲಕ್ಷ್ಮಿ ಹೆಬ್ಬಾಳ್ಕರ್ ಅವರು ಪಂಚಮಸಾಲಿ ಸಮುದಾಯಕ್ಕೆ 2ಎ ಮೀಸಲಾತಿ ಮಾಡಿ ಕೊಡಿಸಿದರೆ ಒಂದು ಕೆಜಿ ಬಂಗಾರ ನೀಡಿ, ಸನ್ಮಾನಿಸುವೆ ಎಂದು ಸವಾಲು ಹಾಕಿದರು.

ಮೈಸೂರು ಮಿತ್ರ ಗುರುವಾರ 26 ಸೆಪ್ಟೆಂಬರ್ 2024

ದಶಮಂಟಪಗಳು ಸಾಗುವ ಮಾರ್ಗ ಮಾಹಿತಿ ನೀಡಿ

ಮಡಿಕೇರಿ ದಸರಾ ದಶಮಂಟಪ, ಕರಗ ಉತ್ಸವ ಸಮಿತಿ ಸಭೆಯಲ್ಲಿ ಡಿಸಿ ವೆಂಕಟ್‌ರಾಜಾ ಸೂಚನೆ



ಮಡಿಕೇರಿಯಲ್ಲಿ ಜಿಲ್ಲಾಧಿಕಾರಿ ವೆಂಕಟ್‌ರಾಜಾ ಅಧ್ಯಕ್ಷತೆಯಲ್ಲಿ ದಸರಾ ದಶಮಂಟಪ ಹಾಗೂ ಕರಗ ಉತ್ಸವ ಸಮಿತಿಯ ಅಧ್ಯಕ್ಷರು ಮತ್ತು ಪದಾಧಿಕಾರಿಗಳ ಸಭೆ ನಡೆಯಿತು.

ಮಡಿಕೇರಿ, ಸೆ.25–ಮಡಿಕೇರಿ ದಸರಾ ಮಂಟಪಗಳು ಸಾಗುವ ಮಾರ್ಗ ಹಾಗೂ ವೇಳಾ ಪಟ್ಟಿ ಮಾಹಿತಿ ನೀಡಬೇಕು ಎಂದು ಜಿಲ್ಲಾಧಿಕಾರಿ ವೆಂಕಟ್‌ರಾಜಾ ತಿಳಿಸಿದರು.

ನಗರದಲ್ಲಿ ಬುಧವಾರ ನಡೆದ ದಶ ಮಂಟಪ ಹಾಗೂ ಕರಗ ಉತ್ಸವ ಸಮಿತಿ ಅಧ್ಯಕ್ಷರು ಮತ್ತು ಪದಾಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಅವರು, ಮೆರವಣಿಗೆಯಲ್ಲಿ ಯಾವ ಮಂಟಪ ಯಾವ ವೇಳೆಯಲ್ಲಿ ಎಲ್ಲಿಂದ, ಯಾವ ಮಾರ್ಗವಾಗಿ ತೆರಳಲಿದೆ ಎಂದು ಮಾಹಿತಿ ನೀಡಬೇಕು. ನಿಗದಿತ ವೇಳೆ ಹಾಗೂ ಮಂಟಪಗಳ ಮೆರವಣಿಗೆಯ ಸರಿಯಾದ ಮಾಹಿತಿ ಇದ್ದಲ್ಲಿ ಸಾರ್ವಜನಿಕರಿಗೆ ಅನುಕೂಲ ವಾಗಲಿದೆ. ಆ ನಿಟ್ಟಿನಲ್ಲಿ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಹೇಳಿದರು.

ಮಡಿಕೇರಿ ಜನೋತ್ಸವ ದಸರಾ ಪ್ರಮುಖವಾಗಿ ಕರಗ ಉತ್ಸವ ಹಾಗೂ ಮಂಟಪಗಳ ಮೆರವಣಿಗೆ ಅತೀ ಪ್ರಮುಖವಾಗಿದೆ. ಆ ನಿಟ್ಟಿನಲ್ಲಿ ದಸರಾ ವಿಶೇಷತೆ ಉಳಿಸಿಕೊಂಡು ಅಚ್ಚುಕಟ್ಟಾಗಿ ಕಾರ್ಯಕ್ರಮ ಆಯೋಜಿಸಬೇಕಿದೆ. ಜೊತೆಗೆ ಯಶಸ್ಸಿಗೆ ಸಹಕರಿಸುವಂತೆ ಮನವಿ ಮಾಡಿದರು.

ಧ್ವನಿವರ್ಧಕ (ಡಿಜೆ) ಬಳಕೆಗೆ ನಿಯಮ ಪಾಲಿಸಬೇಕು. ಸಾರ್ವಜನಿಕ ಹಿತಾಸಕ್ತಿ ಮುಖ್ಯ ಎಂಬುದನ್ನು ಯಾರೂ ಮರೆಯಬಾರದು. ಈಗಾಗಲೇ ಧ್ವನಿವರ್ಧಕ ಸಂಬಂಧಿಸಿದಂತೆ ಪಿಐಎಲ್ ದಾಖಲಾಗಿದ್ದು, ಈ ಬಗ್ಗೆ ಪ್ರತಿಯೊಬ್ಬರಲ್ಲೂ ಮಾಹಿತಿ ಇರಬೇಕು. ಜೊತೆಗೆ ದಶಮಂಟಪಗಳ ಪುರಾಣ ಸಂಬಂಧ ಮಾಹಿತಿ ಒದಗಿಸಿದಲ್ಲಿ ಮುಂದಿನ ದಿನಗಳಲ್ಲಿ ಪತ್ರ ಮಸ್ತಕಕ್ಕೆ ಸೇರ್ಪಡೆಯಾಗುವ ಸಾಧ್ಯತೆ ಇದೆ. ಆ ನಿಟ್ಟಿನಲ್ಲಿ ಕ್ರಮ ವಹಿಸುವಂತೆ ಸಲಹೆ ನೀಡಿದರು.

ದಶಮಂಟಪ ಸಮಿತಿ ಅಧ್ಯಕ್ಷ ಜಗದೀಶ್ ಮಾತನಾಡಿ, ಧ್ವನಿವರ್ಧಕ ಬಳಕೆ ಸಂಬಂಧ ಈಗಾಗಲೇ ಎಲ್ಲಾ ಮಂಟಪಗಳ ಅಧ್ಯಕ್ಷರ ಜೊತೆ ಚರ್ಚಿಸಲಾಗಿದೆ. ದಶಮಂಟಪಗಳು ಸ್ವಯಂ ಪ್ರೇರಣೆಯಿಂದ ಯಾವ ರೀತಿ ಧ್ವನಿವರ್ಧಕ ಬಳಕೆ ಮಾಡಬೇಕು ಎಂಬ ಬಗ್ಗೆ ನಿಯಮ ರೂಪಿಸಿಕೊಳ್ಳ ಲಾಗಿದೆ. ಮಂಟಪ ತೆರಳುವ ಮಾರ್ಗದ ಒಂದು ಬದಿಯಲ್ಲಿ ಮಾತ್ರ ಅಂಗಡಿಗಳನ್ನು ತೆರೆಯಲು ಅವಕಾಶ ಮಾಡಬೇಕು. ಎರಡು ಬದಿ ತೆರೆದರೆ ಸಾರ್ವಜನಿಕರ ಓಡಾಟಕ್ಕೆ ತೊಂದರೆಯಾಗಲಿದೆ ಎಂದು ತಿಳಿಸಿದರು.

ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಕೆ.ಎಸ್.ಸುಂದರರಾಜ್ ಮಾತನಾಡಿ, ಸುಗಮ ಸಾರಿಗೆ ಸಂಚಾರ ಹಾಗೂ ಜನರ ಓಡಾಟಕ್ಕೆ ಪೊಲೀಸ್ ಇಲಾಖೆಯಿಂದ ಅಗತ್ಯ ಕ್ರಮಕೈಗೊಳ್ಳಲಾಗುವುದು. ಮಂಟಪಗಳನ್ನು ಜಾಗೃತೆಯಿಂದ ಸುರಕ್ಷಿತ ಸ್ಥಳಕ್ಕೆ ತಲುಪಿಸಬೇಕು. ಆ ನಿಟ್ಟಿನಲ್ಲಿ ಎಲ್ಲಾ ಮಂಟಪಗಳ ಸಮಿತಿ ಸಾರ್ವಜನಿಕರ ಹಿತಾಸಕ್ತಿಯಂತೆ ಸ್ವಯಂಪ್ರೇರಣೆಯಿಂದ ಕಾರ್ಯನಿರ್ವಹಿಸಬೇಕು ಎಂದರು.

ಸಭೆಯಲ್ಲಿ ದಶಮಂಟಪ ಸಮಿತಿ ಪ್ರಧಾನ ಕಾರ್ಯದರ್ಶಿ ಯೋಗೇಶ್, ರಂಜಿತ್ ಮತ್ತಿತರರು ಹಾಜರಿದ್ದರು.

ಯುವ ದಸರಾಗೆ ಪ್ರಸಿದ್ಧ ನಟರ ಆಹ್ವಾನ

ದಸರಾ ಆಚರಣೆಯಲ್ಲಿ ಸ್ವಚ್ಛತೆ ಹಾಗೂ ಪರಿಸರ ಶುಚಿತ್ವಕ್ಕೆ ಒತ್ತು ನೀಡಬೇಕು ಎಂದು ಜಿಲ್ಲಾಧಿಕಾರಿ ವೆಂಕಟ್ ರಾಜಾ ತಿಳಿಸಿದರು.

ದಸರಾ ವಿವಿಧ ಉಪ ಸಮಿತಿ ಅಧ್ಯಕ್ಷರು ಹಾಗೂ ಪದಾಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಅವರು, ಪ್ರಾಯೋಜಕತ್ವ ಬಗ್ಗೆ ಗಮನ ಹರಿಸಬೇಕು. ಈಗಾಗಲೇ ಯುವ ದಸರಾಗೆ ಪ್ರಸಿದ್ಧ ನಟರನ್ನು ಆಹ್ವಾನಿಸಲು ತೀರ್ಮಾನಿಸಲಾಗಿದೆ. ಮಹಿಳಾ, ಮಕ್ಕಳ, ಜಾನಪದ, ಕಾಫಿ ದಸರಾ, ಹೀಗೆ ವಿವಿಧ ದಸರಾಗಳನ್ನು ಅಚ್ಚುಕಟ್ಟಾಗಿ ನಡೆಸಲು ಶ್ರಮಿಸುವಂತೆ ಹೇಳಿದರು.

ಖ್ಯಾತ ಹಿನ್ನೆಲೆ ಗಾಯಕರಾದ ಅರ್ಜುನ್ ಜನ್ಯ, ರಾಜೇಶ್ ಕೃಷ್ಣ ಸೇರಿದಂತೆ ಅನೇಕ ಖ್ಯಾತ ನಾಮರನ್ನು ದಸರಾ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಕರೆಸುವ ನಿಟ್ಟಿನಲ್ಲಿ ಚಿಂತನೆ ನಡೆಸಿದ್ದು, ಪ್ರಯತ್ನಗಳು ಸಾಗಿವೆ. ಜನೋತ್ಸವಕ್ಕೆ ಧಕ್ಕೆ ಬಾರದಂತೆ ಜನರ ಸಮಿತಿಯಿಂದಲೇ ಉತ್ಸವ ಸಾಂಪ್ರದಾಯಿಕವಾಗಿ ನಡೆಯಬೇಕು ಎಂದರು.

ವಿರಾಜಪೇಟೆಯಲ್ಲಿ ಹುತಾತ್ಮ ಯೋಧರಿಗೆ ಶ್ರದ್ಧಾಂಜಲಿ



ವಿರಾಜಪೇಟೆಯಲ್ಲಿ ಹುತಾತ್ಮ ಯೋಧರಿಗೆ ಜಿಲ್ಲಾ ಸಶಸ್ತ್ರ ಮೀಸಲು ಪಡೆ ಸಿಬ್ಬಂದಿ ಕುಶಲತೋಪು ಹಾರಿಸಿ ಶ್ರದ್ಧಾಂಜಲಿ ಸಲ್ಲಿಸಿದರು.

ವಿರಾಜಪೇಟೆ: ಕೊಡಗು ಮಾಜಿ ಸೈನಿಕರ ಸಹಕಾರ ಸಂಘದ ವತಿಯಿಂದ ಬುಧವಾರ ಪಟ್ಟಣದ ಭಾರತೀಯ ಸ್ಟೇಟ್ ಬ್ಯಾಂಕ್ ಶಾಖೆ ಮುಂಭಾಗದ ಅಮರ್ ಜವಾನ್ ಸ್ಮಾರಕದಲ್ಲಿ ಹುತಾತ್ಮ ಯೋಧರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಹುತಾತ್ಮರ ದಿನಾಚರಣೆ ಅಂಗವಾಗಿ ಯೋಧರ ಸ್ಮಾರಕ ಸ್ತಂಭ ಆವರಣದಲ್ಲಿ ಜಿಲ್ಲಾ ಸಶಸ್ತ್ರ ಮೀಸಲು ಪಡೆ ಅಧಿಕಾರಿ ಚೆನ್ನಕೇಶವ ನೇತೃತ್ವದಲ್ಲಿ ಮೂರು ಸುತ್ತು ಕುಶಲತೋಪು ಹಾರಿಸಿ ಶ್ರದ್ಧಾಂಜಲಿ ಅರ್ಪಿಸಲಾಯಿತು.

ಮಹಾವೀರ ಚಕ್ರ ಪ್ರಶಸ್ತಿ ಪಡೆದ ಕರ್ನಲ್ ಮುಟ್ಟಿಚಂಡ ಗಣಪತಿ, ಮಡಿಕೇರಿ ಗೋಲ್ಡನ್ ಫಾರಂ ಕ್ಯಾಂಟೀನ್ ವ್ಯವಸ್ಥಾಪಕ ಲೆಫ್ಟಿನೆಂಟ್ ಕರ್ನಲ್ ಮುಲ್ಲೇರ ಕಾವೇರಪ್ಪ, ವಿರಾಜಪೇಟೆ ಗ್ರೇಡ್–2 ತಹಸೀಲ್ದಾರ್ ಪ್ರದೀಪ್ ಕುಮಾರ್, ಕೆಡಿಸಿಸಿ ಬ್ಯಾಂಕ್ ಅಧ್ಯಕ್ಷ ಕೊಡಂದೇರ ಬಾಂಡ್ ಗಣಪತಿ, ಡಿವೈಎಸ್‌ಪಿ ಮೋಹನ್ ಕುಮಾರ್, ವೃತ್ತ ನಿರೀಕ್ಷಕ ಶಿವರುದ್ರ, ಕೊಡಗು ಹೆಗ್ಗಡೆ ಸಮಾಜ ಅಧ್ಯಕ್ಷ ಪಡಿಞರಂಡ ಅಯ್ಯಪ್ಪ, ಕೊಡವ ಮುಸ್ಲಿಂ ಅಸೋಸಿಯೇಷನ್, ಕೊಡಗು ಮಲೆಯಾಳಿ ಸಮಾಜ, ಕಾವೇರಿ ಲಘುವಾಹನ ಮಾಲೀಕರು ಮತ್ತು ಚಾಲಕರ ಸಂಘ, ಕರ್ನಾಟಕ ಸಂಘ ವಿರಾಜಪೇಟೆ, ಅಖಿಲ ಕರ್ನಾ ಟಕ ಮಾಜಿ ಸೈನಿಕರ ಸಂಘ ಕೊಡಗು, ಹಿಂದೂ ಮಲೆಯಾಳಿ ಸಮಾಜ, ವಿರಾಜಪೇಟೆ ಗೋಲ್ಡನ್ ಫಾರಂ, ಪುರಸಭೆ, ಮತ್ತು ರೋಟರಿ, ಕಾವೇರಿ, ತ್ರಿವೇಣಿ, ಸಂತ ಅನ್ನಮ್ಮ ಶಾಲೆ ವತಿಯಿಂದ ಮಾಜಿ ಸೈನಿಕರು ಹುತಾತ್ಮ ಯೋಧರಿಗೆ ಪುಷ್ಪ ಗುಚ್ಛ ಸಮರ್ಪಿಸಿ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಮಾಜಿ ಸೈನಿಕರ ಸಹಕಾರ ಸಂಘದ ಅಧ್ಯಕ್ಷ ಚಪ್ಪಂಡ ಹರೀಶ್ ಉತ್ತಯ್ಯ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಸಂಘದ ಉಪಾಧ್ಯಕ್ಷ ರಾಜ ಚಂದ್ರಶೇಖರ್, ಕಾರ್ಯದರ್ಶಿ ಮುಗ್ಗೇರ ನಂದಾ, ಖಜಾಂಚಿ ತೋರೆರ ಪೂವಯ್ಯ, ನಿರ್ದೇಶಕ ಅಣ್ಣಳಮಾಡ ಸುಬ್ಬಯ್ಯ ಇತರರು ಉಪಸ್ಥಿತರಿದ್ದರು.

ಕುಶಾಲನಗರ ಪಟ್ಟಣ ಪಂಚಾಯಿತಿ ಕಾಂಗ್ರೆಸ್ ತೆಕ್ಕೆಗೆ

ಅಧ್ಯಕ್ಷರಾಗಿ ಜಯಲಕ್ಷ್ಮಿ, ಉಪಾಧ್ಯಕ್ಷೆಯಾಗಿ ಪುಟ್ಟಲಕ್ಷ್ಮಮ್ಮ ಅವಿರೋಧ ಆಯ್ಕೆ



ಕುಶಾಲನಗರ ಪಪಂ ಅಧ್ಯಕ್ಷರಾಗಿ ಜಯಲಕ್ಷ್ಮಿ ಚಂದ್ರು ಹಾಗೂ ಉಪಾಧ್ಯಕ್ಷರಾಗಿ ಪುಟ್ಟಲಕ್ಷ್ಮಮ್ಮ ಆಯ್ಕೆಯಾದ ಹಿನ್ನೆಲೆಯಲ್ಲಿ ಕಾಂಗ್ರೆಸ್ ಕಾರ್ಯಕರ್ತರು ವಿಜಯೋತ್ಸವ ಆಚರಿಸಿದರು.

ಕುಶಾಲನಗರ: ಇಲ್ಲಿನ ಪಟ್ಟಣ ಪಂಚಾಯಿತಿಯ 2ನೇ ಅವಧಿಯ ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ಸ್ಥಾನಕ್ಕೆ ಬುಧವಾರ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಅಧಿಕಾರವನ್ನು ತನ್ನದಾಗಿಸಿಕೊಂಡಿದ್ದು, ಅಧ್ಯಕ್ಷರಾಗಿ ಜಯಲಕ್ಷ್ಮಿ ಚಂದ್ರು ಮತ್ತು ಉಪಾಧ್ಯಕ್ಷರಾಗಿ ಪುಟ್ಟಲಕ್ಷ್ಮಮ್ಮ ಅವಿರೋಧವಾಗಿ ಆಯ್ಕೆಯಾದರು.

ಪಪಂ ಸಭಾಂಗಣದಲ್ಲಿ ನಡೆದ ಚುನಾವಣೆಯಲ್ಲಿ ಸಾಮಾನ್ಯ ಮಹಿಳೆಗೆ ಮೀಸಲಾಗಿದ್ದ ಅಧ್ಯಕ್ಷ ಸ್ಥಾನಕ್ಕೆ ಜಯಲಕ್ಷ್ಮಿ ಚಂದ್ರು ಹಾಗೂ ಪರಿಶಿಷ್ಟ ಜಾತಿಗೆ ಮೀಸಲಾಗಿದ್ದ ಉಪಾಧ್ಯಕ್ಷ ಸ್ಥಾನಕ್ಕೆ ಪುಟ್ಟಲಕ್ಷ್ಮಮ್ಮ ಮಾತ್ರ ನಾಮಪತ್ರ ಸಲ್ಲಿಸಿದ್ದರು. ಬಿಜೆಪಿ ಸದಸ್ಯರು ಚುನಾವಣಾ ಪ್ರಕ್ರಿಯೆ ಕಾನೂನು ಬಾಹಿರವಾಗಿ ನಡೆಯುತ್ತಿದೆ ಎಂದು ಆರೋಪಿಸಿ, ಚುನಾವಣಾ ಪ್ರಕ್ರಿಯೆಯಲ್ಲಿ ಭಾಗವಹಿಸಿದೆ ಬಿಜೆಪಿ ಸದಸ್ಯರಾದ ಜೈವರ್ಧನ್ ಹಾಗೂ ಅಮೃತ್ ರಾಜ್ ನೇತೃತ್ವದಲ್ಲಿ ಹೊರ ನಡೆದರು. ನಂತರ ಚುನಾವಣಾಧಿಕಾರಿ ಆದ ತಹಸೀಲ್ದಾರ್ ಕಿರಣ್ ಗೌರಯ್ಯ ಅವಿರೋಧ ಆಯ್ಕೆ ಘೋಷಿಸಿದರು.

ಇದೇ ವೇಳೆ ಶಾಸಕ ಡಾ.ಮಂತರ್ ಗೌಡ ಮಾತನಾಡಿ, ಮುಂದಿನ ದಿನಗಳಲ್ಲಿ ಪಟ್ಟಣದ ಸರ್ವತೋಮುಖ ಅಭಿವೃದ್ಧಿಗೆ ನೂತನ ಆಡಳಿತ ಮಂಡಳಿಯೊಂದಿಗೆ ಶ್ರಮಿಸಲಾಗುವುದು. ಬಾಕಿ ಕಾಮಗಾರಿಗಳನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುವುದು ಎಂದರು.

ವಿಜಯೋತ್ಸವ: ಕಾಂಗ್ರೆಸ್ ಕಾರ್ಯಕರ್ತರು ಪಪಂ ಕಚೇರಿಯಿಂದ ಗಣಪತಿ ದೇವಾಲಯದವರೆಗೆ ಮೆರವಣಿಗೆ ನಡೆಸುವ ಮೂಲಕ ವಿಜಯೋತ್ಸವದ ಆಚರಿಸಿದರು. ಈ ಸಂದರ್ಭ ಪಟಾಕಿ ಸಿಡಿಸಿ, ಸಿಹಿ ಹಂಚಿ ದೇವಾಲಯದ ಮುಂಭಾಗ ಇಡುಗಾಯಿ ಹಾಕಿದರು.

ಇದೇ ವೇಳೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ವಿ.ಪಿ.ಶಶಿಧರ್, ನಗರ ಯೋಜನಾ ಪ್ರಾಧಿಕಾರ ಅಧ್ಯಕ್ಷ ಪ್ರಮೋದ್ ಮುತ್ತಪ್ಪ, ಪಪಂ ಸದಸ್ಯರಾದ ಖಾಲಿ ಮುಲ್ಲಾ, ಸುರೇಯಾ ಬಾನು, ದಿನೇಶ್, ಜಯಲಕ್ಷ್ಮಿ ನಂಜುಂಡ ಸ್ವಾಮಿ, ಜಗದೀಶ್, ಸುರೇಶ್, ಆನಂದ್, ನಾಮನಿರ್ದೇಶಿತ ಸದಸ್ಯರಾದ ಜಗದೀಶ್, ಪದ್ಮಾವತಿ, ಶಿವಶಂಕರ, ನವೀನ್ ಕುಮಾರ್, ಎಂ.ವಿ.ಹರೀಶ್, ಪ್ರಕಾಶ್, ಮುಖಂಡರಾದ ಜೋಸೆಫ್ ವಿಕ್ಟರ್ ಸೋನ್ಸ್, ಶಿವಶಂಕರ, ರಮೇಶ್, ಶಶಿ, ಮುಖ್ಯಾಧಿಕಾರಿ ಕೃಷ್ಣ ಪ್ರಸಾದ್ ಹಾಗೂ ಸಿಬ್ಬಂದಿ ಹಾಜರಿದ್ದರು.

ನಾಳೆ ಜೆಡಿಎಸ್ ಸದಸ್ಯತ್ವ ಅಭಿಯಾನಕ್ಕೆ ಚಾಲನೆ



ಸುದ್ದಿಗೋಷ್ಠಿಯಲ್ಲಿ ಜೆಡಿಎಸ್ ಕೋರ್ ಕಮಿಟಿ ಜಿಲ್ಲಾಧ್ಯಕ್ಷ ಸಿ.ಎಲ್.ವಿಶ್ವ ಮಾತನಾಡಿದರು.

ಮಡಿಕೇರಿ, ಸೆ.25–ಜೆಡಿಎಸ್ ಕೊಡಗು ಜಿಲ್ಲೆಯ ಹಲವು ಭಾಗಗಳಲ್ಲಿ ಪ್ರಬಲವಾಗಿದ್ದು, ಪಕ್ಷಕ್ಕೆ ಮತ್ತಷ್ಟು ಬಲ ತುಂಬುವ ನಿಟ್ಟಿನಲ್ಲಿ ಸೆ.27ರಿಂದ ಜಿಲ್ಲೆಯಲ್ಲಿ ಜೆಡಿಎಸ್ ಸದಸ್ಯತ್ವ ಅಭಿಯಾನ ಹಮ್ಮಿಕೊಳ್ಳಲಾಗಿದೆ ಎಂದು ಪಕ್ಷದ ಕೋರ್ ಕಮಿಟಿ ಜಿಲ್ಲಾಧ್ಯಕ್ಷ ಸಿ.ಎಲ್.ವಿಶ್ವ ತಿಳಿಸಿದರು.

ನಗರದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶುಕ್ರವಾರ ಬೆಳಗ್ಗೆ 11.30ಕ್ಕೆ ಮಡಿಕೇರಿಯ ಹೊಟೇಲ್ ರಾಜ ದರ್ಶನ ಸಭಾಂಗಣದಲ್ಲಿ ಮಾಜಿ ಸಚಿವ ಸಾ.ರಾ.ಮಹೇಶ್ ಹಾಗೂ ಶಾಸಕ ಎ.ಮಂಜು ನೇತೃತ್ವದಲ್ಲಿ ಅಭಿಯಾನಕ್ಕೆ ಚಾಲನೆ ನೀಡಲಾಗುವುದು. ಕಾರ್ಯಕ್ರಮದಲ್ಲಿ ಪಕ್ಷದ ಎಲ್ಲಾ ಮುಖಂಡರು, ಪದಾಧಿಕಾರಿಗಳು, ಸದಸ್ಯರು ಹಾಗೂ ಕಾರ್ಯಕರ್ತರು ಪಾಲ್ಗೊಳ್ಳಲಿದ್ದಾರೆ ಎಂದರು.

ಲೋಕಸಭಾ ಚುನಾವಣೆ ನಂತರ ವರಿಷ್ಠರ ಆದೇಶದಂತೆ ಜೆಡಿಎಸ್–ಬಿಜೆಪಿ ಮೈತ್ರಿ ಮುಂದುವರೆದಿದೆ. ಮುಂದಿನ ದಿನಗಳಲ್ಲಿ ಜಿಪಂ ಹಾಗೂ ತಾಪಂ ಚುನಾವಣೆಗಳು ಬರಲಿದ್ದು, ಸದಸ್ಯತ್ವ ಅಭಿಯಾನದ ಮೂಲಕ ಜೆಡಿಎಸ್ ತನ್ನ ಬಲವನ್ನು ಹೆಚ್ಚಿಸಿಕೊಳ್ಳಲಿದೆ. ಜಿಲ್ಲೆಯ ಗ್ರಾಮೀಣ ಭಾಗದಿಂದಲೇ ಸದಸ್ಯತ್ವ ಹೆಚ್ಚಿಸಲು ನಿರ್ಧರಿಸಲಾಗಿದೆ ಎಂದು ತಿಳಿಸಿದರು.

ಜೆಡಿಎಸ್ ಅಲ್ಪಸಂಖ್ಯಾತರ ಘಟಕದ ಜಿಲ್ಲಾಧ್ಯಕ್ಷ ಕೆ.ಜಿ.ಜಾಶಿರ್ ಮೂರ್ನಾಡು ಮಾತನಾಡಿ, ಹೆಚ್.ಡಿ.ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದಾಗ ಜಿಲ್ಲೆಯ ಜನರ ಮೇಲಿನ ಪ್ರೀತಿಯಿಂದ ಕೊಡಗಿಗೆ ದೊಡ್ಡ ಕೊಡುಗೆಗಳನ್ನೇ ನೀಡಿದ್ದಾರೆ. ಯಾವುದೇ ಸರ್ಕಾರಗಳು ನೀಡದಷ್ಟು ಅನುದಾನವನ್ನು ನೀಡಿ ಅಭಿವೃದ್ಧಿ ಕಾರ್ಯಗಳಿಗೆ ಕೈಜೋಡಿಸಿದ್ದಾರೆ. ಇದರ ಆಧಾರದಲ್ಲಿ ಜಿಲ್ಲೆಯ ಜನ ಜೆಡಿಎಸ್ ಸದಸ್ಯತ್ವ ಅಭಿಯಾನಕ್ಕೆ ಪೂರಕ ಬೆಂಬಲ ನೀಡುವ ವಿಶ್ವಾಸವಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಮಡಿಕೇರಿ ತಾಲೂಕು ಅಧ್ಯಕ್ಷ ರವಿಕಿರಣ್ ಶೆಟ್ಟಿ, ವಿರಾಜಪೇಟೆ ಅಧ್ಯಕ್ಷ ಪಿ.ಎ.ಮಂಜುನಾಥ್, ಸೋಮವಾರಪೇಟೆ ಅಧ್ಯಕ್ಷ ಸಿ.ಎಲ್.ನಾಗರಾಜು ಹಾಗೂ ಕುಶಾಲನಗರ ಅಧ್ಯಕ್ಷ ಕೋಟಿ ರಾಮಣ್ಣ ಉಪಸ್ಥಿತರಿದ್ದರು.

ತೀತಮಾಡ ಧೃತಿ ನಿಧನ



ಮೈಸೂರು, ಸೆ.25– ಮೈಸೂರಿನ ರೂಪಾನಗರದ ಟ್ರೆಂಡ್ ಅಪಾರ್ಟ್‌ಮೆಂಟ್ ನಿವಾಸಿ ಹಾಗೂ ಹರೀಶ್ ಅವರ ಪತ್ನಿ ತೀತಮಾಡ ಧೃತಿ (ದೇರಪಾಂಡ) (47) ನಿನ್ನೆ ನಿಧನರಾದರು.

ಮೃತರು ಪತಿ, ಪುತ್ರಿ ಹಾಗೂ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಇಂದು ಮಧ್ಯಾಹ್ನ ಕೊಡಗಿನ ಬೆಕ್ಕೆಸೊಡ್ಲೂರು ಗ್ರಾಮದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಪಂಚ ಗ್ಯಾರಂಟಿ ಪರಿಣಾಮಕಾರಿ ಅನುಷ್ಠಾನಕ್ಕೆ ಮುಂದಾಗಿ

ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ರಾಜ್ಯ ಉಪಾಧ್ಯಕ್ಷೆ ಡಾ.ಪುಷ್ಪಾ ಅಮರನಾಥ್ ಸೂಚನೆ

ಚಾಮರಾಜನಗರ, ಸೆ.25–ಪಂಚ ಗ್ಯಾರಂಟಿ ಯೋಜನೆಗಳ ಅನುಷ್ಠಾನಕ್ಕಾಗಿ ಬಜೆಟ್‌ನಲ್ಲಿ 56 ಸಾವಿರ ಕೋಟಿ ರೂ.ಗಳನ್ನು ಸರ್ಕಾರ ಮೀಸಲಿಟ್ಟಿದ್ದು, ಜಿಲ್ಲೆಯಲ್ಲಿ ಯೋಜನೆಗಳನ್ನು ಮತ್ತಷ್ಟು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಮುಂದಾಗಬೇಕು ಎಂದು ಅಧಿಕಾರಿಗಳಿಗೆ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ರಾಜ್ಯ ಉಪಾಧ್ಯಕ್ಷೆ ಡಾ.ಪುಷ್ಪಾ ಅಮರನಾಥ್ ಸೂಚಿಸಿದರು.



ಚಾ.ನಗರದ ಜಿಲ್ಲಾಡಳಿತ ಭವನದ ಹಳೇ ಕೆಡಿಪಿ ಸಭಾಂಗಣದಲ್ಲಿ ನಡೆದ ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಡಾ.ಪುಷ್ಪಾ ಅಮರನಾಥ್ ಮಾತನಾಡಿದರು.

> ಜಿಲ್ಲೆಯಲ್ಲಿ ಬಸ್‌ಗಳ ಸುಗಮ ಸಂಚಾರಕ್ಕಾಗಿ ಹೆಚ್ಚುವರಿ ಬಸ್‌ಗಳ ಅಗತ್ಯವಿದ್ದು, ಜಿಲ್ಲೆಗೆ 100 ಹೊಸ ಬಸ್‌ಗಳ ಮಂಜೂರಾತಿಗೆ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಈ ಪೈಕಿ 80 ಬಸ್‌ಗಳು ಮಂಜೂರಾಗಿದ್ದು, ಪ್ರಸ್ತುತ 35 ಬಸ್‌ಗಳು ಈಗಾಗಲೇ ಕಾರ್ಯನಿರ್ವಹಿಸುತ್ತಿವೆ. ಇನ್ನೂ 45 ಬಸ್ ಬರಬೇಕಾಗಿದೆ. ಶಕ್ತಿ ಯೋಜನೆಯಡಿ ಲಿಂಗತ್ವ ಅಲ್ಪಸಂಖ್ಯಾತರಿಗೂ ಉಚಿತ ಪ್ರಯಾಣಕ್ಕೆ ಅವಕಾಶ ಕಲ್ಪಿಸಲಾಗಿದೆ.
>
> –ಶಿಲ್ಪನಾಗ್, ಜಿಲ್ಲಾಧಿಕಾರಿ.

ನಗರದ ಜಿಲ್ಲಾಡಳಿತ ಭವನದ ಹಳೇ ಕೆಡಿಪಿ ಸಭಾಂಗಣದಲ್ಲಿ ಬುಧವಾರ ನಡೆದ ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ಶಕ್ತಿಯೋಜನೆ, ಗೃಹಜ್ಯೋತಿ, ಅನ್ನಭಾಗ್ಯ, ಗೃಹಲಕ್ಷ್ಮೀ ಹಾಗೂ ಯುವನಿಧಿ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಗಳಾಗಿವೆ. ಜಿಲ್ಲಾಡಳಿತ ಹಾಗೂ ಜಿಲ್ಲಾ ಪಂಚಾಯಿತಿ ಅಧಿಕಾರಿಗಳ ನೇತೃತ್ವದಲ್ಲಿ ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಈ ಯೋಜನೆಗಳನ್ನು ಜನರಿಗೆ ತಲುಪಿಸಲು ಮುಂದಾಗಬೇಕು. ಅನುಷ್ಠಾನದಲ್ಲಿ ಎದುರಾಗುವ ತಾಂತ್ರಿಕ ಸಮಸ್ಯೆಗಳನ್ನು ಸಕಾಲದಲ್ಲಿ ಸರಿದೂಗಿಸಿ, ಫಲಾನುಭವಿಗಳ ಖಾತೆಗೆ ನೇರವಾಗಿ ಹಣ ಜಮೆಯಾಗಲು ಅಗತ್ಯ ಕಾಳಜಿ ವಹಿಸಬೇಕು. ಬುದ್ಧ, ಬಸವ, ಅಂಬೇಡ್ಕರ್ ಆಶಯಗಳನ್ನು ಎತ್ತಿಹಿಡಿದು ಸಮಾಜದಲ್ಲಿ ಸಮಾನತೆ ನೆಲೆಗೊಳ್ಳುವಂತೆ ಮಾಡುವಲ್ಲಿ ಸಂಬಂಧಪಟ್ಟ ಅಧಿಕಾರಿಗಳ ಜವಾಬ್ದಾರಿಯಾಗಿದೆ ಎಂದು ತಿಳಿಸಿದರು.

ಶಕ್ತಿಯೋಜನೆ ಅನುಷ್ಠಾನಗೊಳಿಸುವ ಕೆಎಸ್‌ಆರ್‌ಟಿಸಿ, ಗೃಹಜ್ಯೋತಿಯ ಸೆಸ್ಕ್, ಅನ್ನಭಾಗ್ಯದ ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಇಲಾಖೆ, ಗೃಹಲಕ್ಷ್ಮೀಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಯುವನಿಧಿ ಅನುಷ್ಠಾನಕ್ಕೆ ಉದ್ಯೋಗ ಹಾಗೂ ಕೌಶಲ್ಯಾಭಿವೃದ್ಧಿ ಇಲಾಖೆ ಅಧಿಕಾರಿಗಳಿಂದ ಯೋಜನೆಗಳ ಇದುವರೆಗೆ ಆಗಿರುವ ಪ್ರಗತಿ ಕುರಿತು ಮಾಹಿತಿ ಪಡೆದರು.

ಗ್ಯಾರಂಟಿ ಯೋಜನೆಗಳಲ್ಲಿ ಯುವನಿಧಿ ಹೊರತುಪಡಿಸಿ ಉಳಿದ ನಾಲ್ಕು ಯೋಜನೆಗಳು ನಿಗದಿತ ಗುರಿ ಸಾಧನೆಯಲ್ಲಿ ಚಾಮರಾಜನಗರ ಜಿಲ್ಲೆ ಮುಂದಿದೆ. ಶಕ್ತಿ, ಗೃಹಜ್ಯೋತಿ, ಅನ್ನಭಾಗ್ಯ ಪ್ರಗತಿ ಸಾಧಿಸಿದ್ದು, ಗೃಹಲಕ್ಷ್ಮೀ ಯೋಜನೆಯಲ್ಲಿ ಇಡೀ ರಾಜ್ಯದಲ್ಲಿ ಜಿಲ್ಲೆ ಮೊದಲ ಸ್ಥಾನ ಪಡೆದಿದೆ. ಯೋಜನೆಗಳಿಗೆ ನೋಂದಣಿ ಹಾಗೂ ಫಲಾನುಭವಿಗಳ ಖಾತೆಗೆ ನೇರ ಹಣ ವರ್ಗಾವಣೆಯಲ್ಲಿ ಇನ್ನೂ ಹೆಚ್ಚಿನ ಪ್ರಗತಿ ಸಾಧಿಸಲು ಮುಂದಾಗಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಸಭೆಯಲ್ಲಿ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಜಿಲ್ಲಾಧ್ಯಕ್ಷ ಎಚ್.ವಿ. ಚಂದ್ರು, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ ಮೋನಾ ರೋತ್, ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಉಪಾಧ್ಯಕ್ಷರಾದ ಸೋಮೇಶ್ವರ, ಎಸ್.ಪ್ರಭು ಪ್ರಸಾದ್, ಸಿದ್ದರಾಜು, ಎಸ್‌ಆರ್‌ಎಸ್ ರಾಜಶೇಖರ್, ಕೆ.ಎನ್.ಪ್ರದೀಪ್ ಕುಮಾರ್, ಸದಸ್ಯರಾದ ಕೆ.ಬಿ.ಚಿನ್ನಸ್ವಾಮಿ, ಉಮಾಪತಿ, ಎಂ.ಪ್ರದೀಪ್, ರಾಚಪ್ಪ, ರವಿ, ರಾಜೇಂದ್ರ, ಹೆಚ್.ಎನ್.ಜಯರಾಜು, ಭಾಗ್ಯ, ದೇವರಾಜು, ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ಇಂದು ಡಯಾಲಿಸಿಸ್ ಸೆಂಟರ್ ಲೋಕಾರ್ಪಣೆ



ಸುದ್ದಿಗೋಷ್ಠಿಯಲ್ಲಿ ರೋಟರಿ ಡಯಾಲಿಸಿ ಟ್ರಸ್ಟ್‌ನ ಡಾ.ನಾಗಾರ್ಜುನ ಮಾತನಾಡಿದರು.

ಚಾಮರಾಜನಗರ, ಸೆ.25–ನಗರದ ರೋಟರಿ ಭವನ ಆವರಣದಲ್ಲಿ ಸೆ.26ರಂದು ನೂತನ ರೋಟರಿ ಬಿಎಸ್‌ವಿ ನಾಗಪ್ಪಶೆಟ್ಟಿ ಡಯಾಲಿಸಿಸ್ ಸೆಂಟರ್ ಉದ್ಘಾಟಿಸಲಾಗುವುದು ಎಂದು ರೋಟರಿ ಡಯಾಲಿಸಿಸ್ ಟ್ರಸ್ಟ್‌ನ ಡಾ.ನಾಗಾರ್ಜುನ ಹೇಳಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಸಂಜೆ 5 ಗಂಟೆಗೆ ಮೈಸೂರಿನ ಮಂಗಳೂರು ಗಣೇಶ ಬೀಡಿ ಮಾಲೀಕ ಶ್ರೀಜಗನ್ನಾಥ ಶೆಣೈ, ಎನ್.ಆರ್.ಗ್ರೂಪ್ ಆಫ್ ಕಂಪನಿಯ ಅಧ್ಯಕ್ಷ ಆರ್.ಗುರು ಡಯಾಲಿಸಿಸ್ ಕೇಂದ್ರ ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಶಾಸಕ ಸಿ.ಪುಟ್ಟರಂಗಶೆಟ್ಟಿ, ಜಿಲ್ಲಾಧಿಕಾರಿ ಶಿಲ್ಪನಾಗ್ ಮತ್ತು ಬಿಎಸ್‌ವಿ ಫೌಂಡೇಷನ್ ಅಧ್ಯಕ್ಷ ಬಿ.ಎಸ್. ವೆಂಕಟನಾಗಪ್ಪಶೆಟ್ಟಿ ಭಾಗವಹಿಸಲಿದ್ದಾರೆ. ರೋಟರಿ ಅಂತಾರಾಷ್ಟ್ರೀಯ ಜಿಲ್ಲೆ 3181ರ ಜಿಲ್ಲಾ ಗವರ್ನರ್ ರೋ.ವಿಕ್ರಮದತ್ತ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ತಿಳಿಸಿದರು.

ಒಟ್ಟು 1.10 ಕೋಟಿ ರೂ. ವೆಚ್ಚದಲ್ಲಿ ಡಯಾಲಿಸಿಸ್ ಸೆಂಟರ್ ತೆರೆಯಲಾಗಿದೆ. 10 ಯಂತ್ರಗಳು ಕಾರ್ಯನಿರ್ವಹಿಸಲಿವೆ. ಡಯಾಲಿಸಿಸ್ ಸೆಂಟರ್‌ನಲ್ಲಿ ಸುಸಜ್ಜಿತವಾದ ಐಸಿಯು, ವೈದ್ಯಕೀಯ ತಂಡ, ಶುದ್ಧ ಕುಡಿಯುವ ನೀರಿನ ಘಟಕ ಸೇರಿದಂತೆ ರೋಗಿಗಳಿಗೆ ಎಲ್ಲ ಸೌಲಭ್ಯಗಳನ್ನು ಕಲ್ಪಿಸಲಾಗಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ರೋಟರಿ ಸಂಸ್ಥೆ ಅಧ್ಯಕ್ಷ ರಾಮಸಮುದ್ರ ನಾಗರಾಜು, ಕಾರ್ಯದರ್ಶಿ ಎಚ್.ಎಂ.ಗುರುಸ್ವಾಮಿ, ಡಯಾಲಿಸಿಸ್ ಟ್ರಸ್ಟ್‌ನ ಆರ್.ಎಂ.ಸ್ವಾಮಿ, ಸಿ.ಎ.ರಮೇಶ್, ಆರ್.ಸುಭಾಷ್, ಕಾಗಲವಾಡಿ ಬಿ.ಚಂದ್ರಶೇಖರ್ ಹಾಜರಿದ್ದರು.

ಚಾ.ನಗರ ಜಿಲ್ಲೆಯಲ್ಲಿ ಶೇ.99ರಷ್ಟು ಗೃಹಲಕ್ಷ್ಮಿ ಯೋಜನೆ ಪ್ರಗತಿ

ಚಾಮರಾಜನಗರ: ಈಗಾಗಲೇ ದಕ್ಷಿಣ ಕನ್ನಡ, ಮಂಡ್ಯ, ಮೈಸೂರು ಜಿಲ್ಲೆಗಳಲ್ಲಿ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಭೆ ನಡೆಸಿ, ಪ್ರಗತಿ ಪರಾಮರ್ಶೆ ನಡೆಸಲಾಗಿದೆ ಎಂದು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ರಾಜ್ಯ ಉಪಾಧ್ಯಕ್ಷೆ ಡಾ.ಪುಷ್ಪಾ ಅಮರನಾಥ್ ತಿಳಿಸಿದರು.

ನಗರದ ಜಿಲ್ಲಾಡಳಿತ ಭವನದ ಕೆಡಿಪಿ ಸಭಾಂಗಣದಲ್ಲಿ ನಡೆದ ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತಾಲೂಕು ಮಟ್ಟದಲ್ಲೂ ಸಮಿತಿ ರಚಿಸಿ ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲಿಸಲಾಗುವುದು. ಗ್ಯಾರಂಟಿ ಯೋಜನೆಗಳು ಆರ್ಥಿಕ ಶಕ್ತಿ, ಮಹಿಳಾ ಸಬಲೀಕರಣ, ಸ್ವಾಭಿಮಾನ ಹೆಚ್ಚಿಸಲು ಅನುಕೂಲಕರವಾಗಿವೆ. ಜಿಲ್ಲೆಯಲ್ಲಿ ಗೃಹಲಕ್ಷ್ಮಿ ಯೋಜನೆಗೆ 2,73,414 ನೋಂದಣಿಯಾಗಿದ್ದಾರೆ. ಶೇ.99ರಷ್ಟು ಪ್ರಗತಿಯಾಗಿದೆ ಎಂದರು. ಮಹಿಳೆಯರ ಉಚಿತ ಪ್ರಯಾಣಕ್ಕಾಗಿ ಜಾರಿಗೊಳಿಸಿರುವ ಶಕ್ತಿ ಯೋಜನೆಯಡಿ ಜಿಲ್ಲೆಯಲ್ಲಿ 6,27,27,062 ಮಹಿಳೆಯರು ಪ್ರಯಾಣಿಸಿದ್ದಾರೆ. ಗೃಹಜ್ಯೋತಿ ಯೋಜನೆಯಡಿ ಶೇ.99.48ರಷ್ಟು ಸಾಧನೆಯಾಗಿದೆ. 265911 ಗ್ರಾಹಕರು ಯೋಜನೆಗೆ ನೋಂದಾಯಿಸಿದ್ದಾರೆ. ಅನ್ನಭಾಗ್ಯ ಯೋಜನೆ ಯಶಸ್ವಿಯಾಗಿ ಅನುಷ್ಠಾನಗೊಳ್ಳುತ್ತಿದ್ದು, ಒಟ್ಟು 2,89,747 ಪಡಿತರ ಚೀಟಿಗಳಿವೆ. ಒಟ್ಟು ಪಡಿತರ ಫಲಾನುಭವಿಗಳು 8,73,225 ಇದ್ದಾರೆ ಎಂದು ವಿವರಿಸಿದರು.

ಗಮನ ಸೆಳೆದ ಸ್ವಚ್ಛತಾ ದೀಪ, ರಂಗೋಲಿ ಸ್ಪರ್ಧೆ



ಚಾಮರಾಜನಗರದಲ್ಲಿ ಸ್ವಚ್ಛತಾ ಹಿ ಸೇವಾ ಅಂಗವಾಗಿ ಜಿಲ್ಲಾ ಮಟ್ಟದ ಸ್ವಚ್ಛತಾ ದೀಪ ಬೆಳಗಿಸುವ ಕಾರ್ಯಕ್ರಮ ನಡೆಯಿತು.

ಚಾಮರಾಜನಗರ, ಸೆ.25–ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯಿತಿ ವತಿಯಿಂದ ಸ್ವಚ್ಛತಾ ಹಿ ಸೇವಾ–2024ರ ಅಂಗವಾಗಿ ನಗರದಲ್ಲಿ ಬುಧವಾರ ಜಿಲ್ಲಾಮಟ್ಟದ ರಂಗೋಲಿ ಸ್ಪರ್ಧೆ ಹಾಗೂ ಸ್ವಚ್ಛತಾ ದೀಪ ಬೆಳಗಿಸುವ ಕಾರ್ಯಕ್ರಮ ನಡೆಯಿತು.

ಜಿಲ್ಲಾಧಿಕಾರಿ ಶಿಲ್ಪನಾಗ್ ಹಾಗೂ ಜಿಪಂ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ ಮೋನಾ ರೋತ್ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಜಿಲ್ಲಾಧಿಕಾರಿ ಶಿಲ್ಪನಾಗ್ ಸ್ವಚ್ಛತಾ ಪ್ರತಿಜ್ಞಾವಿಧಿ ಬೋಧಿಸಿದರು. ಇದೇ ಸಂದರ್ಭದಲ್ಲಿ ರಂಗೋಲಿ ಸ್ಪರ್ಧೆ ವಿಜೇತರಿಗೆ ಬಹುಮಾನ ವಿತರಿಸಲಾಯಿತು.

ಅಪರ ಜಿಲ್ಲಾಧಿಕಾರಿ ಗೀತಾ ಹುಡೇದ, ಜಿಲ್ಲಾ ಪಂಚಾಯಿತಿ ಉಪ ಕಾರ್ಯದರ್ಶಿ ಪಿ.ಲಕ್ಷ್ಮೀ, ಸಹಾಯಕ ಕಾರ್ಯದರ್ಶಿ ಶ್ರೀಕಂಠ ರಾಜೇ ಅರಸ್, ತಾಪಂ ಕಾರ್ಯನಿರ್ವಾಹಕಾಧಿಕಾರಿ ಪೂರ್ಣಿಮಾ, ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು, ಜಿಪಿಎಲ್‌ಎಫ್ ಸ್ವಸಹಾಯ ಗುಂಪಿನ ಮಹಿಳೆಯರು ಕಾರ್ಯಕ್ರಮದಲ್ಲಿ ಪಾಲ್ಗೊಂಡರು.

ಬಿಜೆಪಿಯಿಂದ 50 ಪೌರಕಾರ್ಮಿಕರಿಗೆ ಸನ್ಮಾನ



ಚಾಮರಾಜನಗರ ದೊಡ್ಡರಸನಕೊಳದಲ್ಲಿ ಬಿಜೆಪಿ ವತಿಯಿಂದ ಪೌರಕಾರ್ಮಿಕರನ್ನು ಸನ್ಮಾನಿಸಲಾಯಿತು.

ಚಾಮರಾಜನಗರ, ಸೆ.25–ಪಂಡಿತ್ ದೀನದಯಾಳ್ ಉಪಾಧ್ಯಯರ ಜನ್ಮ ದಿನಾಚರಣೆ ಅಂಗವಾಗಿ ಜಿಲ್ಲಾ ಬಿಜೆಪಿ ವತಿಯಿಂದ ನಗರದ ದೊಡ್ಡರಸನಕೊಳದಲ್ಲಿ ಸ್ವಚ್ಛತೆ ಹಾಗೂ 50 ಪೌರಕಾರ್ಮಿಕರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದ ನೇತೃತ್ವ ವಹಿಸಿದ್ದ ಬಿಜೆಪಿ ಜಿಲ್ಲಾಧ್ಯಕ್ಷ ಸಿ.ಎಸ್.ನಿರಂಜನ್‌ಕುಮಾರ್ ಮಾತನಾಡಿ, ಸ್ವಚ್ಛತೆ ಕಾಪಾಡುವಲ್ಲಿ ಪೌರಕಾರ್ಮಿಕರ ಸೇವೆ ಅನನ್ಯವಾಗಿದೆ. ದಿನನಿತ್ಯ ಬೆಳಗ್ಗೆ ಪೌರಕಾರ್ಮಿಕರು ಸ್ವಚ್ಛತೆಗೊಳಿಸಿದರೆ ಮಾತ್ರ ನಗರ ಸುಂದರವಾಗಿ ಕಾಣಲು ಸಾಧ್ಯ. ನಗರವಾಸಿಗಳ ಸ್ವಚ್ಛ ಜೀವನಕ್ಕೆ ಪೌರಕಾರ್ಮಿಕರ ಶ್ರಮ ಬಹಳ ದೊಡ್ಡದು. ಅವರಿಗೆ ಧನ್ಯವಾದ ಸಲ್ಲಿಸುವ ಸಲುವಾಗಿ ಬಿಜೆಪಿ ಸಂಸ್ಥಾಪಕ ಪಂಡಿತ್ ದೀನದಯಾಳ್ ಉಪಾಧ್ಯಾಯರ ಜನ್ಮ ದಿನಾಚರಣೆ ಪ್ರಯುಕ್ತ ಪೌರಕಾರ್ಮಿಕರನ್ನು ಸನ್ಮಾನಿಸಲಾಗಿದೆ ಎಂದರು.

ದೀನದಯಾಳ್ ಪಂಡಿತ್ ಉಪಾಧ್ಯಯ ಅವರ ವಿಚಾರಗಳು ಸರ್ವಕಾಲಿಕ ಸತ್ಯವಾಗಿದ್ದು, ಅವುಗಳನ್ನು ಮೈಗೂಡಿಸಿಕೊಂಡರೆ ದೇಶದ ಅಭಿವೃದ್ಧಿ ಸಾಧ್ಯ. ಅವರು ದೇಶದ ಅಭಿವೃದ್ಧಿಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಜನರಲ್ಲಿ ದೇಶಪ್ರೇಮ ಮೂಡಿಸಲು ಶ್ರಮಿಸಿದರು. ಪಕ್ಷದಲ್ಲಿ ಅವರನ್ನು ಅಗ್ರ ಸ್ಥಾನದಲ್ಲಿಟ್ಟು ಆರಾಧಿಸಲಾಗುತಿದೆ ಎಂದರು.

ಇದೇ ವೇಳೆ ಬಿಜೆಪಿ ಮುಖಂಡರು ಹಾಗೂ ಕಾರ್ಯಕರ್ತರು ದೊಡ್ಡರಸನ ಕೊಳದಲ್ಲಿ ಗಿಡಗಂಟಿಗಳನ್ನು ಸ್ವಚ್ಛಗೊಳಿಸಿದರು. ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ.ರಾಮಚಂದ್ರ, ನಗರಸಭಾ ಅಧ್ಯಕ್ಷ ಎಸ್.ಸುರೇಶ್, ಉಪಾಧ್ಯಕ್ಷೆ ಮಮತಾ ಬಾಲಸುಬ್ರಹ್ಮಣ್ಯಂ, ಓಬಿಸಿ ಮೋರ್ಚಾ ರಾಷ್ಟ್ರೀಯ ಕಾರಕಾರಿಣಿ ಸದಸ್ಯ ನೂರೊಂದು ಶೆಟ್ಟಿ, ಕಾಡಾ ಮಾಜಿ ಅಧ್ಯಕ್ಷ ನಿಜಗುಣ ರಾಜು, ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಪಿ.ವೃಷಬೇಂದ್ರಪ್ಪ, ಮೂಡ್ನಾಕೂಡ ಪ್ರಕಾಶ್, ಹೊನ್ನೂರು ಮಹದೇವಸ್ವಾಮಿ, ಜಿಲ್ಲಾ ವಕ್ತಾರ ಕಾಡಹಳ್ಳಿ ಕುಮಾರ್, ಜಿಲ್ಲಾ ಕಾರ್ಯದರ್ಶಿ ನಟರಾಜು, ಜಿಲ್ಲಾ ಉಪಾಧ್ಯಕ್ಷ ಪದ್ಮಾ, ಸರಸ್ವತಮ್ಮ, ನಗರಮಂಡಲ ಅಧ್ಯಕ್ಷ ಶಿವರಾಜ್, ಪ್ರಧಾನ ಕಾರ್ಯದರ್ಶಿಗಳಾದ ಮಹೇಶ್, ಕೂಸಣ್ಣ, ಮುಖಂಡರಾದ ಕಪನಿನಾಯಕ, ಬಾಲಸುಬ್ರಹ್ಮಣ್ಯಂ, ಬಾಲರಾಜ್, ಆರ್.ಪುಟ್ಟಮಲ್ಲಪ್ಪ, ಮಹದೇವಸ್ವಾಮಿ, ವೀರೇಂದ್ರ ಇತರರಿದ್ದರು.

ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ

ಚಾಮರಾಜನಗರ: ಜಿಲ್ಲೆಯ ಹೊಂಡರಬಾಳುವಿನ ಜವಾಹರ ನವೋದಯ ವಿದ್ಯಾಲಯದಲ್ಲಿ 2025–26ನೇ ಸಾಲಿನ 6ನೇ ತರಗತಿ ಪ್ರವೇಶಾತಿ ಪರೀಕ್ಷೆಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ಅವಧಿಯನ್ನು ಅ.7ರವರೆಗೆ ವಿಸ್ತರಿಸಲಾಗಿದೆ

ವಿದ್ಯಾರ್ಥಿಗಳು ವೆಬ್‌ಸೈಟ್: https://cbseitms.rcil.gov.in/nvs/Index/Registration ಮೂಲಕ ಉಚಿತವಾಗಿ ಅರ್ಜಿ ಸಲ್ಲಿಸಬಹುದು. ಮಾಹಿತಿಗಾಗಿ ವೆಬ್‌ಸೈಟ್: https://navodaya.gov.in ಮತ್ತು ಮೊ.ಸಂ: 9742476738, 9008259934 ಅನ್ನು ಸಂಪರ್ಕಿಸಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಂದು ಲೋಕಾಯುಕ್ತ ಅಧಿಕಾರ ಕಟ್ ಮಾಡಿದ್ದ ಸಿದ್ದರಾಮಯ್ಯ ವಿರುದ್ಧ ಅದೇ ಸಂಸ್ಥೆಯಲ್ಲಿ ಎಫ್ಐಆರ್!



ಬೆಂಗಳೂರು, ಸೆ. 25– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ನಿವೇಶನ ಹಂಚಿಕೆ ಹಗರಣಕ್ಕೆ ಸಂಬಂಧಿಸಿದಂತೆ, ಎರಡನೇ ಕಾನೂನು ಹೋರಾಟದಲ್ಲೂ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಹಿನ್ನಡೆಯಾಗಿದೆ. ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದಲ್ಲೂ ಮುಖ್ಯಮಂತ್ರಿಗಳಿಗೆ ನೆಮ್ಮದಿಯ ತೀರ್ಪು ಸಿಗಲಿಲ್ಲ.

ಕರ್ನಾಟಕ ಉಚ್ಚ ನ್ಯಾಯಾಲಯದ ತೀರ್ಪಿನ ನಂತರ, ಖಾಸಗಿ ದೂರನ್ನು ಕೈಗೆತ್ತಿಗೊಂಡ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದ ನ್ಯಾ. ಸಂತೋಷ್ ಗಜಾನನ ಭಟ್, ಎಫ್ಐಆರ್ ದಾಖಲಿಸಲು ಲೋಕಾಯುಕ್ತಕ್ಕೆ ಆದೇಶ ನೀಡಿದ್ದಾರೆ. ಮೂರು ತಿಂಗಳಲ್ಲಿ ತನಿಖೆಯನ್ನು ನಡೆಸಿ ವರದಿ ಸಲ್ಲಿಸಲು ಮೈಸೂರು ಲೋಕಾಯುಕ್ತ ಎಸ್‌ಪಿಗೆ, ನ್ಯಾಯಮೂರ್ತಿಗಳಿಗೆ ಆದೇಶ ನೀಡಿದ್ದಾರೆ.

ಈ ರೀತಿಯ ವಿದ್ಯಮಾನವೊಂದು ತಮ್ಮ ರಾಜಕೀಯ ಜೀವನದಲ್ಲಿ ಬರಬಹುದು ಎಂದು ಮುಖ್ಯಮಂತ್ರಿಗಳು ನಿರೀಕ್ಷಿಸಿದ್ದರೋ ಇಲ್ಲವೋ ಗೊತ್ತಿಲ್ಲ. ಯಾಕೆಂದರೆ, ಇದೇ ಲೋಕಾಯುಕ್ತ ಸಂಸ್ಥೆಯ ಅಧಿಕಾರವನ್ನು ಸಿದ್ದರಾಮಯ್ಯ ತಮ್ಮ ಮೊದಲ ಸಿಎಂ ಆಗಿದ್ದ ಅವಧಿಯಲ್ಲಿ ಕಟ್ ಮಾಡಿದ್ದರು.

ಈಗ, ಅದೇ ಲೋಕಾಯುಕ್ತ ಪೊಲೀಸರು ಸಿದ್ದರಾಮಯ್ಯ ವಿರುದ್ದ ಎಫ್ಐಆರ್ ದಾಖಲಿಸಲಿದ್ದಾರೆ. ಅವರು ಕರೆದಾಗ ವಿಚಾರಣೆ ಎದುರಿಸಬೇಕಿದೆ. ಅಗತ್ಯ ಬಿದ್ದಲ್ಲಿ ಬಂಧಿಸುವಂತೆಯೂ ಜನಪ್ರತಿನಿಧಿಗಳ ನ್ಯಾಯಾಲಯ ಫ್ರೀಹ್ಯಾಂಡ್ ಅನ್ನು ಲೋಕಾಯುಕ್ತರಿಗೆ ನೀಡಿದೆ.

2016ರಲ್ಲಿ ಸಿದ್ದರಾಮಯ್ಯ ಪ್ರಥಮ ಬಾರಿಗೆ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಲೋಕಾಯುಕ್ತಕ್ಕಿದ್ದ ಅಧಿಕಾರವನ್ನು ಮೊಟಕುಗೊಳಿಸಿದ್ದರು. ಇದಕ್ಕೆ ಪರ್ಯಾಯವಾಗಿ ಕರ್ನಾಟಕ ಪೊಲೀಸ್‌ನ ಭ್ರಷ್ಟಾಚಾರ ವಿರೋಧಿ ಬ್ಯೂರೋಗೆ ಹೆಚ್ಚಿನ ಬಲವನ್ನು ನೀಡಿದ್ದರು. ಇದು, ಲೋಕಾಯುಕ್ತ ಸಂಸ್ಥೆಗೆ ಮಾಡಿದ್ದ ಬಹುದೊಡ್ಡ ಅವಮಾನ ಎಂದೇ ವ್ಯಾಖ್ಯಾನಿಸಲಾಗಿತ್ತು.

ಎನ್. ವೆಂಕಟಾಚಲ, ಸಂತೋಷ್ ಹೆಗ್ಡೆ, ಶಿವರಾಜ್ ಪಾಟೀಲ್, ಪಿ.ವಿಶ್ವನಾಥ ಶೆಟ್ಟಿ ಮುಂತಾದ ಖಡಕ್ ಲೋಕಾಯುಕ್ತರು ಭ್ರಷ್ಟರಿಗೆ ಸಿಂಹಸ್ವಪ್ನ ರಾಗಿದ್ದರು. ಲೋಕಾ ಯುಕ್ತದಲ್ಲಿದ್ದ ಎಲ್ಲಾ ಕೇಸುಗಳನ್ನು ಎಸಿಬಿಗೆ ವರ್ಗಾಯಿಸುವಂತೆ ಸಿಎಂ ಸಿದ್ದರಾಮಯ್ಯ ಅಂದು ಖಡಕ್ ಆದೇಶವನ್ನು ನೀಡಿದ್ದರು.

ಆದರೆ, ಹಿಂದಿನ ಸಿದ್ದರಾಮಯ್ಯ ಸರ್ಕಾರದ ಆದೇಶವನ್ನು ಹೈಕೋರ್ಟ್ ವಜಾಗೊಳಿಸಿತ್ತು. ನ್ಯಾ.ಬಿ.ವೀರಪ್ಪ ಮತ್ತು ನ್ಯಾ. ಕೆ.ಎಸ್.ಹೇಮಲೇಖಾ ಇದ್ದ ದ್ವಿಸದಸ್ಯ ಪೀಠ, ಸಿದ್ದರಾಮಯ್ಯ ಸರ್ಕಾರದ ನಿರ್ಧಾರವನ್ನು ಸರಿಯಾಗಿ ತರಾಟೆಗೆ ತೆಗೆದುಕೊಂಡಿತ್ತು. ಲೋಕಾಯುಕ್ತಗೆ ಎಲ್ಲಾ ಪವರ್ ನೀಡುವಂತೆ ಆಗಸ್ಟ್ 2022ರ ಆದೇಶದಲ್ಲಿ ಕೋರ್ಟ್ ಆದೇಶ ನೀಡಿತ್ತು.

ಸಿದ್ದರಾಮಯ್ಯ ಸರ್ಕಾರಕ್ಕೆ ಆದ ಬಹುದೊಡ್ಡ ಹಿನ್ನಡೆ ಇದು ಎಂದು ವಿಶ್ಲೇಷಿಸಲಾಗಿತ್ತು. ಎಸಿಬಿ ಮುಂದೆ ಇರುವ ಎಲ್ಲಾ ಬಾಕಿ ಪ್ರಕರಣವನ್ನು ಈ ಕೂಡಲೇ ಲೋಕಾಯುಕ್ತಕ್ಕೆ ವರ್ಗಾಯಿಸುವಂತೆ ಕೋರ್ಟ್ ಆದೇಶ ನೀಡಿತ್ತು. ಚಿದಾನಂದ ಅರಸ್ ಮತ್ತು ಎಸ್.ಆರ್. ಹಿರೇಮಠ್ ಎನ್ನುವವರ ಸಾರ್ವಜನಿಕ ಹಿತಾಶಕ್ತಿಯ ಮೇಲೆ ವಿಚಾರಣೆ ನಡೆಸಿ, ಕರ್ನಾಟಕ ಹೈಕೋರ್ಟ್ ಆ ಆದೇಶವನ್ನು ನೀಡಿತ್ತು.

ಈ ಮಧ್ಯೆ, 2019ರಲ್ಲಿ ತೆಗೆಸಲಾಗಿದ್ದ ಆರ್‌ಟಿಐ ಮಾಹಿತಿಯ ಪ್ರಕಾರ, ಸಿದ್ದರಾಮಯ್ಯನವರ ವಿರುದ್ದ ಸುಮಾರು ಐವತ್ತು ಕೇಸುಗಳು ಲೋಕಾಯುಕ್ತದಲ್ಲಿ ಪೆಂಡಿಂಗ್ ಇವೆ. ಏಪ್ರಿಲ್ 2013 ರಿಂದ ಮಾರ್ಚ್ 2014ರ ಅವಧಿಯಲ್ಲಿ ಸಿದ್ದರಾಮಯ್ಯನವರ ವಿರುದ್ದದ ಯಾವುದೇ ಕೇಸ್ ರಿಜಿಸ್ಟರ್ ಆಗಿಲ್ಲ. ಜೊತೆಗೆ, ಪೆಂಡಿಂಗ್ ಇರುವ ಕೇಸ್ ಮುಂದಕ್ಕೂ ಹೋಗಲಿಲ್ಲ ಎನ್ನುವ ಮಾಹಿತಿ ಲಭ್ಯವಾಗಿತ್ತು.

ಅಂದು, ಯಾವ ಸಂಸ್ಥೆಯ ಪವರ್ ಅನ್ನು ಕಟ್ ಮಾಡಿದ್ದ ಅಂದಿನ ಮತ್ತು ಇಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯ, ಈಗ, ಅದೇ ಸಂಸ್ಥೆಯ ಅಧಿಕಾರಿಗಳು ನಡೆಸುವ ವಿಚಾರಣೆ ಎದುರಿಸಬೇಕಾಗಿ ರುವುದು ವಿಪರ್ಯಾಸ. ಮೂರು ತಿಂಗಳೊಳಗೆ ವಿಚಾರಣೆ ಮುಗಿಸುವಂತೆ ಕೋರ್ಟ್, ಲೋಕಾಯುಕ್ತಕ್ಕೆ ಡೆಡ್‌ಲೈನ್ ನೀಡಿದೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600+30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821– 2496522/23

ಮನೆ ಮಾರಾಟಕ್ಕಿದೆ
ಬನ್ನಿಮಂಟಪ ಹುಡ್ಕೋ ಬಡಾವಣೆ 1ನೇ ಹಂತ, 11x40 ಅಡಿ ಅಳತೆ, EWS ಮನೆ ಮಾರಾಟಕ್ಕಿದೆ. 2 ರೂಂಗಳು, ಬ್ಯಾಂಕ್‌ಲೋನ್ ಸೌಲಭ್ಯದಲ್ಲಿದೆ ಶೀಟಿನ ಮನೆ ಪಶ್ಚಿಮ ದಿಕ್ಕು
9739297699

ಬೇಕಾಗಿದ್ದಾರೆ
ಮೊಬೈಲ್ ಫೋನ್ ಶೋರೂಂಗೆ ಸೇಲ್ಸ್ ಬಾಯ್ಸ್ ಬೇಕಾಗಿದ್ದಾರೆ.
(ಹೊಸಬರಿಗೆ ಮಾತ್ರ) ಸಂಪರ್ಕಿಸಿ.
9886409722

ಜಮೀನು ಬೇಕಾಗಿದೆ
100 x 100 ಅಳತೆಯ ಜಮೀನು ಬಾಡಿಗೆಗೆ / ಲೀಸ್‌ಗೆ ಮೈಸೂರು ರಿಂಗ್ ರೋಡ್ ಹತ್ತಿರ, ಹಿನಕಲ್ ಬ್ರಿಡ್ಜ್ ಇಂದ ಭೋಗಾದಿ ಸಿಗ್ನಲ್‌ವರೆಗೆ.
Mob: 998844 8229

WANTED
Helper boys and Ladies
97422 15777
97395 69260

MUDA Site for Sale
ರಾಮಕೃಷ್ಣನಗರ ಸುಯೋಗ್ ಆಸ್ಪತ್ರೆಯ ರಸ್ತೆಯಲ್ಲಿ 30'×73' ಅಳತೆಯ EAST Facing ಸೈಟ್.
9886048471

SITE FOR SALE
30x40 East facing site for sale in PRAGATHI DREAMS, near Paper Mill Circle, Near KBL Silicon City. Price 45 lakh. Near Infosys and L&T.
8884616461, 9844096848

Sudarshan Saur
SOLAR WATER HEATER
ATTRACTIVE OFFER
ಸೇಲ್ಸ್ & ಸರ್ವಿಸ್
10 ವರ್ಷಗಳ ಗ್ಯಾರಂಟಿ
Bajaj Finserv Available
SUNZONE SOLAR SYSTEM
Vishwamanava Double Road, Kuvempunagar, Mysuru
9845175443

FLAT for SALE
East Facing 2 BHK, fully furnished, Vijayanagar 3rd Stage.
9353990365

MUDA SITE FOR SALE
@ KBL SILICON CITY
30×40 - East Face
40×60 - South Face
9886048471

MUDA Site for Sale
ವಿಜಯನಗರ 4ನೇ ಹಂತ "ಯುರೇಖ ಎನ್‌ಕ್ಲೇವ್" ನಲ್ಲಿ 30'×40' North Facing ಸೈಟ್.
9886048471

SITE FOR SALE
30X50 WEST FACING
PRICE - 64 LAKHS
3 BHK HOME-99 LAKHS
PLACE : NEAR INFOSYS
Ph: 9538003006

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7204494854

ಬೇಕಾಗಿದ್ದಾರೆ
5 ವರ್ಷ ಅನುಭವವುಳ್ಳ ಸೆಕ್ಯೂರಿಟಿ Field Officer ಮೈಸೂರಿಗೆ ಬೇಕಾಗಿದ್ದಾರೆ
9035269781
9108100117

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 9606838940

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

WANTED
A IT Hardware Services Company having below vacancies.
Trainees (Qualificaton No Bar): 2 Nos.
IT Hardware Engineers: 2 Nos.
9880302902, 9845064384

SUMP TANK CLEANING
Mob: 9113601866

Sunil Construction
We Build Your Dream House
Construction Packages Starting From
BASIC ₹2000/- ₹1900/- Sqt
STANDARD ₹2250/- ₹2150/- Sqt
PREMIUM ₹2500/- ₹2400/- Sqt
Call: 9379888558
Red Bricks | 100% Teakwood | Hindware / Jaquar | Ultratech Cement | SK Steel

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಹೊಸ ಮನೆ ಮಾರಾಟಕ್ಕಿದೆ
20x40 East Face
3 BHK house with pillars
MUDA with clear documents.
Own borewell
Police Layout 2nd Stage
Call: 9380284276

SITE FOR SALE
ಮಾನಸಿ ನಗರ - 30x40, 30x50
ನಾಡನಹಳ್ಳಿ ಬಡಾವಣೆ - 30x40
ಬನ್ನೂರು ರಸ್ತೆ ಕಿಂಗ್ ಸಿಟಿ - 30x40
ವಿದ್ಯಾಶಂಕರ ಬಡಾವಣೆ - 40x60
Contact
9448447035

ಬೇಕಾಗಿದ್ದಾರೆ
ಪುರುಷ ಸಸ್ಯಹಾರಿ ಅಡುಗೆ ತಯಾರಕರು ESI, PF ಮತ್ತು ವಸತಿ ಸೌಲಭ್ಯವಿರುತ್ತದೆ
ವಿಕ್ರಂ ಕಾಲೇಜ್ ಆಫ್ ನರ್ಸಿಂಗ್, ಮೈಸೂರು
8310846772
9535096161

Change of Name
I, G. Sandhya, W/o R. Gopikrishnan, aged 43 years, residing at No. 2796, 11th Cross, Adipampa Road, V.V. Mohalla, Mysore-570 002, have changed my name from Suisai Mary G. Sandhya to G. Sandhya on my own free will sworn in before Notary Vasudeva vide affidavit dated 13-9-2024.
Sd/- G. Sandhya

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8618373596

SITE FOR SALE
30x40 Ashokapuram MUDA North West corner Site of Sale. Rs. 9,000.00 Per Sqft. Site is very close to Ashokapuram Railway Station back entrance. Direct owners Only Brokers Excuse.
7305071640

SITE FOR SALE
40'X60' VIJAYANAGAR 4TH STAGE
7899214181

WANTED SITES
@ Bogadi, Dattagalli, Vijayanagara, Yelwala Mys-Bannur-T.N.Pura Raod & Mysore Sourrounding Quick Regn.
9342125252

ಬೇಕಾಗಿದ್ದಾರೆ
ಮೈಸೂರಿನ ಪ್ರಸಿದ್ಧ ಶೋರೂಮ್‌ಗಳಿಗೆ ಮತ್ತು ಕಂಪನಿ ಕೆಲಸಕ್ಕೆ, ಆಫೀಸ್ ಕೆಲಸಕ್ಕೆ ತಕ್ಷಣ ಯುವಕ, ಯುವತಿಯರು, ಬೇಕಾಗಿದ್ದಾರೆ, ಮೊದಲು ಬಂದವರಿಗೆ ಮೊದಲ ಆದ್ಯತೆ. ಯಾವುದೇ ಎಜುಕೇಶನ್ ಇರಬಹುದು, AGE ಲಿಮಿಟ್ 18 TO 55, SALARY 18000 TO 38000 ಇರುತ್ತದೆ, ಹೆಚ್ಚಿನ ಮಾಹಿತಿಗೆ ಇಂದೇ ಸಂಪರ್ಕಿಸಿ.
HR MADAM
+91 7899491102, +91 9902230976

WANTED
Front Office Staff, Car or Bus Drivers for Mysore International Travels Pvt. Ltd. Contact:
9611957301, 9945203003, 0821-4247111

Documents Lost
Allotment letters of 1106, Jayanagar, T. Koppal, 1st Stage, C&D Block, Mysore.
Finders please contact:
Mob: 9886670020

JOB VACANCY
SALES EXECUTIVE
(Male / Female) with two wheeler must good salary and incentive. Contact :- CENTURY ENTERPRISES
9341333133
7899163458

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8880558064

SITE FOR SALE
40X40 Corner Vishwa Manava Enclave Vijayanagar 4th Stage
8050821108

WANTED
Sales Executive & Marketing Executive
Salary - 15K-30K
Timing - 10 a.m - 7 p.m
Add: Akbar Road Mandi Mohalla, Mysore
8217445470

ಬೇಕಾಗಿದ್ದಾರೆ
ದಿನಸಿ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವವುಳ್ಳ ಹುಡುಗರು/ಕಂಪ್ಯೂಟರ್ ಬಿಲ್ಲಿಂಗ್, ಕ್ಯಾಶಿಯರ್ಸ್ ಬೇಕಾಗಿದ್ದಾರೆ.
ಇಚ್ಛೆಯುಳ್ಳವರು ಸಂಪರ್ಕಿಸಿ
1) ಕರ್ನಾಟಕ ಬ್ಯಾಂಕ್ ಹತ್ತಿರ, ನಜರ್‌ಬಾದ್, ಮೈಸೂರು
2) ಶಿಷ್ಯರಣಿ ಸ್ಕೂಲ್ ಹತ್ತಿರ, ಹೆಬ್ಬಾಳ್, ಮೈಸೂರು

ವಧು-ವರರಿಗೆ ಸಂಪರ್ಕಿಸಿ
ಒಕ್ಕಲಿಗ, ಕುರುಬ, ನಾಯಕ ಲಿಂಗಾಯತ, ಹಾಗೂ ಎಲ್ಲಾ ಜಾತಿಯ ವಧು-ವರರು, ವಿಚ್ಛೇದಿತರು, ವಿಧುರ– ವಿಧವೆಯರು
9980273659
9731066259

WANTED
Branded factory outlet. Men wear showroom Xavain looking for a Sales person for Mysore Location
1) Sales Executive
Position attracts the best salary in Industry
9742076736
9886262620

ಬೇಕಾಗಿದ್ದಾರೆ
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ನುರಿತ ಹುಡುಗಿಯರು ಮಹಿಳೆಯರು ಬೇಕಾಗಿದ್ದಾರೆ. ಸ್ಥಳ: ಹೆಬ್ಬಾಳ, ಅಗ್ರಹಾರ ಮತ್ತು ನಜರ್‌ಬಾದ್. ಸಮಯ: ಬೆ.9.30 ರಿಂದ ರಾ.9.00ರ ವರೆಗೆ ಆಕರ್ಷಕ ಸಂಬಳ ಹಾಗೂ ಮೈಸೂರಿನ ಹೃದಯ ಭಾಗದಲ್ಲಿರುವ ಮೆಡಿಕಲ್ ಶಾಪ್ ಮಾರಾಟಕ್ಕಿದೆ.
9986311444
9986322444

WANTED
Experienced Female candidate for Real Estate Company, Balaji Properties Vijayanagara, 4th Stage, 2nd Phase, Mysore
8105819378

SITE FOR SALE
30x50 E/F Suvarna Nagar Bogadi Road
9740088990

ಮನೆ ಮಾರಾಟಕ್ಕಿದೆ
20x30 ಪೂರ್ವ ದಿಕ್ಕಿನ ಎರಡು ಅಂತಸ್ತಿನ ಮನೆ # 10938 ವಿಜಯನಗರ 4ನೇ ಹಂತ, 2ನೇ ಫೇಸ್, ಮರಿಮಲ್ಲಪ್ಪ ಕಾಂಪೌಂಡ್ ಹತ್ತಿರ
8660726140

ಮನೆ ಮಾರಾಟಕ್ಕಿದೆ
ಮೈಸೂರು ನಗರದಲ್ಲಿನ ಅಶೋಕಪುರಂ 4ನೇ ಕ್ರಾಸ್‌ನಲ್ಲಿ 17x55ರಲ್ಲಿ 1 ವರ್ಷದ ಹಿಂದೆ ಕಟ್ಟಿರುವ 2BHK ಹೊಂದಿರುವ 2 ಇಂಡಿಪೆಂಡೆಂಟ್ ಮನೆ ಎಲ್ಲಾ ರೀತಿಯ ದಾಖಲಾತಿಗಳನ್ನು ಹಾಗೂ ಕಾರ್ಪೋರೇಷನ್ ಖಾತೆ ಹೊಂದಿರುವ ಮನೆ ಮಾರಾಟಕ್ಕಿದೆ
9732780095
9113523954

ಯುವಕ ಯುವತಿಯರು ಬೇಕಾಗಿದ್ದಾರೆ
7th, SSLC, PUC, Diploma in Nursing & Any Educational Qualification
ಮೈಸೂರು ಹಾಗೂ ಮಂಗಳೂರಿನಲ್ಲಿ ಹೋಂ ಕೇರ್ ಕೆಲಸಕ್ಕೆ ಬೇಕಾಗಿದ್ದಾರೆ. ತರಬೇತಿಯೊಂದಿಗೆ ಉದ್ಯೋಗವನ್ನು ಒದಗಿಸಲಾಗುವುದು. ಊಟ ಮತ್ತು ವಸತಿಯೊಂದಿಗೆ ಉತ್ತಮ ಸಂಬಳವನ್ನು ನೀಡಲಾಗುವುದು. ಸಂಬಳ: 12000 ರಿಂದ 180000. ಸಂಪರ್ಕಿಸಿ
9035324777,7259306665

ಬೇಕಾಗಿದ್ದಾರೆ
ಮೈಸೂರಿನ ಕಾಳಿದಾಸ ರಸ್ತೆ – ಜಯಲಕ್ಷ್ಮೀಪುರಂದಲ್ಲಿ ಇರುವ ಶುದ್ಧ ಸಸ್ಯಾಹಾರಿಹೋಟೆಲ್ ಗೆ ಅನುಭವ ಇರುವ ಕೌಂಟರ್ –ಪ್ಯಾಕಿಂಗ್ (Parcel packing) - 2
ಸರ್ವಿಸ್ (Waiter - supplier) - 2
ಸೌತ್ ಕಿಚನ್ allrounder (South Assistant) - 1
ನಾರ್ತ್ ಭಟ್ರುಗೆ ಸಹಾಯಕ (North Assistant) - 1
ಚಾಟ್ಸ್ ಮಾಸ್ಟರ್ (Chat Master) - 1
ಕೆಲಸಕ್ಕೆ ಬೇಕಾಗಿದ್ದಾರೆ. ಉತ್ತಮ ಸಂಬಳ, ಊಟ ಮತ್ತು ವಸತಿ ಸೌಲಭ್ಯ ಇದೆ .
9019916266

ಬೇಕಾಗಿದ್ದಾರೆ
ಕರ್ನಾಟಕದಾದ್ಯಂತ Full time/part time data entry, sms sending, writing, ಹೆಸರಾಂತ MNC ಕಂಪನಿ, ಆಫೀಸ್ ಕೆಲಸಕ್ಕೆ (responist, data entry account) ಯುವಕ / ಯುವತಿಯರು ಬೇಕಾಗಿದ್ದಾರೆ. ವಸತಿಯೂಟದೊಂದಿಗೆ Salary+ot [food and room Free]. 18800/-68000/-
6362290608
7353000477

ಬೇಕಾಗಿದ್ದಾರೆ
ಜಮೀನು ಕೆಲಸಕ್ಕೆ ವಿದ್ಯಾವಂತ ಯುವಕರು ಬೇಕಾಗಿದ್ದಾರೆ. ಸ್ಥಳ: ನಂಜನಗೂಡು ತಾಲ್ಲೂಕು.
7025615156

ತಕ್ಷಣ ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ಸ್ 12 ಗಂಟೆ ಪಾಳಿಗೆ ವಯಸ್ಸಿನ ಮಿತಿ 60, ಹೌಸ್ ಕೀಪಿಂಗ್ ಮಹಿಳೆಯರು ಮತ್ತು ಹುಡುಗರು 8 ಗಂಟೆ ಪಾಳಿ ಫ್ಯಾಕ್ಟರಿಯಲ್ಲಿ ಹೆಲ್ಪರ್‌ಗಳು ಹೋಟೆಲ್ ರಿಸೆಪ್ಷನಿಸ್ಟ್ Receptionist ರೂಮ್ ಬಾಯ್ಸ್ Boys
9035367083
6361548626

SITE FOR SALE
40x60 Site For Sale SBM Layout Bogadi
9880273834

ಬೇಕಾಗಿದ್ದಾರೆ
ಮೈಸೂರಿನಲ್ಲಿರುವ AWBM ಕಂಪನಿಗೆ Freshers + Experience ಆಗಿರುವ 156 ಅಭ್ಯರ್ಥಿಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC, PUC, ITI, Diploma, Any Degree Etc. ವಯೋಮಿತಿ: 18 to 32 years. ತಿಂಗಳಿಗೆ 20,000–28000 (ಉಚಿತ ಊಟ+ವಸತಿ ಸೌಲಭ್ಯವಿದೆ) ಗ್ರಾಮೀಣದವರಿಗೆ +ಕನ್ನಡ ಬಲ್ಲವರಿಗೆ ಹೆಚ್ಚಿನ ಆದ್ಯತೆ
ಸ್ಫೂರ್ತಿ :7349699460

M.K.SERVICES
ನೆಟ್ ವರ್ಕ್ ಮಾರ್ಕೆಟಿಂಗ್ ನೆಟ್ ವರ್ಕ್ ಮಾರ್ಕೆಟಿಂಗ್‌ನಲ್ಲಿ ಅನುಭವ ಇರುವ ಲೀಡರ್‌ಗಳು ಮತ್ತು ಎಕ್ಸಿಕ್ಯೂಟಿವ್ಸ್‌ಗಳು ತಕ್ಷಣ ಬೇಕಾಗಿದ್ದಾರೆ.
8147784353

ಬೇಕಾಗಿದ್ದಾರೆ
ರೂಮ್ ಬಾಯ್ಸ್ –2 ಹುದೆಗಳು
ಶ್ರೀ ಗಣೇಶ್ ಪ್ರಸಾದ್ ಲಾಡ್ಜ್
9986756866

ಬೇಕಾಗಿದ್ದಾರೆ
PG ಯಲ್ಲಿ ಹೌಸ್ ಕೀಪಿಂಗ್ ಕೆಲಸ ಮಾಡಲು ಮಹಿಳೆ ಬೇಕಾಗಿದ್ದಾರೆ. ಊಟ ವಸತಿ ಇರುತ್ತದೆ. ಕಡ್ಡಾಯವಾಗಿ PG ಯಲ್ಲೇ ಉಳಿಯಬೇಕು
9535744143
9986622769

ತಕ್ಷಣ ಕೆಲಸಕ್ಕೆ ಬೇಕಾಗಿದ್ದಾರೆ
ಟೆಲಿಕಾಲಿಂಗ್ ಕೆಲಸ ಮಾಡಲು ಹುಡುಗಿಯರು ಬೇಕಾಗಿದ್ದಾರೆ. (Fixed Salary 8 ರಿಂದ 10,000 ರೂ.ಗಳಿರುತ್ತದೆ.) ಯಾವುದೇ ಟಾರ್ಗೆಟ್ ಇರುವುದಿಲ್ಲ.
9606084387
8861050888

BEST QUALITY Pre-Cost (Concrete) Fencing Poles Available
8710958070

WANTED TEACHERS
Pavaman Innovative School
Primary School : 2, (Social and Science)
Qualification :
D-Ed/ B.Ed or any degree.
English communication, computer knowledge is a must.
#105/3, 7th cross, 3rd main, B.M. Shree Nagara, Metagalli, Mysore, Karnataka
8197695840
8431891316

ಬೇಕಾಗಿದ್ದಾರೆ
ಮೈಸೂರಿನ ಲ್ಯಾಂಡ್ ಡೆವಲಪರ್ ಕಛೇರಿ ಮತ್ತು ರಿಯಲ್ ಎಸ್ಟೇಟ್ ಕಛೇರಿಯಲ್ಲಿ ಕೆಲಸ ಮಾಡಲು ಯುವತಿಯರು ಬೇಕಾಗಿದ್ದಾರೆ. ವಿದ್ಯಾರ್ಹತೆ ಪಿಯುಸಿ ಡಿಗ್ರಿ, ಸಂಪರ್ಕಿಸಿ:
8105213239

SITE FOR SALE
Site No. N.S.9 HIG, Group -III 2nd Phase KHB (Hootagalli) Behind J.C. Hostel Near Hunsur Road, Mysore.
66x40 West Face
Owner
7710068901

ಕೆಲಸಕ್ಕೆ ಬೇಕಾಗಿದ್ದಾರೆ
ಹೋಟೆಲ್ ಉದ್ಯಮದಲ್ಲಿ ಅನುಭವ ಉಳ್ಳವರು/ ಇಲ್ಲದೇ ಇರುವವರು ಸಹ ಮೈಸೂರಿನ ವಿಜಯನಗರ 2ನೇ ಹಂತದಲ್ಲಿರುವ ಪ್ರತಿಷ್ಠಿತ ಹೋಟೆಲಿಗೆ ಕೆಲಸಕ್ಕೆ ತುರ್ತಾಗಿ ಅಡುಗೆ ಭಟ್ಟರು ಹಾಗೂ Waiter ಕೆಲಸ ಮಾಡಲು ಹುಡುಗ/ ಹುಡುಗಿಯರು ಬೇಕಾಗಿದ್ದಾರೆ. Cocktail ಮತ್ತು Mocktail ತಯಾರಿ ಮಾಡುವ ಹುಡುಗರು ಸಹ ಬೇಕಾಗಿದ್ದಾರೆ.
9538757584

MUDA AND DTCP APPROVED SITES OFF HUNSUR ROAD
9972835238

ಬೇಕಾಗಿದ್ದಾರೆ
1) ಹೌಸ್ ಕೀಪರ್ (ಪುರುಷರು) ರಾತ್ರಿ ಪಾಳಿಗೆ
ಸ್ಥಳ: ವಿಜಯನಗರ 2ನೇ ಮತ್ತು 4ನೇ ಹಂತ
2) ಸೆಕ್ಯೂರಿಟಿ ಗಾರ್ಡುಗಳು
ಸ್ಥಳ: ವಿಜಯನಗರ 4 ಮತ್ತು 2ನೇ ಹಂತ
2) ಕುವೆಂಪುನಗರ ನಗರ, 3) ಹೂಟಗಳ್ಳಿ Ind.Area 4)KRS ರಸ್ತೆ, ಉಚಿತ ವಸತಿ ESI/P.F ಕೆಲವು ಕಡೆ ಊಟದ ವ್ಯವಸ್ಥೆ ಇರುತ್ತದೆ.
9686422400
9242406261

ಟೆಲಿಕಾಲಿಂಗ್ ಮಾಡಲು ಹುಡುಗಿಯರು ಬೇಕಾಗಿದ್ದಾರೆ
ಸಂಬಳ: 10000
ಸ್ಥಳ: ಚಾಮುಂಡಿಪುರಂ ಮತ್ತು ಎನ್.ಆರ್.ಮೊಹಲ್ಲಾ
Field Executive ಬೇಕಾಗಿದ್ದಾರೆ
Collection Field
(ಸಂಬಳ Rs.13000) 2000
(Petrol Charges) 15000
ಟೀಂ ಲೀಡರ್ ಬೇಕಾಗಿದ್ದಾರೆ.
8150005111

ಬೇಕಾಗಿದ್ದಾರೆ
ಮೈಸೂರಿನ ಪೆಟ್ರೋಲ್ ಬಂಕಿನಲ್ಲಿ ನೈಟ್ ಶಿಫ್ಟ್‌ನಲ್ಲಿ ಕೆಲಸಕ್ಕಾಗಿ ಪುರುಷರು/ ಹುಡುಗರು ಬೇಕಾಗಿದ್ದಾರೆ.
ಸಂಬಳ: 15,000/–
7899754149

OFFICE SPACE FOR RENT
150 SQFT, N/F, 2nd Floor
CH-26, 7th main, 5th Cross, Saraswathipuram, Mysore
8147681035

ಕೆಲಸಕ್ಕೆ ಬೇಕಾಗಿದ್ದಾರೆ ಸೆಕ್ಯೂರಿಟಿ ಗಾರ್ಡ್ (ಪುರುಷರು)
ಇಲವಾಲ, ಬೆಳವಾಡಿ, ಮನುಗನಹಳ್ಳಿ ಚೆಕ್ ಪೋಸ್ಟ್, ಹೆಬ್ಬಾಳ್ ಇಂಡಸ್ಟ್ರೀಯಲ್ ಏರಿಯಾ, ಹೂಟಗಳ್ಳಿ ಇಂಡಸ್ಟ್ರಿಯಲ್ ಏರಿಯಾ, KRS ಲಕ್ಷ್ಮಿಪುರಂ, ಕೋರ್ಟ್ ರೋಡ್, ಮೇಟಗಳ್ಳಿ ಇಂಡಸ್ಟ್ರಿಯಲ್ ಏರಿಯಾ (ESI, PF) ಕೊಡಲಾಗುವುದು.
8310098788

ಮನೆ ಭೋಗ್ಯಕ್ಕೆ ಇದೆ
30x40 ಪೂರ್ವ ಬಾಗಿಲು 2 ಬೆಡ್ ರೂಂ ರಿಂಗ್ ರೋಡ್ ಪಕ್ಕದಲ್ಲಿ ವಿಜಯನಗರ 4ನೇ ಹಂತ 1ನೇ ಫೇಸ್, ಮೈಸೂರು
9480347407

ತಕ್ಷಣ ಬೇಕಾಗಿದ್ದಾರೆ
ಮೈಸೂರು, ಹೆಬ್ಬಾಳಿನ ಕಂಪನಿಗಳಲ್ಲಿ ಕೆಲಸ ಮಾಡಲು Mechnice Operator's (ITI) ಹಾಗೂ ಡ್ರೈವರುಗಳು ಮತ್ತು ಟೈಲರುಗಳು ಹೆಲ್ಪರುಗಳು ಬೇಕಾಗಿದ್ದಾರೆ
8105249880
7795285485

ಮೈಸೂರು ಮಿತ್ರ ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಪೌರಕಾರ್ಮಿಕರು ರಾಜ್ಯದ ನೈಜ ಕಾಯಕ ಯೋಗಿಗಳು

ಪೌರಕಾರ್ಮಿಕರ ದಿನಾಚರಣೆಯಲ್ಲಿ ಪುರಸಭಾ ಅಧ್ಯಕ್ಷರ ಅಭಿಮತ



ತಿ.ನರಸೀಪುರ ಪಟ್ಟಣದ ತಲಕಾಡು ಮುಖ್ಯ ರಸ್ತೆಯ ಎಸ್‌ಟಿಪಿ ಲ್ಯಾಂಡ್ ಆವರಣದಲ್ಲಿ ಆಯೋಜಿಸಲಾಗಿದ್ದ ಪೌರಕಾರ್ಮಿಕರ ದಿನಾಚರಣೆ ಕಾರ್ಯಕ್ರಮದಲ್ಲಿ ಪುರಸಭೆ ವತಿಯಿಂದ ಪೌರಕಾರ್ಮಿಕರನ್ನು ಸನ್ಮಾನಿಸಲಾಯಿತು.

ತಿ.ನರಸೀಪುರ, ಸೆ.25– ಸಾರ್ವಜನಿಕರ ಆರೋಗ್ಯ ಕಾಪಾಡುವಲ್ಲಿ ಪೌರ ಕಾರ್ಮಿಕರ ಕಾಯಕ ದೊಡ್ಡದು. ಅವರು ಎಂದಿಗೂ ತಮ್ಮ ಕಾಯಕದ ಬಗ್ಗೆ ನಿರಾಸಕ್ತಿಯನ್ನು ತೋರಿಸಬಾರದು. ತಮ್ಮ ಕಾಯಕವನ್ನು ನಿಷ್ಠೆಯಿಂದ ಮಾಡುವ ಮೂಲಕ ಸಾರ್ವಜನಿಕರ ಮೆಚ್ಚುಗೆಗೆ ಪಾತ್ರರಾಗಬೇಕು ಎಂದು ಪುರಸಭೆ ಅಧ್ಯಕ್ಷೆ ಬಿ.ವಸಂತ ಶ್ರೀಕಂಠ ಹೇಳಿದರು.

ಪಟ್ಟಣ ಪುರಸಭೆ ವತಿಯಿಂದ ತಲಕಾಡು ಮುಖ್ಯ ರಸ್ತೆಯ ಎಸ್‌ಟಿಪಿ ಲ್ಯಾಂಡ್ ಆವರಣದಲ್ಲಿ ಆಯೋಜಿಸಲಾಗಿದ್ದ ಪೌರಕಾರ್ಮಿಕರ ದಿನಾಚರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಗಾಳಿ, ಮಳೆ, ಬಿಸಿಲು, ಚಳಿ ಎನ್ನದೆ, ದಿನನಿತ್ಯ ನಸುಕಿನ ಜಾವದಿಂದ ಸ್ವಚ್ಛತಾ ಕಾರ್ಯ ಕೈಗೊಳ್ಳುವ ಪೌರಕಾರ್ಮಿಕರು ನೈಜ ಕಾಯಕಯೋಗಿಗಳು, ಸ್ವಚ್ಛತಾ ರೂವಾರಿಗಳಾಗಿದ್ದಾರೆ. ಹಾಗಾಗಿ ಎಲ್ಲರೂ ಅವರನ್ನು ಗೌರವಿಸುವ ಕೆಲಸ ಮಾಡಬೇಕಿದೆ ಎಂದರು.

ಸಾರ್ವಜನಿಕರೂ ಸಹ ಪೌರಕಾರ್ಮಿಕರನ್ನು ವರ್ಷಕ್ಕೊಮ್ಮೆಯಾದರೂ ಗೌರವಿಸಿ ಸನ್ಮಾನಿಸುವಂತಹ ಕಾರ್ಯವನ್ನು ಮಾಡಬೇಕು. ಪೌರಕಾರ್ಮಿಕರನ್ನು ಸಮಾಜ ಕೀಳಾಗಿ ಕಾಣಬಾರದು. ಪೌರಕಾರ್ಮಿಕರು ತಮ್ಮ ಕಾಯಕದ ಬಗ್ಗೆ ನಿರಾಸಕ್ತಿ ತೋರದೆ, ಮನಪೂರ್ವಕವಾಗಿ, ಶ್ರದ್ಧೆಯಿಂದ ಕಾಯಕ ಮಾಡಬೇಕೆಂದರು.

ಮಾಜಿ ಅಧ್ಯಕ್ಷ ಟಿ.ಎಂ.ನಂಜುಂಡಸ್ವಾಮಿ ಮಾತನಾಡಿ, ಪೌರಕಾರ್ಮಿಕರಿಗೂ ಒಂದು ದಿನ ಮೀಸಲಾಗಿಡಬೇಕೆಂಬ ಪರಿಕಲ್ಪನೆ ಮಾಡಿದವರಿಗೆ ಕೃತಜ್ಞತೆ ಸಲ್ಲಿಸಬೇಕಿದೆ, ಯಾವುದೇ ನಗರ ಸ್ವಚ್ಛವಾಗಿರಬೇಕಾದರೆ ಅಲ್ಲಿ ಪೌರಕಾರ್ಮಿಕರ ಕೊಡುಗೆ ಪ್ರಮುಖವಾಗುತ್ತದೆ. ಒಂದು ದಿನ ಪೌರ ಕಾರ್ಮಿಕರು ಪಟ್ಟಣ ಸ್ವಚ್ಛ ಮಾಡದಿದ್ದರೆ ಪಟ್ಟಣದ ಸ್ಥಿತಿಯನ್ನು ಊಹಿಸಲು ಸಾಧ್ಯವಿಲ್ಲ ಎಂದರು.

ಪೋಷಕರು ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸುವ ಮೂಲಕ ಅವರನ್ನು ವಿದ್ಯಾವಂತರನ್ನಾಗಿ ಮಾಡಬೇಕು,ಪೌರ ಕಾರ್ಮಿಕರ ಮಕ್ಕಳು ಕೆಎಎಸ್,ಐಎಎಸ್ ಹಾಗೂ ಐಪಿಎಸ್‌ನಂತಹ ಉನ್ನತ ಶಿಕ್ಷಣ ಮಾಡಿ ಅಧಿಕಾರಿಗಳಾಗಬೇಕೆಂಬ ಮಹದಾಸೆ ನನ್ನದಾಗಿದ್ದು,ವಿದ್ಯಾಭ್ಯಾಸಕ್ಕೆ ಬೇಕಾದ ಹಣಕಾಸಿನ ನೆರವನ್ನು ಪುರಸಭೆ ಕಲ್ಪಿಸಿಕೊಡಲು ಸಿದ್ಧವಿದೆ. ಜೊತೆಗೆ ಪೌರ ಕಾರ್ಮಿಕರ ಉನ್ನತ ವ್ಯಾಸಂಗಕ್ಕೆ ಬೇಕಾದ ಹಣಕಾಸಿನ ನೆರವನ್ನು ವೈಯಕ್ತಿಕವಾಗಿ ಮಾಡಲು ನಾನು ಸಿದ್ಧನಿದ್ದೇನೆ ಎಂದರು.

ಕಾರ್ಯಕ್ರಮದಲ್ಲಿ ಪೌರಕಾರ್ಮಿಕರಾದ ಸುಬ್ರಮಣಿ, ಕುಮಾರ ದಾಸ, ಸೋಮ, ಪ್ರವೀಣ್ ಕುಮಾರ್, ಪ್ರಶಾಂತ್ ಅವರನ್ನು ಸನ್ಮಾನಿಸಲಾಯಿತು. ಈ ವೇಳೆ ಪುರಸಭೆಯ ಸದಸ್ಯರಾದ ಸಿ. ಪ್ರಕಾಶ್, ಬಾದಾಮಿ ಮಂಜು, ಮೆಡಿಕಲ್ ನಾಗರಾಜು, ಎಲ್. ಮಂಜುನಾಥ್, ಎಸ್.ಕೆ. ಕಿರಣ್, ರೂಪಾ ಪರಮೇಶ್, ಮುಖ್ಯಾಧಿಕಾರಿ ಬಿ.ಕೆ.ವಸಂತ ಕುಮಾರಿ, ಕಿರಿಯ ಆರೋಗ್ಯ ನಿರೀಕ್ಷಕ ಮಧು, ಸಮುದಾಯ ಸಂಘಟಕ ಕೆ ಮಹದೇವ, ದ್ವಿತೀಯ ದರ್ಜೆ ಸಹಾಯಕ ರಾಜೇಂದ್ರ, ಕಿರಿಯ ಎಂಜಿನಿಯರ್ ನಾ ಗರಾಜು, ಕಚೇರಿ ವ್ಯವಸ್ಥಾಪಕ ಮಹೇಂದ್ರ, ಪ್ರಥಮ ದರ್ಜೆ ಸಹಾಯಕಿ ತ್ರಿವೇಣಿ, ಜೂನಿಯರ್ ಪ್ರೋಗ್ರಾಮರ್ ಹರೀಶ್, ಮುಖಂಡರಾದ ರಂಗುನಾಯಕ, ಸ್ವಾಮಿ, ಮಾದೇಶ್, ಪೌರಕಾರ್ಮಿಕ ಮೇಸ್ತ್ರಿ ಶಿವಣ್ಣ ಸೋಮು,ಮಹದೇವ್, ಭರತ, ರಾಜು, ಮಂಜು,ಸತೀಶ್, ಆಲಗೂಡು ರಾಜು, ಪೌರ ಕಾರ್ಮಿಕರಾದ ಶಿವಣ್ಣ ಬಿ.ಸೋಮ, ಬಿ. ನಂಜುಂಡ, ಮಹದೇವ, ರಾಜಶೇಖರ, ನಂಜುಂಡ, ರಾಜೇಶ, ರಾಜೇಂದ್ರ, ಬಣ್ಣಮ್ಮ, ಸುಶೀಲ, ಜ್ಯೋತಿ, ಮಾಗಾಳಿ ಇತರರು ಹಾಜರಿದ್ದರು.

ಕಿತ್ತೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಕ್ಕೆ 5.24 ಲಕ್ಷ ನಿವ್ವಳ ಲಾಭ



ಕಿತ್ತೂರು (ಬಸಾಪುರ) ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ವಾರ್ಷಿಕ ಮಹಾಸಭೆಯಲ್ಲಿ ಸಂಘದ ಅಧ್ಯಕ್ಷ ಕೆ.ವಿ.ಸೀತಾರಾಮ್ ಮಾತನಾಡಿದರು.

ಸರಗೂರು, ಸೆ.25– ಸಹಕಾರ ಸಂಘದಿಂದ ಪಡೆದ ಸಾಲವನ್ನು ರೈತರು ಸಕಾಲಕ್ಕೆ ಮರುಪಾವತಿ ಮಾಡಬೇಕು ಎಂದು ಸಂಘದ ಅಧ್ಯಕ್ಷ ಕೆ.ವಿ.ಸೀತಾರಾಮ್ ತಿಳಿಸಿದರು.

ಕಿತ್ತೂರು (ಬಸಾಪುರ) ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ವಾರ್ಷಿಕ ಮಹಾಸಭೆಯಲ್ಲಿ ಅವರು ಮಾತನಾಡಿ, ಸಂಘವೂ ಉತ್ತಮವಾಗಿ ಕಾರ್ಯನಿರ್ವಹಿಸಲು ಸದಸ್ಯರ ಸಹಕಾರ ಪ್ರಮುಖವಾಗಿದೆ ಎಂದರಲ್ಲದೆ, ಸಂಘವು 5.24 ಲಕ್ಷ ರೂ. ನಿವ್ವಳ ಲಾಭ ಪಡೆದಿದೆ ಎಂದರು.

2023–24ನೇ ಸಾಲಿನಲ್ಲಿ 186 ಸದಸ್ಯರಿಂದ 2.20 ಕೋಟಿ ರೂ.ವಸೂಲಾತಿ ಮಾಡಲಾಗಿದೆ, 2023–24 ಸಾಲಿನಲ್ಲಿ ಕೆಸಿಸಿ 186 ಸದಸ್ಯರಿಗೆ ಸಾಲ ವಿತರಣೆ 2.94 ಕೋಟಿ ರೂ.ಗಳನ್ನು ವಿತರಿಸಲಾಗಿದೆ, ರೈತರನ್ನು ಸಬಲೀಕರಣಗೊಳಿಸುವ ನಿಟ್ಟಿನಲ್ಲಿ ಗೊಬ್ಬರ ಮತ್ತು ಬಿತ್ತನೆ ಬೀಜ ಕೃಷಿಗೆ ಸಂಬಂಧಿಸಿದ ಔಷಧಿ ಅಂಗಡಿ ಮಳಿಗೆಯನ್ನು ತೆರೆಯಲು ಅನುಮತಿ ದೊರೆತಿದ್ದು ಹಾಗೂ ಜನ ಔಷಧಿ ಕೇಂದ್ರವನ್ನು ಶೀಘ್ರದಲ್ಲೆ ತೆರೆಯಲಾಗುವುದು ಮತ್ತು ಸಂಘದ ವತಿಯಿಂದ ಪೆಟ್ರೋಲ್‌ಬಂಕ್ ತೆರೆಯಲು ಸ್ಥಳ ಪರಿಶೀಲನೆ ಮಾಡಲಾಗಿದೆ ಎಂದರು.

ಸಂಘದ ಪ್ರಭಾರ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸುರೇಶ್ ಬಿ.ಎಂ. ವರದಿ ಮಂಡಿಸಿದರು. ಸಭೆಯಲ್ಲಿ ಸಂಘದ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಕೆ.ವಿ.ಸೀತಾರಾಮ್, ಉಪಾಧ್ಯಕ್ಷ ಕಾಳಸ್ವಾಮಿನಾಯಕ, ನಿರ್ದೇಶಕರಾದ ಕಾಡಮ್ಮ, ಪುಟ್ಟಮ್ಮ, ಸ್ವಾಮೀಗೌಡ, ಮೊಳ್ಳಬೋವಿ, ಬಿ.ಎಸ್.ರುದ್ರೇಶ್, ಕಮಲಮ್ಮ, ಶಿವಶಂಕರ್, ಪುಟ್ಟಸಿದ್ದನಾಯಕ, ಸಿಬ್ಬಂದಿ ವರ್ಗದವರಾದ ಶಂಕರ್, ಗುಮಾಸ್ತರಾದ ಕಾಳಸ್ವಾಮಿ ಬಿ.ಜಿ. ಸೇರಿದಂತೆ ಸಂಘದ ಸದಸ್ಯರು ಹಾಜರಿದ್ದರು.

ಸಿಸಿ ಕ್ಯಾಮರಾ ತೆಗೆಯಿರಿ, ದಂಡ ಮನ್ನಾ ಮಾಡುವಂತೆ ಆಗ್ರಹಿಸಿ ರೈತರು, ಸಾರ್ವಜನಿಕರಿಂದ ರಸ್ತೆ ತಡೆ



ರಾಜ್ಯ ರೈತ ಸಂಘಟನೆಗಳ ಒಕ್ಕೂಟ ಹಾಗೂ ರಾಜ್ಯ ಕಬ್ಬು ಬೆಳೆಗಾರರ ಸಂಘದ ಸಹಯೋಗದೊಂದಿಗೆ ರೈತರು ಬಸವೇಶ್ವರ ವೃತ್ತದಲ್ಲಿ ರಸ್ತೆ ತಡೆದು ಪ್ರತಿಭಟನೆ ನಡೆಸಿದರು.

ಬನ್ನೂರು, ಸೆ.25– ಪಟ್ಟಣದ ವಿವಿಧ ವೃತ್ತದಲ್ಲಿ ಹಾಕಲಾಗಿರುವ ಸಿಸಿ ಕ್ಯಾಮರಾಗಳನ್ನು ತೆರವುಗೊಳಿಸಿ ಹಾಗೂ ಹಾಕಿರುವಂತ ದಂಡವನ್ನು ಮನ್ನಾ ಮಾಡಿ ಎಂದು ಆಗ್ರಹಿಸಿ ರಾಜ್ಯ ರೈತ ಸಂಘಟನೆಗಳ ಒಕ್ಕೂಟ ಹಾಗೂ ರಾಜ್ಯ ಕಬ್ಬು ಬೆಳೆಗಾರರ ಸಂಘದ ಸಹಯೋಗದೊಂದಿಗೆ ರೈತ ಪರ ಸಂಘಟನೆ ಸದಸ್ಯರು ರಾಜ್ಯ ಕಬ್ಬು ಬೆಳೆಗಾರರ ಸಂಘದ ಕಾರ್ಯದರ್ಶಿ ಅತ್ತಳ್ಳಿ ದೇವರಾಜು ನೇತೃತ್ವದಲ್ಲಿ ಬಸವೇಶ್ವರ ವೃತ್ತದಲ್ಲಿ ರಸ್ತೆ ತಡೆದು ಉಗ್ರ ಪ್ರತಿಭಟನೆ ನಡೆಸಿದರು.

ಬೆಳಗ್ಗೆ 11.30ಕ್ಕೆ ಒಂದೆಡೆ ಸೇರಿದ ರೈತರು, ಮೊದಲು ಟಿ.ನರಸೀಪುರ ರಸ್ತೆ, ಮಳವಳ್ಳಿ ಬನ್ನೂರು ಮೈಸೂರು ರಸ್ತೆಯನ್ನು ಬಂದ್ ಮಾಡಿ, ಘೋಷಣೆ ಕೂಗುತ್ತ ಡಾಂಬರ್ ರಸ್ತೆಯಲ್ಲಿ ಕುಳಿತು ತಮ್ಮ ಆಕ್ರೋಶವನ್ನು ಹೊರಹಾಕಿದರು. ಹೊಟ್ಟೆಪಾಡಿಗೆ ದುಡಿಯುವ ನಮ್ಮಿಂದ ಕಾಂಗ್ರೆಸ್ ಸರ್ಕಾರ ಹಣ ವಸೂಲಾತಿಗೆ ನಿಂತಿದೆ ಎಂದು ದೂಷಿಸಿದರು. ರೈತರು ಸೇರಿದಂತೆ, ವಿವಿಧ ಕೆಲಸಗಳಿಗೆ ಓಡಾಡುವಂತ ಸ್ಥಳೀಯರು, ಪ್ರತಿನಿತ್ಯ ಗದ್ದೆ, ತೋಟ, ವಿದ್ಯಾರ್ಥಿಗಳನ್ನು ಶಾಲೆಗೆ ಬಿಡಲು, ಶುದ್ಧ ಕುಡಿಯುವ ನೀರು ತರಲು, ಮನೆಗೆ ಪದಾರ್ಥಕೊಳ್ಳಲು, ವಿವಿಧ ಉದ್ದೇಶಗಳಿಗೆ ಬರುವಂತ ಜನರ ಪಾಡು, ಸಿಸಿ ಕ್ಯಾಮರಾ ಅಳವಡಿಕೆಯಿಂದ ದುಸ್ತರವಾಗಿದ್ದು, ದಂಡ ಪಾವತಿಸುವಂತಾಗಿದೆ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದರು.

ಸ್ಥಳಕ್ಕೆ ಆಗಮಿಸಿದ ಡಿವೈಎಸ್‌ಪಿ ರಘು, ನರಸೀಪುರ ವೃತ್ತ ನಿರೀಕ್ಷಕ ಧನಂಜಯ ಕುಮಾರ್, ತಹಸೀಲ್ದಾರ್ ಸುರೇಶ್‌ಆಚಾರ್, ಬನ್ನೂರು ವೃತ್ತ ನಿರೀಕ್ಷಕ ಮನೋಜ್ ಕುಮಾರ್, ಸಿಸಿ ಕ್ಯಾಮರಾದ ವಿಚಾರವನ್ನು ಎಸ್‌ಪಿ ಮತ್ತು ಡಿಸಿ ಹಾಗೂ ಉಸ್ತುವಾರಿ ಸಚಿವರ ಗಮನಕ್ಕೆ ತಂದು ವಾರದೊಳಗೆ ಸಮಸ್ಯೆಯನ್ನು ಪರಿಹರಿಸುವ ಭರವಸೆ ನೀಡಿದ ಮೇಲೆ ಪ್ರತಿಭಟನೆ ಅಂತ್ಯ ಕಂಡಿತು.

ರಾಜ್ಯ ಕಬ್ಬು ಬೆಳೆಗಾರರ ಸಂಘದ ಕಾರ್ಯದರ್ಶಿ ಅತ್ತಳ್ಳಿ ದೇವರಾಜು, ಜಿಲ್ಲಾ ಉಪಾಧ್ಯಕ್ಷ ನೀಲಕಂಠಪ್ಪ, ಜಿಲ್ಲಾ ಕಾರ್ಯದರ್ಶಿ ಕಿರಗಸೂರು ಶಂಕರ್, ಅತ್ತಳ್ಳಿ ಲಿಂಗಣ್ಣ, ಅರುಣ್‌ಕುಮಾರ್, ಬನ್ನೂರು ಸೂರಿ, ನಂಜೇಗೌಡ, ಕುರುಬೂರು ಸಿದ್ದೇಶ್, ಕುರುಬೂರು ಪ್ರದೀಪ್, ಅಂಬಳೆ ಮಂಜುನಾಥ್, ವರ್ಕೂಡು ನಾಗೇಶ್, ಹೆಗ್ಗೂರು ರಂಗರಾಜು, ಹನುಮನಾಳು ಲೋಕೇಶ್, ಶಿವರಾಜು, ಕುಂತನಹಳ್ಳಿ ಸ್ವಾಮಿ, ಕುಂತನಹಳ್ಳಿ ಕುಳ್ಳೇಗೌಡ, ಮೋಹನ್‌ಕುಮಾರ್, ಕೋಳಿ ಮನು ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಕಾಲು ಜಾರಿ ನಾಲೆಯಲ್ಲಿ ಮುಳುಗಿ ವ್ಯಕ್ತಿ ಸಾವು

ಸಾಲಿಗ್ರಾಮ, ಸೆ.25– ರೈತನೊಬ್ಬ ಕಾಲುವೆಯಲ್ಲಿ ಹಸು ತೊಳೆಯುವಾಗ ಆಕಸ್ಮಿಕವಾಗಿ ಕಾಲು ಜಾರಿ



ಬಿದ್ದು ಮೃತಪಟ್ಟಿರುವ ಘಟನೆ ಸಾಲಿಗ್ರಾಮ ತಾಲೂಕಿನ ತಂದ್ರೆ ಅಂಕನಹಳ್ಳಿ ಗ್ರಾಮದಲ್ಲಿ ಮಂಗಳವಾರ ನಡೆದಿದೆ.

ಗ್ರಾಮದ ದೇವನಾಯಕ (49) ಮೃತ ದುರ್ದೈವಿ. ಇವರು ಎಂದಿನಂತೆ ತಮ್ಮ ಜಮೀನಿನಲ್ಲಿ ಕೃಷಿ ಕೆಲಸಕ್ಕೆ ಹೋಗಿದ್ದಾಗ ಕೆಲಸ ಮುಗಿಸಿ ಹೇಮಾವತಿ ಬಲದಂಡೆ ನಾಲೆಯಲ್ಲಿ ಹಸುಗಳನ್ನು ತೊಳೆಯಲು ನೀರಿಗಿಳಿದಾಗ ಕಾಲು ಜಾರಿ ಬಿದ್ದು ನಾಲೆಯಲ್ಲಿ ಮುಳುಗಿ ಸಾವನ್ನಪ್ಪಿದ್ದಾರೆ.

ಈ ಸಂಬಂಧ ಸಾಲಿಗ್ರಾಮ ಪೊಲೀಸ್ ಠಾಣೆಯಲ್ಲಿ ಅವರ ಮಗ ರಜನಿಕಾಂತ್ ನಾಯಕ ದೂರು ನೀಡಿದ್ದಾರೆ. ಮೃತರಿಗೆ ಪತ್ನಿ ನಾಗರತ್ನ, ಇಬ್ಬರು ಪುತ್ರರಿದ್ದಾರೆ. ಬುಧವಾರ ಗ್ರಾಮದಲ್ಲಿ ಅಂತ್ಯಕ್ರಿಯೆ ನಡೆಯಿತು.

ಕಸುವಿನಹಳ್ಳಿ ಪಿಎಸಿಸಿಎಸ್‌ಗೆ 9.62.536 ಲಾಭ



ಸಭೆಯಲ್ಲಿ ಅಧ್ಯಕ್ಷ ಕೆ.ಎನ್. ಚಿನ್ನಸ್ವಾಮಿ ಮಾತನಾಡಿದರು.

ಮಲ್ಕುಂಡಿ, ಸೆ.25– ಸಂಘದ ಎಲ್ಲಾ ಸದಸ್ಯರ ಸಹಕಾರದಿಂದ ಸಂಘದ ಅಭಿವೃದ್ಧಿ ಸಾಧ್ಯ ಎಂದು ಸಂಘದ ಅಧ್ಯಕ್ಷ ಕೆ.ಎನ್. ಚಿನ್ನಸ್ವಾಮಿ ಹೇಳಿದರು.

ಸಮೀಪದ ಕಸುವಿನಹಳ್ಳಿ ಗ್ರಾಮದ ಕೃಷಿ ಪತ್ತಿನ ಸಹಕಾರ ಸಂಘದ 2023–24 ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ರೈತರು ಸಂಘದಲ್ಲಿ ಸಾಲ ಪಡೆದು ಅದನ್ನು ಸಕಾಲಕ್ಕೆ ಮರುಪಾವತಿ ಮಾಡಿದರೆ ಸಂಘವು ಅಭಿವೃದ್ಧಿಯತ್ತ ಕೊಂಡೊಯ್ಯಲು ಸಾಧ್ಯವಾಗುತ್ತದೆ. 2023–24ನೇ ಸಾಲಿನಲ್ಲಿ ನಮ್ಮ ಸಂಘಕ್ಕೆ 9.62.536 ಲಾಭಾಂಶ ಬಂದಿದೆ. ಸಂಘದ ನಿರ್ದೇಶಕರು ಹಾಗೂ ಸದಸ್ಯರ ಸಹಕಾರದಿಂದ ಸಂಘವು ಉತ್ತಮವಾಗಿ ನಡೆಯುತ್ತಿದೆ. ಪ್ರತಿಯೊಬ್ಬ ರೈತರು ಸಾಲವನ್ನು ಮರುಪಾವತಿಸಿ ಸಂಘದ ಅಭಿವೃದ್ಧಿಗೆ ಸಹಕರಿಸಬೇಕು ಎಂದು ಮನವಿ ಮಾಡಿದರು.

2023–24 ನೇ ಸಾಲಿನ ವಾರ್ಷಿಕ ಮಹಾಸಭೆಯ ವರದಿಯನ್ನು ಸಂಘದ ಸಿಇಓ ಜಿ.ಶಿವಕುಮಾರ್ ಮಂಡಿಸಿದರು. ಈ ವೇಳೆ ಸಂಘದ ಉಪಾಧ್ಯಕ್ಷ ಅರುಣ್ ಕುಮಾರ್, ನಿರ್ದೇಶಕರುಗಳಾದ ಕೆ ಎನ್ ಮಲ್ಲೇಶ್,ಕೆ ಎಂ ಶಿವಪ್ಪ ಕೆ.ಎಂ.ಶಿವಮೂರ್ತಿ, ಪುಟ್ಟಸ್ವಾಮಿ, ಮಂಜುಳ, ನೀಲಮ್ಮ, ನಡಕೇರಯ್ಯ, ನಾಗರಾಜಚಾರ್, ಸಿದ್ದನಾಯಕ ಸೇರಿದಂತೆ ಪ್ರಮುಖರು ಹಾಜರಿದ್ದರು

ಸಾಲ ಬಾಧೆ ತಾಳಲಾರದೆ ವಿಷ ಸೇವಿಸಿ ರೈತ ಆತ್ಮಹತ್ಯೆ

ಹಿರೀಕ್ಯಾತನಹಳ್ಳಿ, ಸೆ.25– ಸಾಲ ಬಾಧೆ ತಾಳಲಾರದೆ ರೈತನೋರ್ವ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ



ಹುಣಸೂರು ತಾಲೂಕಿನ ಗಾವಡಗೆರೆಯಲ್ಲಿ ಸಂಭವಿಸಿದೆ.

ಗ್ರಾಮದ ಸೋಮನಾಥ್ ರಾವ್ ಶಿಂಧೆ ಆತ್ಮಹತ್ಯೆ ಮಾಡಿಕೊಂಡ ರೈತ. ಸೋಮನಾಥ್ ಆಕ್ಸಿಸ್ ಬ್ಯಾಂಕ್‌ನಲ್ಲಿ 60 ಸಾವಿರ, ಸ್ಪಂದನ ಸ್ಫೂರ್ತಿ ಫೈನಾನ್ಸಿನಲ್ಲಿ 1.17 ಲಕ್ಷ, ಇಎಸ್‌ಎಎಸ್ ಬ್ಯಾಂಕಿನಲ್ಲಿ 95 ಸಾವಿರ ರೂ. ಸಾಲ ಮಾಡಿ ಜಮೀನಿನಲ್ಲಿ ರಾಗಿ, ಜೋಳ, ಹುರುಳಿ ಬಿತ್ತಿದ್ದರು.

ಅತಿಯಾದ ಮಳೆಯಿಂದಾಗಿ ಫಸಲು ಬಾರದೆ ನಷ್ಟ ಅನುಭವಿಸಿದ ಹಿನ್ನೆಲೆಯಲ್ಲಿ ಸಾಲದ ಹೊಡೆತ ತಾಳಲಾರದೆ ರೈತ ತನ್ನ ಜಮೀನಿನಲ್ಲಿ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಳ್ಳಲು ಯತ್ನಿಸಿದರು. ಪತಿ ವಿಷ ಸೇವಿಸಿರುವುದನ್ನು ಕಂಡ ಪತ್ನಿ ತಕ್ಷಣ ಕೆ.ಆರ್.ನಗರ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿ ನಂತರ ಹೆಚ್ಚಿನ ಚಿಕಿತ್ಸೆಗೆ ಮೈಸೂರಿನ ಕೆ.ಆರ್. ಆಸ್ಪತ್ರೆಗೆ ಸಾಗಿಸುವ ಮಾರ್ಗಮಧ್ಯೆ ಮೃತಪಟ್ಟಿದ್ದಾರೆ. ಹುಣಸೂರು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಾದೇಗೌಡನಹುಂಡಿ ಕೃಷಿ ಪತ್ತಿನ ಸಹಕಾರ ಸಂಘಕ್ಕೆ 5.33 ಲಕ್ಷ ರೂ. ನಿವ್ವಳ ಲಾಭ



ತಿ.ನರಸೀಪುರ ತಾಲೂಕು ಮಾದೇಗೌಡನಹುಂಡಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ಸಂಘದ ಅಧ್ಯಕ್ಷ ಹೆಚ್.ಎನ್.ರಾಜೇಶ್ ಉದ್ಘಾಟಿಸಿದರು.

ತಿ.ನರಸೀಪುರ, ಸೆ.24– ಸಂಘದ ಸರ್ವ ಸದಸ್ಯರ ಸಹಕಾರದಿಂದ ಸಂಘವು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದು 2023–24ನೇ ಸಾಲಿಗೆ 5.33.264 ಲಕ್ಷ ರೂ.ಗಳ ನಿವ್ವಳ ಲಾಭ ಗಳಿಸಿ ಯಶಸ್ವಿಯಾಗಿ ಮುನ್ನಡೆದಿದೆ ಎಂದು ಮಾದೇಗೌಡನ ಹುಂಡಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಎಚ್.ಎನ್. ರಾಜೇಶ್ ಹೇಳಿದರು.

ಮಾದೇಗೌಡನಹುಂಡಿ ಗ್ರಾಮದಲ್ಲಿರುವ ಸಂಘದ ಕಚೇರಿ ಆವರಣದಲ್ಲಿ ಏರ್ಪಡಿಸಲಾಗಿದ್ದ ಸಂಘದ 2023–24 ನೇ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸಂಘದಿಂದ ಸಾಲ ಪಡೆದ ರೈತರು ಸುಸ್ತಿದಾರರಾಗದೇ ನಿಗದಿತ ಸಮಯಕ್ಕೆ ಸಾಲ ಮರುಪಾವತಿ ಮಾಡಿದಲ್ಲಿ ಸಂಘವು ಮತ್ತಷ್ಟು ಅಭಿವೃದ್ಧಿ ಹೊಂದಲು ಸಾಧ್ಯವಾಗುತ್ತದೆ. ಹಾಗಾಗಿ ಯಾರೂ ಕೂಡ ಸಾಲ ಬಾಕಿ ಉಳಿಸಿಕೊಳ್ಳದೇ ಸಂಘದ ಬೆಳವಣಿಗೆಗೆ ಸಹಕಾರ ನೀಡಿ ಎಂದು ಮನವಿ ಮಾಡಿದರು.

ಸಂಘದ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಸಿ ರಾಜೇಶ್, ಸಂಘದ ಚಟುವಟಿಕೆಗಳ ಬಗ್ಗೆ ಮಾಹಿತಿ ನೀಡಿ ಮಾತನಾಡಿ, ಸಂಘದಲ್ಲಿ 407 ರೈತರಿಗೆ 4ಕೋಟಿ 66 ಲಕ್ಷ 5 ಸಾವಿರ ರೂಗಳನ್ನು ನೀಡಿದ್ದೇವೆ. ಮತ್ತು 11 ಮಹಿಳಾ ಸ್ವಸಹಾಯ ಸಂಘಗಳಿಗೆ 21 ಲಕ್ಷ ನೀಡಿದ್ದೇವೆ ಮತ್ತು ಮಧ್ಯಮ ಸಾಲವನ್ನು 6 ಲಕ್ಷದ ಹದಿನೈದು ಸಾವಿರ ನೀಡಿ ಉತ್ತಮವಾಗಿ ನಡೆದುಕೊಂಡು ಬರುತ್ತಿದೆ ಎಂದರು.

ಮೇಲ್ವಿಚಾರಕ ರಾಜಪ್ಪ, ಉಪಾಧ್ಯಕ್ಷ ನಾಗಮ್ಮ, ನಿರ್ದೇಶಕರಾದ ಅನಿಲ್ ಕುಮಾರ್, ಹೆಚ್‌ಎನ್ ದೇವರಾಜು, ಸಿ ನಾಗರಾಜು, ನಾಗೇಂದ್ರ, ಶ್ರೀ ಗುರು, ವೆಂಕಟೇಶ್, ಶ್ರೀನಿವಾಸ, ಅಂಬರೀಶ್, ನಾಗಮ್ಮ, ರೈತರು ಷೇರುದಾರರು ಹಾಜರಿದ್ದರು.

ಸಿದ್ದರಾಮಯ್ಯ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡದಿದ್ದರೆ ಹೋರಾಟ

ನಂಜನಗೂಡಲ್ಲಿ ಮಾಜಿ ಶಾಸಕ ಹರ್ಷವರ್ಧನ್ ಎಚ್ಚರಿಕೆ



ಸುದ್ದಿಗೋಷ್ಠಿಯಲ್ಲಿ ಮಾಜಿ ಶಾಸಕ ಬಿ.ಹರ್ಷವರ್ಧನ್ ಮಾತನಾಡಿದರು.

ನಂಜನಗೂಡು, ಸೆ.25– ಮುಡಾ ಹಗರಣ ಸಂಬಂಧ ಹೈಕೋರ್ಟ್ ನೀಡಿರುವ ತೀರ್ಪು ಸ್ವಾಗತಾರ್ಹವಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯರವರಿಗೆ ಮುಖ್ಯಮಂತ್ರಿ ಹುದ್ದೆಯ ಗೌರವ ಕಾಪಾಡುವ ಸಲುವಾಗಿ ಹಾಗೂ ನಿಮಗೆ ನೈತಿಕತೆಯಿದ್ದರೆ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಬೇಕು. ಇಲ್ಲವಾದಲ್ಲಿ ನಾವು ಬೀದಿಗಿಳಿದು ಹೋರಾಟ ನಡೆಸಬೇಕಾಗುತ್ತದೆ ಎಂದು ಮಾಜಿ ಶಾಸಕ ಬಿ.ಹರ್ಷವರ್ಧನ್ ಹೇಳಿದರು.

ನಗರದ ಎಂಜಿಎಸ್ ರಸ್ತೆಯಲ್ಲಿರುವ ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದರು. ಸಿದ್ದರಾಮಯ್ಯನವರೆ, ಹೈಕೋರ್ಟ್ ತೀರ್ಪಿನ ನಂತರ ನ್ಯಾಯಾಲಯದ ಆದೇಶದ ಪ್ರತಿ ನನ್ನ ಕೈ ಸೇರಿಲ್ಲ. ಆದೇಶದ ಪ್ರತಿ ಬಂದ ನಂತರ ನ್ಯಾಯಾಂಗ ಹೋರಾಟ ನಡೆಸುತ್ತೇನೆಂದು ಹೇಳಿಕೆ ನೀಡಿ ಜನರನ್ನು ದಾರಿ ತಪ್ಪಿಸಬೇಡಿ. ನೀವು ಸಂವಿಧಾನಾತ್ಮಕವಾಗಿ ರಾಜ್ಯಪಾಲರಿಗೆ ನೀಡಿರುವ ಹಕ್ಕನ್ನು ಪ್ರಶ್ನೆ ಮಾಡಲು ಹೊರಟಿದ್ದೀರಿ. ಆ ಬಗ್ಗೆ ನಿಮಗೆ ತಿಳಿದಿದೆ. ಸುಖಾಸುಮ್ಮನೆ ನಿಮ್ಮ ತಪ್ಪನ್ನು ಮುಚ್ಚಿಹಾಕಲು ಜನರ ದಾರಿ ತಪ್ಪಿಸಬೇಡಿ ಎಂದರು.

ಮುಡಾದಲ್ಲಿ ನಡೆದಿರುವ ಭ್ರಷ್ಟಾಚಾರದ ತನಿಖೆ ನಡೆಸುವಂತೆ ಬಿಜೆಪಿ ಪಕ್ಷದ ವತಿಯಿಂದ ಬಿಡದಿಯಿಂದ ಮೈಸೂರಿನವರೆಗೆ ಪಾದಯಾತ್ರೆ ನಡೆಸಿ ಒತ್ತಾಯಿಸಲಾಗಿತ್ತು. ಈಗ ರಾಜ್ಯ ಹೈಕೋರ್ಟ್ ರಾಜ್ಯಪಾಲರು ನೀಡಿರುವ ಪೂರ್ವಾನುಮತಿಯನ್ನು ಎತ್ತಿಹಿಡಿದಿರುವುದು ಸ್ವಾಗತಾರ್ಹ ಬೆಳವಣಿಗೆ. ತನಿಖೆ ನಡೆದ ಮೇಲೆ ಭ್ರಷ್ಟಾಚಾರ ನಡೆದಿರುವುದು ಗೊತ್ತಾಗಲಿದೆ. ಮುಖ್ಯಮಂತ್ರಿ ಸ್ಥಾನದಲ್ಲಿದ್ದುಕೊಂಡು ಎಸ್‌ಐಟಿ ಅಥವಾ ಲೋಕಾಯುಕ್ತ ತನಿಖೆಗೆ ಹಾಜರಾಗುವುದು ಎಷ್ಟು ಸರಿ. ಮುಖ್ಯಮಂತ್ರಿ ಸ್ಥಾನದ ಗೌರವ ಏನಾಗಬೇಕು? ನೀವು ಮುಖ್ಯಮಂತ್ರಿ ಹುದ್ದೆಯಲ್ಲಿದ್ದುಕೊಂಡು ತನಿಖೆ ನಿಷ್ಪಕ್ಷಪಾತವಾಗಿ ನಡೆಯಲು ಸಾಧ್ಯವೇ? ಲೋಕಾಯುಕ್ತ ಅಥವಾ ಎಸ್‌ಐಟಿ ಅಧಿಕಾರಿಗಳ ಮೇಲೆ ಒತ್ತಡ ಹೇರಿ ತನಿಖೆಗೆ ಅಡ್ಡಿಪಡಿಸುವ ಸಾಧ್ಯತೆಯೂ ಹೆಚ್ಚಾಗಿದೆ ಎಂದರು.

ಸಿಎಂ ಪತ್ನಿಯೇ ಆರೋಪಿಯಾಗಿದ್ದಾರೆ. ನಿಮ್ಮ ಪಕ್ಷದಲ್ಲಿ ನಿಮ್ಮನ್ನು ದೇವರಾಜ ಅರಸುರವರಿಗೆ ಹೋಲಿಕೆ ಮಾಡುತ್ತಾರೆ. ಆದ್ದರಿಂದ ನಿಮ್ಮ ಮೇಲೆ ನಮಗೆ ಅಪಾರ ಗೌರವವಿದೆ. ಸಿಎಂ ಸ್ಥಾನಕ್ಕೆ ಗೌರವ ಸಿಗಬೇಕಾದರೆ ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡಿ ತನಿಖೆ ಎದುರಿಸಿ ದೇವರಾಜ ಅರಸುರಂತೆ ನಡೆದುಕೊಳ್ಳಿ ಎಂದು ಒತ್ತಾಯಿಸಿದರು.

ಇನ್ನೊಂದು ಮೂಲಗಳ ಪ್ರಕಾರ ಸಿಎಂ ಸಿದ್ದರಾಮಯ್ಯರವರು ಮುಖ್ಯಮಂತ್ರಿಯಾಗಿ ಮುಂದುವರೆಯುವುದು ಕಷ್ಟ, ಮುಂದಿನ ವರ್ಷ ಬಜೆಟ್ ಮಂಡಿಸಿ ರಾಜೀನಾಮೆ ಸಲ್ಲಿಸಲಿದ್ದಾರೆ ಎಂಬ ಬಗ್ಗೆ ನಿಮ್ಮದೇ ಪಕ್ಷದ ನಾಯಕರು ಮಾತನಾಡುತ್ತಾರೆ. ನಿಮಗೆ ನೈತಿಕತೆಯಿದ್ದರೆ ರಾಜೀನಾಮೆಗೆ ಮುಂದಾಗಿ, ನೀವು ನ್ಯಾಯಾಂಗ ತನಿಖೆ ಎದುರಿಸುತ್ತೇವೆಂದು ಭಂಡ ಹೇಳಿಕೆ ನೀಡಿದಲ್ಲಿ ನಾವು ಬೀದಿಗಿಳಿದು ಹೋರಾಟ ನಡೆಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಬಿಜೆಪಿ ತಾಲೂಕು ಅಧ್ಯಕ್ಷ ಕೆಂಡಗಣ್ಣಪ್ಪ, ನಗರಾಧ್ಯಕ್ಷ ಸಿದ್ದರಾಜು, ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಕಣೇನೂರು ಪರಶಿವಮೂರ್ತಿ, ತಾಪಂ ಮಾಜಿ ಸದಸ್ಯ ಹೆಮ್ಮರಗಾಲ ಶಿವಣ್ಣ, ಮುಖಂಡರಾದ ಶ್ರೀನಿವಾಸರೆಡ್ಡಿ, ವಳಗೆರೆಪುಟ್ಟಸ್ವಾಮಿ, ಮಹದೇವ ಪ್ರಸಾದ್, ಬಾಲಚಂದ್ರು, ಮಹೇಶ್‌ಬಾಬು, ಗೋವರ್ಧನ್, ಸಿಂಧುವಳ್ಳಿಪುರ ಮಲ್ಲೇಶ್ ಸೇರಿದಂತೆ ಹಲವಾರು ಪ್ರಮುಖರು ಇದ್ದರು.

ದೊಡ್ಡಬೇಲಾಳು ಸಹಕಾರ ಸಂಘದ ಸಭೆಯಲ್ಲಿ ಗದ್ದಲ

• ಪರಸ್ಪರ ಮಾತಿನ ಚಕಮಕಿ, ಕೈ ಕೈ ಮಿಲಾಯಿಸುವ ಹಂತಕ್ಕೆ ತಲುಪಿದ ಜಗಳ • ಸಮಾಧಾನಪಡಿಸಲು ಪೊಲೀಸರ ಹರಸಾಹಸ



ಕಂಪಲಾಪುರ ಸಮೀಪದ ದೊಡ್ಡಬೇಲಾಳು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ವಾರ್ಷಿಕ ಸಭೆಯಲ್ಲಿ ಅಧ್ಯಕ್ಷ ಆರ್.ಎಸ್.ಮಹದೇವ್ ಮಾತನಾಡಿದರು.

ಕಂಪಲಾಪುರ, ಸೆ.25– ಸಮೀಪದ ದೊಡ್ಡಬೇಲಾಳು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ವಾರ್ಷಿಕ ಮಹಾಸಭೆಯಲ್ಲಿ ಮಾತಿನ ಚಕಮಕಿ ನಡೆದು, ಕೈ ಕೈ ಮಿಲಾಯಿಸುವ ಹಂತಕ್ಕೆ ತಲುಪಿದ ಘಟನೆ ನಡೆದಿದೆ.

ಸಭೆಯನ್ನು ಅಧ್ಯಕ್ಷ ಆರ್.ಎಸ್. ಮಹದೇವ್ ಜ್ಯೋತಿ ಬೆಳಗಿಸಿ, ಉದ್ಘಾಟಿಸಿದರು. ನಂತರ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ರವಿ ಆಡಿಟ್ ವರದಿಯನ್ನು ಓದಲಾರಂಭಿಸಿದಾಗ ಮುಂದೆ ಕುಳಿತಿದ್ದ ಕೆಲ ಹಿರಿಯ ಸಹಕಾರಿಗಳು ಬಳಿಕ ಸಾಲವನ್ನು ಆಧಾರವಿಲ್ಲದೇ ನಿಮಗಿಷ್ಟ ಬಂದಂತೆ ವಿತರಿಸಿದ್ದೀರಿ. ಪೆನ್ನು, ರಶೀತಿ ಪುಸ್ತಕ, ಫಾರಂಗಳಿಗೆ ಬೇಕಾಬಿಟ್ಟಿ ಖರ್ಚು ತೋರಿಸಿದ್ದೀರಿ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಇದಕ್ಕೆ ಉತ್ತರಿಸಿದ ಸಿಇಓ ರವಿ, ನಮ್ಮ ಸಂಘದಲ್ಲಿ 1749 ಮಂದಿ ಷೇರುದಾರರಿದ್ದು, ಕೆಸಿಸಿ ಸಾಲ ಪಡೆಯುವ ಪ್ರತಿ ರೈತರ ಸಹಿ ಪಡೆಯಲು ಫಾರಂಗಳು, ನಗದು ರಶೀದಿಗಳನ್ನು ಮುದ್ರಣ ಮಾಡಿಸಬೇಕಾಗುತ್ತೆ. ಅದಕ್ಕೆ ಅಷ್ಟು ಹಣ ಬೇಕೇಬೇಕು, ಹಾಗೆಯೇ ಆಡಳಿತ ಮಂಡಳಿ ಅನುಮತಿ ಇಲ್ಲದೇ ಯಾವ ರೈತರಿಗೂ ಸಾಲ ನೀಡಿಲ್ಲ ಜೊತೆಗೆ, ಸಹಕಾರಿ ನಿಯಮದಂತೆ ದಾಖಲೆಗಳಿಗೆ ಸಹಿ ಮಾಡಿಸಿಕೊಂಡು ಸಾಲ ನೀಡಲಾಗಿದೆ ಎಂದರು.

ನಮ್ಮ ಸಂಘವು 2023–24 ನೇರ ಸಾಲಿಗೆ 24.65 ಲಕ್ಷ ನಿವ್ವಳ ಲಾಭ ಗಳಿಸಿದ್ದು , ಜಿಲ್ಲಾ ಬ್ಯಾಂಕ್‌ನಿಂದ 14 ಕೋಟಿ ಸಾಲ ಪಡೆದಿದ್ದು ಅದನ್ನು ರೈತರಿಗೆ ವಿತರಿಸಲಾಗಿದೆ. ನಮ್ಮಿಂದ ಏನಾದರೂ ಸಣ್ಣಪುಟ್ಟ ತಪ್ಪುಗಳಿದ್ದರೆ ಮುಂದೆ ಅವುಗಳನ್ನು ಸರಿಪಡಿಸಿಕೊಂಡು ಹೋಗುತ್ತೇವೆ ಎಂದು ಅವರು ಹೇಳಿದರು. ಸೌದೆ ಸಾಲವನ್ನು ನೀಡುತ್ತಿಲ್ಲ ಎಂದು ಕೆಲ ರೈತರು ಆರೋಪಿಸಿದಾಗ ಉತ್ತರಿಸಿದ ಸಿಇಓ ರವಿ, ಸೌದೆ ಸಾಲವನ್ನು 131 ಮಂದಿಗೆ ನೀಡಿದ್ದು, ಕೆಲ ರೈತರು ತಡವಾಗಿ ರೆಕಾರ್ಡ್ಸ್ ನೀಡಿದರು. ಅಷ್ಟರಲ್ಲಿ ಲೋಕಸಭಾ ಚುನಾವಣೆ ಬಂತು, ನೀತಿ ಸಂಹಿತೆ ಜಾರಿಯಲ್ಲಿದ್ದರಿಂದ ಹಿರಿಯ ಅಧಿಕಾರಿಗಳು ನಿಧಾನಿಸಿ ಎಂದರು. ಅದಕ್ಕೆತಡವಾಯ್ತು ಎಂದರು.

ಸಹಕಾರಿ ಸಂಸ್ಥೆಗಳಲ್ಲಿ ರಾಜಕೀಯ ಬೆರಸಬಾರದು ಎಂಬ ನಿಯಮವಿದ್ದರೂ, ಸಹಕಾರಿಗಳ ವಾಗ್ವಾದ ನೋಡಿದರೆ ಇಲ್ಲಿ ಕಾಂಗ್ರೆಸ್, ಜೆಡಿಎಸ್ ಎಂಬಂತೆ ಪೈಪೋಟಿಯಿಂದ ಇವರ ತಪ್ಪನ್ನು ಅವರು, ಅವರ ತಪ್ಪನ್ನು ಇವರು ಎತ್ತಾಡಿಕೊಂಡು ಪರಸ್ಪರ ಕೈ ಕೈ ಮಿಲಾಯಿಸುವ ಹಂತಕ್ಕೆ ಹೋಯಿತು. ಕೊನೆಗೆ ಪೊಲೀಸರು ಮಧ್ಯೆ ಪ್ರವೇಶಿಸಿ, ಜಗಳ ಬಿಡಿಸಲು ಹರಸಾಹಸಪಟ್ಟರು. ಇದು ನಿಮ್ಮ ಸೊಸೈಟಿ. ಇಲ್ಲಿ ನೀವೇ ಸರಿಪಡಿಸಿಕೊಂಡು ಹೋಗಬೇಕು ಎಂದು ಎರಡೂ ಕಡೆಯವರನ್ನು ಸಮಾಧಾನ ಪಡಿಸಿದರು.

ಕೊನೆಗೆ ಅಧ್ಯಕ್ಷ ಆರ್.ಎಸ್.ಮಹದೇವ್ ರೈತರ ಅನುಕೂಲಕ್ಕಾಗಿಯೇ ನಾನು ಮೇಲಾಧಿಕಾರಿಗಳ ಮೇಲೆ, ಸರ್ಕಾರದ ಮೇಲೆ ಒತ್ತಡ ತಂದು ಹೆಚ್ಚು ಹಣವನ್ನು ಬಿಡುಗಡೆ ಮಾಡಿಸಿಕೊಂಡು ಬಂದಿದ್ದೇನೆ. ವಿನಾಕಾರಣ ನಮ್ಮ ಮೇಲೆ ಆರೋಪ ಮಾಡುತ್ತಿರುವುದು ಸರಿ ಇಲ್ಲ ಎಂದು ತಮ್ಮ ಭಾಷಣ ಮೊಟಕುಗೊಳಿಸಿ ಎಲ್ಲರಿಗೂ ವಂದಿಸಿ ಸಭೆ ಮುಕ್ತಾಯಗೊಳಿಸಿದರು.

ಇದೇ ಸಂದರ್ಭ ಉಪಾಧ್ಯಕ್ಷ ಕೃಷ್ಣ, ಬ್ಯಾಂಕ್ ಮೇಲ್ವಿಚಾರಕ ಎಸ್.ಕೆ.ಪ್ರಕಾಶ್, ಟಿಎಪಿಸಿಎಂಎಸ್ ಮಾಜಿ ಅಧ್ಯಕ್ಷ ನಾಗೇಂದ್ರ, ವಿ.ಜಿ.ಕೊಪ್ಪಲು ಲೋಕೇಶ್, ಕೆ.ಶಿವಣ್ಣ, ಚಂದ್ರು ಅರಸ್, ಸ್ವಾಮಿ ಗೌಡ, ಮರಿಗೌಡ, ಜೆ.ಪಿ.ಕುಮಾರ್ ಸೇರಿದಂತೆ ನಿರ್ದೇಶಕರು, ಸಿಬ್ಬಂದಿ ಹಾಜರಿದ್ದರು.

ಪೌರಕಾರ್ಮಿಕ ಕಾಲೋನಿಗೆ ಜಿಪಂ ಸಿಇಓ ಭೇಟಿ

ಅನ್ಯಾಯಕ್ಕೊಳಗಾಗಿರುವ ಪೌರಕಾರ್ಮಿಕರ ರಕ್ಷಣೆಯ ಭರವಸೆ



ಪೌರಕಾರ್ಮಿಕರ ಕಾಲೋನಿಗೆ ಭೇಟಿ ನೀಡಿರುವ ಅಧಿಕಾರಿಗಳು.

ಹುಣಸೂರು, ಸೆ.25– ತಾಲೂಕಿನ ಬಿಳಿಕೆರೆ ಹೋಬಳಿ ವ್ಯಾಪ್ತಿಯ ಹುಣಸೂರು–ಮೈಸೂರು ರಾಷ್ಟ್ರೀಯ ಹೆದ್ದಾರಿಯ ಮನುಗನಹಳ್ಳಿ ಗೇಟ್ ಬಳಿ ಇರುವ ಪೌರಕಾರ್ಮಿಕರ ಕಾಲೋನಿಗೆ ಜಿ.ಪಂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸಿದ್ದಗಂಗಮ್ಮ ನೇತೃತ್ವದ ತಂಡ ಭೇಟಿ ನೀಡಿ, ಪರಿಶೀಲನೆ ನಡೆಸಿತು.

ಕಾಲೋನಿಯ ಕುಟುಂಬಗಳ ನಿವಾಸಿಗಳೊಂದಿಗೆ ಸಿದ್ದಗಂಗಮ್ಮ ಮಾತನಾಡಿ, ವಾಸದ ಮನೆಗಳ ಖಾತರಿ ಮತ್ತು ದಾಖಲೆಗಳ ಬಗ್ಗೆ ಮಾಹಿತಿ ಪಡೆದರು. ನಂತರ ತಾ.ಪಂ ಇಓ ಹೊಂಗಯ್ಯ ಮಾತನಾಡಿ, ಕಳೆದ 50 ವರ್ಷಗಳಿಂದ ಇಲ್ಲಿ ಸುಮಾರು 20 ಪೌರಕಾರ್ಮಿಕರ ಕುಟುಂಬಗಳು ವಾಸವಿದ್ದು ದಾಖಲೆಗಳ ಪ್ರಕಾರ ಈ ಜಾಗವನ್ನು ಖಾಸಗಿ ವ್ಯಕ್ತಿಯೊಬ್ಬರು ಖರೀದಿಸಿದ್ದಾರೆ ಎಂದರು.

ಈ ಕುರಿತು ಲೋಕಾಯುಕ್ತಕ್ಕೆ ಈ ಹಿಂದೆ ದಲಿತ ಸಂಘರ್ಷ ಸಮಿತಿ ಜಿಲ್ಲಾ ಸಂಘಟನಾ ಸಂಚಾಲಕ ಕೊಳಗಟ್ಟ ಕೃಷ್ಣ ದೂರು ನೀಡಿದ್ದು, ಲೋಕಾಯುಕ್ತ ಕಚೇರಿಯಿಂದ ಸ್ಥಳ ಪರಿಶೀಲನೆ ನಡೆಸಿ ಸಮಸ್ಯೆ ಬಗೆಹರಿಸಲು ಸೂಚಿಸಿ ತಾಲೂಕು ಪಂಚಾಯಿತಿಗೆ ಪತ್ರ ಬರೆದಿದ್ದು, ಅದರಂತೆ ಇಂದು ಸ್ಥಳ ಪರಿಶೀಲನೆ ನಡೆಸಿ ಅನ್ಯಾಯಕ್ಕೆ ಒಳಗಾಗಿರುವ ಕಾಲೋನಿಯ ಪೌರಕಾರ್ಮಿಕರಿಗೆ ಸಂಪೂರ್ಣ ರಕ್ಷಣೆ ನೀಡಲಾಗುವುದು ಎಂದು ಸಿದ್ದಗಂಗಮ್ಮ ಭರವಸೆ ನೀಡಿದರು.

ಈ ಸಂದರ್ಭದಲ್ಲಿ ದಸಂಸ ಜಿಲ್ಲಾ ಸಂಘಟನಾ ಸಂಚಾಲಕ ಕೊಳಗಟ್ಟ ಕೃಷ್ಣ ಮಾತನಾಡಿದರು. ಪಿಡಿಓ ಸಂತೋಷ್, ತಾಲೂಕು ಪೌರಕಾರ್ಮಿಕರ ಸಂಘದ ಸಂಚಾಲಕ ರಂಗನಾಥ್, ನಿವಾಸಿಗಳಾದ ರಂಗಯ್ಯ, ಈರಂಗಯ್ಯ, ಚಾಮುಂಡಯ್ಯ, ಮಾದ, ಬಿಳಿಕೆರೆ ದಸಂಸ ಸಂಚಾಲಕ ಕೆ.ಚಂದ್ರಶೇಖರ್, ಸೇರಿದಂತೆ ಇನ್ನೂ ಅನೇಕರು ಉಪಸ್ಥಿತರಿದ್ದರು.

ಹೈಕೋರ್ಟ್ ವಿಶೇಷ ನ್ಯಾಯಾಲಯದ ಆದೇಶಕ್ಕೆ ತಲೆಬಾಗಿ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿ

● ಮುಖ್ಯಮಂತ್ರಿ ಸಿದ್ದರಾಮಯ್ಯರಿಗೆ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಆಗ್ರಹ ● ಯಡಿಯೂರಪ್ಪ ವಿಚಾರದಲ್ಲಿ ನೀವೇ ಹೇಳಿದ್ದನ್ನು ಈಗ ಪಾಲಿಸಲು ಮುಂದಾಗಿ



ಬಿ.ವೈ.ವಿಜಯೇಂದ್ರ

ಬೆಂಗಳೂರು, ಸೆ. 25(ಕೆಎಂಶಿ)– ಹೈಕೋರ್ಟ್ ತೀರ್ಪು ಹಾಗೂ ವಿಶೇಷ ನ್ಯಾಯಾಲಯದ ಆದೇಶಕ್ಕೆ ತಲೆಬಾಗಿ ಮುಖ್ಯ ಮಂತ್ರಿ ಸ್ಥಾನಕ್ಕೆ ಸಿದ್ದರಾಮಯ್ಯ ರಾಜೀನಾಮೆ ನೀಡಿ ತನಿಖೆಗೆ ಸಹಕಾರ ನೀಡಬೇಕು ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಒತ್ತಾಯಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಹಿಂದೆ ಮುಖ್ಯಮಂತ್ರಿಗಳಾಗಿದ್ದ ಬಿ.ಎಸ್.ಯಡಿಯೂರಪ್ಪ ಅವರ ಮೇಲೆ ಆರೋಪಗಳು ಬಂದ ಸಂದರ್ಭದಲ್ಲಿ ಸಿದ್ದರಾಮಯ್ಯ ವಿರೋಧ ಪಕ್ಷದ ನಾಯಕರಾಗಿದ್ದರು. ಆಗ, ಅಧಿಕಾರದಲ್ಲಿ ಇದ್ದರೆ ತನಿಖೆ ಮೇಲೆ ಪ್ರಭಾವ ಬೀರುವ ಸಾಧ್ಯತೆಗಳಿರುವ ಕಾರಣ ನ್ಯಾಯಯುತ ಮತ್ತು ನಿಷ್ಪಕ್ಷಪಾತ ತನಿಖೆ ಅಸಾಧ್ಯ. ಆದ್ದರಿಂದ ಯಡಿಯೂರಪ್ಪ ಅಧಿಕಾರದಲ್ಲಿ ಇರಬಾರದು, ಹಿ ಶುಡ್ ರಿಸೈನ್ ಇಮ್ಮೀಡಿಯೆಟ್ಲಿ ಎಂದಿದ್ದರು.

ಆದರೆ, ಈಗ ತನಿಖೆ ಎದುರಿಸಲು ಸಿದ್ಧ, ರಾಜೀನಾಮೆ ಕೊಡುವುದಿಲ್ಲ ಎಂದು ಮುಖ್ಯಮಂತ್ರಿ ಹೇಳುತ್ತಿದ್ದಾರೆ. ಭ್ರಷ್ಟ ಕಾಂಗ್ರೆಸ್ ಮತ್ತು ಭ್ರಷ್ಟ ಮುಖ್ಯಮಂತ್ರಿ ವಿರುದ್ಧ ಬಿಜೆಪಿ ನಿರಂತರ ಹೋರಾಟ ಮಾಡುತ್ತಾ ಬಂದಿದೆ. 'ಮೈಸೂರು ಚಲೋ' ಪಾದಯಾತ್ರೆ ನಡೆಸಿದ್ದೆವು.

ಖಾಸಗಿ ದೂರಿನ ಆಧಾರದ ಮೇಲೆ ರಾಜ್ಯಪಾಲರು ತನಿಖೆಗೆ ಅನುಮತಿ ನೀಡಿದ್ದನ್ನು ರಾಜ್ಯ ಹೈಕೋರ್ಟ್ ಕ್ರಮಬದ್ಧ ಎಂದು ಹೇಳಿದೆ. ಇದೀಗ ವಿಶೇಷ ನ್ಯಾಯಾಲಯವೂ ಮುಡಾ ಹಗರಣದ ತನಿಖೆಗೆ ಸೂಚಿಸಿದ್ದು, ಸಿದ್ದರಾಮಯ್ಯ ವಿರೋಧ ಪಕ್ಷದ ನಾಯಕರಾಗಿದ್ದಾಗ ಹೇಳಿದ ಮಾತನ್ನು ನೆನಪಿಸಿಕೊಳ್ಳಬೇಕು ಎಂದರು. ಮುಖ್ಯಮಂತ್ರಿಗಳ ತವರು ಜಿಲ್ಲೆ ಮೈಸೂರಿನ ಲೋಕಾಯುಕ್ತ ಪೊಲೀಸರಿಂದ ನ್ಯಾಯಯುತ ತನಿಖೆ ಅಸಾಧ್ಯ. ಮುಖ್ಯಮಂತ್ರಿ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿ ಸ್ವತಂತ್ರ ತನಿಖಾ ಸಂಸ್ಥೆ ಸಿಬಿಐ ತನಿಖೆಗೆ ವಹಿಸಿದಾಗ ಸಿದ್ದರಾಮಯ್ಯ ಗೌರವ ಹೆಚ್ಚುತ್ತದೆ.

ಮೈಸೂರಿನ ಸಾಮಾಜಿಕ ಕಾರ್ಯಕರ್ತ ಮತ್ತು ದೂರುದಾರ ಸ್ನೇಹಮಯಿ ಕೃಷ್ಣ ಅವರ ಅರ್ಜಿ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದ ಮುಂದಿತ್ತು. ಕಳೆದ ತಿಂಗಳು ನ್ಯಾಯಾಲಯದಲ್ಲಿ ಸಮಗ್ರ ವಾದ ಮಂಡನೆಯೂ ಆಗಿತ್ತು.

ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜ್ಯಪಾಲರ ಆದೇಶ ಪ್ರಶ್ನಿಸಿ ಹೈಕೋರ್ಟ್ ಮೆಟ್ಟಿಲೇರಿದ್ದರು. ಕೆಳನ್ಯಾಯಾಲಯದಿಂದ ಕಾಯ್ದಿರಿಸಿದ ತೀರ್ಪು ಪ್ರಕಟಿಸದಂತೆ ತಡೆ ಇತ್ತು. ರಾಜ್ಯಪಾಲರ ನಿರ್ಣಯ ಸರಿಯಾಗಿದೆ. ಕ್ರಮಬದ್ಧವಾಗಿದೆ ಎಂದು ಹೈಕೋರ್ಟ್ ಹೇಳಿದೆ. ವಿಶೇಷ ಕೋರ್ಟ್ ತೀರ್ಪು ಪ್ರಕಟಣೆಗೆ ಇದ್ದ ತಡೆಯಾಜ್ಞೆಯನ್ನೂ ಹೈಕೋರ್ಟ್ ತೆರವುಗೊಳಿಸಿತ್ತು. ಇಂದು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯವೂ ಮೈಸೂರಿನ ಮುಡಾ ಹಗರಣದಲ್ಲಿ ಮಹತ್ವದ ಆದೇಶ ಪ್ರಕಟಿಸಿದೆ. ಮುಡಾ ಹಗರಣ ಕೇವಲ 14 ನಿವೇಶನಗಳಿಗೆ ಸೀಮಿತವಲ್ಲ. ಮುಡಾದಲ್ಲಿ 4ರಿಂದ 5 ಸಾವಿರ ಕೋಟಿ ರೂ. ಬೆಲೆಬಾಳುವ ನಿವೇಶನಗಳು ರಿಯಲ್ ಎಸ್ಟೇಟ್, ದಲ್ಲಾಳಿಗಳ ಪಾಲಾಗಿದೆ, ಇವೆಲ್ಲವುಗಳ ಸಮಗ್ರ ತನಿಖೆ ಸಿಬಿಐನಿಂದ ಮಾತ್ರ ಸಾಧ್ಯ ಎಂದರು.

ಆದೇಶದ ಪ್ರತಿ ತಲುಪುತ್ತಿದ್ದಂತೆ ಮೈಸೂರಿನ ಲೋಕಾಯುಕ್ತ ಪೊಲೀಸರು ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಎಫ್ಐಆರ್ ದಾಖಲಿಸಿ ತನಿಖೆ ಪ್ರಾರಂಭಿಸಲಿದೆ ಎಂದು ಹೇಳಿದರು.

ಬಿಜೆಪಿ ಕಾರ್ಯಕರ್ತರ ಮೇಲೆ ದಬ್ಬಾಳಿಕೆ; ಪೊಲೀಸ್ ಠಾಣೆಗೆ ಮುತ್ತಿಗೆ ಹಾಕುವ ಎಚ್ಚರಿಕೆ

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ರಾಜ್ಯ ಕಾಂಗ್ರೆಸ್ ಸರ್ಕಾರದ ವಿರುದ್ಧ ವಾಗ್ದಾಳಿ

ಬೆಂಗಳೂರು, ಸೆ.25(ಕೆಎಂಶಿ)– ರಾಜ್ಯ ಕಾಂಗ್ರೆಸ್ ಸರ್ಕಾರ ಪದೇ ಪದೇ ಬಿಜೆಪಿ ಕಾರ್ಯಕರ್ತರ ಮೇಲೆ ದಬ್ಬಾಳಿಕೆ ನಡೆಸುವುದು ಮುಂದುವರೆದರೆ ಪೊಲೀಸ್ ಠಾಣೆಗೆ ಮುತ್ತಿಗೆ ಹಾಕಲಾಗುವುದು ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಇಂದಿಲ್ಲಿ ಎಚ್ಚರಿಕೆ ನೀಡಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದಲ್ಲಿ ಬಿಜೆಪಿ ಕಾರ್ಯಕರ್ತರ ಮೇಲೆ ಪೊಲೀಸರು ದಬ್ಬಾಳಿಕೆ ಮಾಡುತ್ತಿದ್ದಾರೆ. ವಿನಾಕಾರಣ ಎಫ್ಐಆರ್ ದಾಖಲಿಸಲಾಗುತ್ತಿದೆ. ಆಡಳಿತ ಪಕ್ಷ ಕಾಂಗ್ರೆಸ್ಸನ್ನು ಖುಷಿ ಪಡಿಸಲು ಪೊಲೀಸ್ ಅಧಿಕಾರಿಗಳ ನಡವಳಿಕೆ ಅಕ್ಷಮ್ಯ ಅಪರಾಧ ಎಂದರು.

ತಪ್ಪು ಮಾಡುವ ಅಧಿಕಾರಿಗಳಿಗೆ ತಿಳಿಹೇಳುವ ಕೆಲಸವನ್ನು ಗೃಹ ಸಚಿವರು ಮಾಡಬೇಕು. ನಿನ್ನೆ ನಡೆದಿರುವುದು ಸಣ್ಣ ಘಟನೆಯಲ್ಲ, ವಿನಾಕಾರಣ ಪಕ್ಷದ ಕಾರ್ಯಕರ್ತೆಯನ್ನು ಪೊಲೀಸ್ ಠಾಣೆಯಲ್ಲಿ ಮಧ್ಯರಾತ್ರಿವರೆಗೆ ಕೂರಿಸಿದ್ದು ಅಕ್ಷಮ್ಯ ಅಪರಾಧ, ಜನರಿಗೆ ರಕ್ಷಣೆ ಕೊಡಬೇಕಾದ ಪೊಲೀಸರು ಈ ರೀತಿ ನಡೆದುಕೊಳ್ಳುವುದು ಸರಿಯಲ್ಲ. ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣದಲ್ಲಿ ಬಿಜೆಪಿ ಕಾರ್ಯಕರ್ತೆ ಛಾಯಾ ಅವರು ಪಕ್ಷದ ಸದಸ್ಯತ್ವ ಅಭಿಯಾನ ಮಾಡುತ್ತಿದ್ದ ಸಂದರ್ಭದಲ್ಲಿ ರಾತ್ರಿ ಏಕಾಏಕಿ ಪೊಲೀಸರು ಅವರನ್ನು ಕರೆದುಕೊಂಡು ಹೋಗಿ ಪೊಲೀಸ್ ಠಾಣೆಯಲ್ಲಿ ಕೂರಿಸಿದ್ದಾರೆ.

ಎಫ್ಐಆರ್ ದಾಖಲಿಸುವುದಾಗಿ ಬೆದರಿಕೆ ಹಾಕಿದ್ದಾರೆ. ಬಿಜೆಪಿ ಕಾರ್ಯಕರ್ತರು ಮತ್ತು ಮುಖಂಡರು ಪೊಲೀಸ್ ಠಾಣೆಗೆ ತೆರಳಿ ಮಹಿಳೆ ಬಂಧನಕ್ಕೆ ಕಾರಣ ಕೇಳಿದಾಗ, ಒಟಿಪಿಗಳನ್ನು ಡೌನ್‌ಲೋಡ್ ಮಾಡುತ್ತಿದ್ದಾರೆಂಬ ಆರೋಪ ಹೊರಿಸಿ ಮಹಿಳೆಯನ್ನು ರಾತ್ರಿ 12ರವರೆಗೆ ಪೊಲೀಸ್ ಠಾಣೆಯಲ್ಲಿ ಕೂರಿಸಿ ದಬ್ಬಾಳಿಕೆ ಮಾಡಿದ್ದಾರೆ ಎಂದು ಆಕ್ಷೇಪಿಸಿದರು.

ಮುಡಾ ಹಗರಣವನ್ನು ಪ್ರಾಸಿಕ್ಯೂಷನ್‌ಗೆ ರಾಜ್ಯಪಾಲರ ಅನುಮತಿ ವಿಚಾರದಲ್ಲಿ ಕರ್ನಾಟಕ ಹೈಕೋರ್ಟ್ ತೀರ್ಪನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಗೌರವಿಸಬೇಕು. ಜನರ ಅಭಿಪ್ರಾಯಕ್ಕೆ ಮನ್ನಣೆ ನೀಡಬೇಕು. ಬಡವರಿಗೆ ಮೀಸಲಿಟ್ಟ ನಿವೇಶನಗಳನ್ನು ತಮ್ಮ ಕುಟುಂಬಕ್ಕೆ ಪಡೆದುಕೊಂಡಿದ್ದು, ಇದರಲ್ಲಿ ಅಕ್ರಮ ನಡೆದಿದೆ, ಭಂಡತನ ಬದಿಗಿಟ್ಟು ಗೌರವಯುತವಾಗಿ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಿದರು.

ಮುಡಾ ಹಗರಣದಲ್ಲಿ ಮುಖ್ಯಮಂತ್ರಿಗಳ ಗಮನಕ್ಕೆ ಬಾರದೇ ಇಷ್ಟು ದೊಡ್ಡ ಭ್ರಷ್ಟಾಚಾರ ನಡೆಯಲು ಸಾಧ್ಯ ಇರಲಿಲ್ಲ, ಕಾನೂನಿನ ಪ್ರಕಾರ 4,600 ಚದರಡಿಯ ಒಂದು ನಿವೇಶನ ಸಿಗಬೇಕಿತ್ತು, ಆದರೆ, ಇವರಿಗೆ 56 ಕೋಟಿ ರೂ. ಬೆಲೆ ಬಾಳುವ 14 ನಿವೇಶನಗಳು ಸಿಕ್ಕಿರುವುದು ಕಾನೂನುಬಾಹಿರ, ಇದರ ಸಮಗ್ರ ತನಿಖೆ ಆಗಬೇಕಿದೆ ಎಂಬ ವಿಚಾರವನ್ನು ಹೈಕೋರ್ಟ್ ನಮೂದಿಸಿದೆ. ಹೈಕೋರ್ಟ್ ತೀರ್ಪಿನ ನಂತರ ಮುಖ್ಯಮಂತ್ರಿ ಹೇಳಿಕೆ ಗಮನಿಸಿದ್ದು, ಭಂಡತನದ ಬುದ್ಧಿಯಿಂದ ಹೊರಗೆ ಬರದೆ, ಬಿಜೆಪಿ ಮೇಲೆ ಆರೋಪ ಮಾಡುತ್ತಿದ್ದಾರೆ.

ರಾಜಭವನ ದುರುಪಯೋಗ ಆಗುತ್ತಿದೆ ಎಂಬುದಾಗಿ ಆರೋಪಿಸಿದ್ದು, ಮತ್ತೊಂದೆಡೆ ತಾನೇನೂ ತಪ್ಪು ಮಾಡಿಲ್ಲ, ರಾಜೀನಾಮೆ ಕೊಡುವ ಪ್ರಶ್ನೆ ಉದ್ಭವವಿಸುವುದಿಲ್ಲ ಎಂದು ಮುಖ್ಯಮಂತ್ರಿ ಹೇಳುತ್ತಿರುವುದು ಸರಿಯಲ್ಲ.

ರಾಜ್ಯಪಾಲರ ಕ್ರಮ ಪ್ರಶ್ನಿಸಿದ ಸಿದ್ದರಾಮಯ್ಯ ಅವರ ಅರ್ಜಿಯನ್ನು ರಾಜ್ಯ ಹೈಕೋರ್ಟ್ ವಜಾಗೊಳಿಸಿದೆ. ಹೈಕೋರ್ಟ್ ತೀರ್ಪನ್ನು ರಾಜಕೀಯಪ್ರೇರಿತ ಎಂದು ಬಿಂಬಿಸುವ ಕೆಲಸ ತಾವು ಮಾಡಿದ್ದೀರಿ ಎಂದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಗೋಟ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕೃಷ್ಣಂ ಪ್ರಣಯ ಸಖಿ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಯುದ್ಧ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಲಂಗೋಟಿ ಮ್ಯಾನ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಲಂಗೋಟಿ ಮ್ಯಾನ್ (ಕ)	4 ಪ್ರದರ್ಶನಗಳು
ರಾಜಕಮಲ್	
ಯುದ್ಧ (ಹಿಂ)	4 ಪ್ರದರ್ಶನಗಳು
ಸಂಗಂ	
ಹಗ್ಗ (ಕ)	4 ಪ್ರದರ್ಶನಗಳು
ಲಿಡೋ	
ಉಪೇಂದ್ರ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಗೋಟ್ (ತ)	4 ಪ್ರದರ್ಶನಗಳು
ಪ್ರಭಾ	
ಖೈದಿ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಟ್ರಾನ್ಸ್‌ಫಾರ್ಮರ್ಸ್ ಒನ್ (3ಡಿ) (ಇಂ): ಬೆ.11.20ಕ್ಕೆ, ರಾ.7.40ಕ್ಕೆ, ರಾ.9.55ಕ್ಕೆ, ಹಗ್ಗ (ಕ): ಮ.1.35ಕ್ಕೆ, ದಿ ಗ್ರೇಟೆಸ್ಟ್ ಆಫ್ ಆಲ್ ಟೈಂ (ತ): ಸಂ.4.15ಕ್ಕೆ.
ಸ್ಕ್ರೀನ್ 2	ಲಂಗೋಟಿ ಮ್ಯಾನ್ (ಕ): ಬೆ.10.30ಕ್ಕೆ, ಲಬ್ಬರ್ ಪಾಂಡು (ತ): ಮ.1.40ಕ್ಕೆ, ನಂದನ್ (ತ): ಸಂ.4.35ಕ್ಕೆ, ಕಹಾನ್ ಶುರು ಕಹಾನ್ ಕಥಂ (ಹಿಂ): ರಾ.7.15ಕ್ಕೆ, ತುಂಬ್ಬಾಡ್ (ಹಿಂ): ರಾ.9.55ಕ್ಕೆ.
ಸ್ಕ್ರೀನ್ 3	ಉಪೇಂದ್ರ (ಕ): ಬೆ.10.50ಕ್ಕೆ, ಕರ್ಕಿ ನಾನು ಬಿಎ ಎಲ್‌ಎಲ್‌ಬಿ (ಕ): ಮ.1.35ಕ್ಕೆ, ಅನ್ನ (ಕ): ಸಂ.4.35ಕ್ಕೆ, ಯುದ್ರ (ಹಿಂ): ರಾ.7.15ಕ್ಕೆ, ಕಿಷ್ಕಿಂಧಾ ಖಂಡಂ (ಮ): ರಾ.10.10ಕ್ಕೆ.
ಸ್ಕ್ರೀನ್ 4	ಸ್ತ್ರೀ 2 (ಹಿಂ): ಬೆ.10.05ಕ್ಕೆ, ಇಬ್ಬನಿ ತಬ್ಬಿದ ಇಳೆಯಲಿ (ಕ): ಮ.1ಕ್ಕೆ, ರಾ.7.10ಕ್ಕೆ, ಕೃಷ್ಣಂ ಪ್ರಣಯ ಸಖಿ (ಕ): ಸಂ.4.05ಕ್ಕೆ, ಯುದ್ರ (ಹಿಂ): ರಾ.10.15ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಧ್ರುವತಾರೆ (ಕ): ಮ.1.05ಕ್ಕೆ, ಕರ್ಕಿ ನಾನು ಬಿಎ ಎಲ್‌ಎಲ್‌ಬಿ (ಕ): ಸಂ.4.10ಕ್ಕೆ, ಹಗ್ಗ (ಕ): ರಾ.7.05ಕ್ಕೆ, ದಿ ಗ್ರೇಟೆಸ್ಟ್ ಆಫ್ ಆಲ್ ಟೈಂ (ತ): ರಾ.9.35ಕ್ಕೆ.
ಸ್ಕ್ರೀನ್ 2	ಕೃಷ್ಣಂ ಪ್ರಣಯ ಸಖಿ (ಕ): ಮ.1.10ಕ್ಕೆ, ಲಂಗೋಟಿ ಮ್ಯಾನ್ (ಕ): ಸಂ.4.10ಕ್ಕೆ, ಇಬ್ಬನಿ ತಬ್ಬಿದ ಇಳೆಯಲಿ (ಕ): ರಾ.7.15ಕ್ಕೆ.
ಸ್ಕ್ರೀನ್ 3	ದಿ ಗ್ರೇಟೆಸ್ಟ್ ಆಫ್ ಆಲ್ ಟೈಂ (ತ): ಸಂ.6.15ಕ್ಕೆ, ಕೋಳಿಪಣ್ಣೈ ಚೆಲ್ಲದುರೈ (ತ): ರಾ.9.40ಕ್ಕೆ.
ಸ್ಕ್ರೀನ್ 4	ಇಬ್ಬನಿ ತಬ್ಬಿದ ಇಳೆಯಲಿ (ಕ): ಮ.1.15ಕ್ಕೆ, ರಾ.9.30ಕ್ಕೆ, ನಂದನ್ (ತ): ಸಂ.4.20ಕ್ಕೆ, ಕೃಷ್ಣಂ ಪ್ರಣಯ ಸಖಿ (ಕ): ಸಂ.6.30ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮೈಸೂರು ಲೋಕಾಯುಕ್ತ ಕಚೇರಿಯತ್ತ ರಾಜ್ಯದ ಗಮನ ಲೋಕಾಯುಕ್ತ ತನಿಖೆ ವಿಚಾರದಲ್ಲಿ ತೀವ್ರ ಕುತೂಹಲ

ಮೈಸೂರು, ಸೆ.25(ಬಿಎಲ್‌ಯು)– ಮುಡಾ ಹಗರಣದ ಬಗ್ಗೆ ತನಿಖೆ ನಡೆಸುವಂತೆ ಜನ ಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಲೋಕಾಯುಕ್ತರಿಗೆ ಆದೇಶ ನೀಡಿರುವ ಹಿನ್ನೆಲೆಯಲ್ಲಿ ಇಡೀ ರಾಜ್ಯದ ಗಮನ ಈಗ ಮೈಸೂರು ಲೋಕಾಯುಕ್ತ ಕಚೇರಿಯತ್ತ ನೆಟ್ಟಿದ್ದು, ಲೋಕಾಯುಕ್ತರ ತನಿಖೆಯ ದಾಟಿ ಬಗ್ಗೆ ತೀವ್ರ ಕುತೂಹಲ ಮೂಡಿಸಿದೆ. ಮುಡಾ ಹಗರಣದ ಬಗ್ಗೆ ಸಿಆರ್‌ಪಿಸಿ ಸೆಕ್ಷನ್ 156(3) ಅಡಿ ಪ್ರಕರಣ ದಾಖಲಿಸಿ ಮೂರು ತಿಂಗಳ ಒಳಗೆ, ಅಂದರೆ ಡಿಸೆಂಬರ್ 24 ರೊಳಗೆ ವರದಿ ನೀಡಲು ಜನ ಪ್ರತಿನಿಧಿಗಳ ನ್ಯಾಯಾ ಲಯದ ನ್ಯಾಯಾಧೀಶ ಸಂತೋಷ್ ಗಜಾನನ ಭಟ್ ಆದೇಶ ನೀಡಿದ್ದಾರೆ.

ನ್ಯಾಯಾಲಯದ ಆದೇಶ ಇಂದು ಸಂಜೆ ಇಲ್ಲವೇ ನಾಳೆಯೊಳಗೆ ಲೋಕಾಯುಕ್ತ ಎಡಿಜಿಪಿಗೆ ತಲುಪಲಿದೆ. ತರುವಾಯ ಲೋಕಾಯುಕ್ತ ಎಡಿಜಿಪಿ ತನಿಖೆ ನಡೆಸುವಂತೆ ಮೈಸೂರಿನ ಲೋಕಾಯುಕ್ತ ಎಸ್ಪಿ ಟಿ.ಜೆ.ಉದೇಶ್ ಅವರಿಗೆ ನಿರ್ದೇಶನ ನೀಡಲಿದ್ದಾರೆ. ಈ ಹಿನ್ನೆಲೆ ಸಿದ್ದರಾಮಯ್ಯ ವಿರುದ್ಧ ನಾಳೆಯೊಳಗೆ ಪ್ರಕರಣ ದಾಖಲಾಗಲಿದೆ. ನಂತರ ಲೋಕಾಯುಕ್ತ ಎಸ್ಪಿ ನೇತೃತ್ವದಲ್ಲಿ ತನಿಖೆ ಆರಂಭವಾಗಲಿದೆ. ತನಿಖೆಯ ಸಂದರ್ಭದಲ್ಲಿ ಲೋಕಾಯುಕ್ತರು ಮುಡಾಗೆ ಭೇಟಿ ನೀಡಿ ದಾಖಲಾತಿಗಳನ್ನು ಪರಿಶೀಲನೆ ಮಾಡಲಿದ್ದಾರೆ. ಜೊತೆಗೆ ಕೆಲವು ದಾಖಲಾತಿಗಳನ್ನು ವಶಕ್ಕೆ ಪಡೆಯಲಿದ್ದಾರೆ. ಈಗಾಗಲೇ ದೇಸಾಯಿ ನೇತೃತ್ವದ ಏಕ ಸದಸ್ಯ ಆಯೋಗ ಮುಡಾ ಹಗರಣದ ಬಗ್ಗೆ ತನಿಖೆ ನಡೆಸುತ್ತಿರುವ ಸಂದರ್ಭದಲ್ಲೇ ಈಗ ಲೋಕಾಯುಕ್ತರು ಕೂಡ ಮುಡಾಗೆ ಭೇಟಿ ನೀಡಿ ತನಿಖೆ ನಡೆಸಲಿದ್ದಾರೆ. ಆದರೆ ದೇಸಾಯಿ ಆಯೋಗ ಮುಡಾದಲ್ಲಿ ನಡೆದಿರುವ ಎಲ್ಲಾ ಹಗರಣಗಳ ಬಗ್ಗೆ ತನಿಖೆ ಮಾಡಿದರೆ, ಲೋಕಾಯುಕ್ತರು ಮಾತ್ರ ಸಿದ್ದರಾಮಯ್ಯಗೆ ಆರೋಪಕ್ಕೆ ಸಂಬಂಧಿಸಿದಂತೆ ಮಾತ್ರ ತನಿಖೆ ನಡೆಸಲಿದ್ದಾರೆ. ಈ ಎಲ್ಲಾ ಕಾರಣಗಳಿಂದ ಮೈಸೂರಿನ ಲೋಕಾಯುಕ್ತ ಕಚೇರಿ ಈಗ ರಾಜ್ಯದ ಗಮನ ಸೆಳೆದಿದೆ.

ಎಫ್ಐಆರ್ ಆದ ತಕ್ಷಣ ಸಿಎಂ ರಾಜೀನಾಮೆ ಕೊಡಬೇಕು



ಬೆಂಗಳೂರು, ಸೆ.25– ಎಫ್ಐಆರ್ ಆದ ತಕ್ಷಣ ಸಿಎಂ ರಾಜೀನಾಮೆ ಕೊಡಬೇಕು ಎಂದು ವಿರೋಧ ಪಕ್ಷದ ನಾಯಕ ಆರ್. ಅಶೋಕ್ ಆಗ್ರಹಿಸಿದ್ದಾರೆ.

ಮುಡಾ ಹಗರಣ ಸಂಬಂಧ ಜನಪ್ರತಿನಿಧಿಗಳ ಕೋರ್ಟ್ ತೀರ್ಪಿನ ಬೆನ್ನಲ್ಲೇ ಜಯನಗರದ ಶಾಸಕರ ಕಚೇರಿಯಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ರಾಜ್ಯ ರಾಜಕಾರಣದಲ್ಲಿ ಮಹತ್ತರ ತಿರುವಿನ ದಿನವಾಗಿದೆ. ರಾಜ್ಯದ ಆಡಳಿತ ನಡೆಸುವ ಮುಖ್ಯಮಂತ್ರಿ ಮೇಲೆ ಆಪಾದನೆ ಬಂದು ಹೈಕೋರ್ಟ್ ಆದೇಶ ಆಗಿದೆ. ಜನ ಪ್ರತಿನಿಧಿಗಳ ಕೋರ್ಟ್ ಎಫ್ಐಆರ್ ಆಗಲಿ ಎಂದು ಹೇಳಿದೆ ಎಂದರು. ನಮ್ಮ ಮೇಲೆ ಆಪಾದನೆ ಇಲ್ಲ. ಇದು ಬಿಜೆಪಿ ಪ್ರೇರಿತ ಎಂದು ರಾಜಕೀಯ ದಾಳ ಹೂಡಿದ್ದರು. ರಾಜಭವನ ಅನುಮತಿ ಕೊಟ್ಟ ತಕ್ಷಣ ರಾಜಭವನ ಕಡೆ ಕಾಂಗ್ರೆಸ್ ಅವರು ತಿರುಗಿಬಿಟ್ಟರು. ರಾಜಭವನವನ್ನು ಬಾಂಗ್ಲಾದೇಶದ ಮಾದರಿಯಲ್ಲಿ ಸ್ಫೋಟಿಸುತ್ತೀವಿ ಎಂದು ಕಾಂಗ್ರೆಸ್ ಅವರು ವಿಜೃಂಭಣೆ ಮಾಡಿದ್ದರು. ಈಗ ತನಿಖೆಗೆ ಸೂಕ್ತ ಎಂದು ಆದೇಶ ಆಗಿದೆ ಎಂದು ಹೇಳಿದರು.

ಒರಿಜಿನಲ್ ಕೇಸ್ ಜನಪ್ರತಿನಿಧಿಗಳ ನ್ಯಾಯಾಲಯದಲ್ಲಿ ಇತ್ತು. ಈಗ ಜನಪ್ರತಿನಿಧಿಗಳ ನ್ಯಾಯಾಲಯ ಆದೇಶ ನೀಡಿದೆ. ಗವರ್ನರ್ ಹೇಳಿದ್ದರಲ್ಲಿ ಸತ್ಯಾಂಶ ಕಾಣುತ್ತಿದೆ ಎಂದು ಕೋರ್ಟ್ ಹೇಳಿದೆ. ಸಿದ್ದರಾಮಯ್ಯ ಅವರು ಇನ್ನೂ ಯಾವುದಕ್ಕೆ ಕಾಯುತ್ತಿದ್ದಾರೆ. ಇದು ಬಿಜೆಪಿ ಕೇಸ್ ಹಾಕಿಲ್ಲ. ಕೇಸ್ ಹಾಕಿರುವುದು ಆರ್‌ಟಿಐ ಕಾರ್ಯಕರ್ತರು. ಬಿಜೆಪಿಯದ್ದು ಸೇಡಿನ ರಾಜಕಾರಣ. ಗವರ್ನರ್ ಅವರು ಬಿಜೆಪಿ ಕೇಂದ್ರ ಎಂದಿದ್ದರು. ಈಗ ಎರಡೂ ನ್ಯಾಯಾಲಯ ಹೇಳಿದೆ ಏನು ಹೇಳ್ತೀರಾ ಎಂದು ಪ್ರಶ್ನಿಸಿದರು.

ಕೋರ್ಟ್ ತೀರ್ಪಿನ ನಂತರ ಸಿದ್ದರಾಮಯ್ಯ 'ಮುಡಾಫ್'

ಬೆಂಗಳೂರು, ಸೆ.25(ಬಿಎಲ್ ಯು)– ಜನ ಪ್ರತಿನಿಧಿಗಳ ವಿಶೇಷ ನ್ಯಾಯಾಲಯ ತೀರ್ಪು ಪ್ರಕಟಿಸಿದ ನಂತರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಹಸನ್ಮುಖ ಭಾವ ಮರೆಯಾಗಿತ್ತು.

ಇಂದು ಬೆಳಿಗ್ಗೆ ವಿಧಾನಸೌಧಕ್ಕೆ ಆಗಮಿಸಿದ ಸಿದ್ದರಾಮಯ್ಯ ನಗುತ್ತಲೇ ಮಾಧ್ಯಮಗಳಿಗೆ ಫೋಸ್ ನೀಡಿದರು. ತರುವಾಯ ತಮ್ಮ ಕಚೇರಿಯಲ್ಲೇ ಸುಮಾರು ಒಂದು ಗಂಟೆ ಕಾಲ ಕಾರ್ಯನಿರತರಾಗಿದ್ದ ಸಿದ್ದರಾಮಯ್ಯ, ಜನಪ್ರತಿನಿಧಿಗಳ ನ್ಯಾಯಾಲಯದ ಆದೇಶದ ವಿಚಾರ ತಿಳಿದ ತರುವಾಯ ವಿಧಾನಸೌಧದ ಹೊರಗೆ ಬಂದರು. ಅವರಲ್ಲಿದ್ದ ಹಸನ್ಮುಖ ಭಾವ ಮರೆಯಾಗಿತ್ತು. ನ್ಯಾಯಾಲಯದ ತೀರ್ಪನ್ನು ನಾನು ಪೂರ್ಣವಾಗಿ ಓದಿದ ನಂತರ ಪ್ರತಿಕ್ರಿಯೆ ನೀಡುತ್ತೇನೆ ಎಂದು ಹೇಳಿ ಅಲ್ಲಿಂದ ನಿರ್ಗಮಿಸಿದರು.

ತರುವಾಯ ಕಾವೇರಿ ನಿವಾಸಕ್ಕೆ ತೆರಳಿದ ಸಿದ್ದರಾಮಯ್ಯ ಮುಂದಿನ ಕಾನೂನು ಹೋರಾಟದ ಬಗ್ಗೆ ತಜ್ಞರ ಅಭಿಪ್ರಾಯ ಪಡೆದರು. ಇದಾದ ನಂತರ ಸಂಜೆ ವೇಳೆಗೆ ಬೆಂಗಳೂರಿನಿಂದ ವಿಶೇಷ ವಿಮಾನದಲ್ಲಿ ಕೇರಳಗೆ ತೆರಳಿದರು.

ಸಿದ್ದರಾಮಯ್ಯ ಕೇರಳ ಪ್ರವಾಸ



ಬೆಂಗಳೂರು, ಸೆ.25(ಬಿಎಲ್‌ಯು)– ಮುಡಾ ಪ್ರಕರಣ ಸಂಬಂಧ ಜನ ಪ್ರತಿನಿಧಿಗಳ ವಿಶೇಷ ನ್ಯಾಯಾಲಯ ತನಿಖೆಗೆ ಆದೇಶ ನೀಡಿದ ನಂತರ ಮುಖ್ಯಮಂತ್ರಿ ಸಿದ್ದರಾಮಯ್ಯ ಕೇರಳಕ್ಕೆ ತೆರಳಿದ್ದಾರೆ. ಕೇರಳದ ನೀಲಂಬೂರು ನಗರದಲ್ಲಿ ಆರ್ಯದನ್ ಮೊಹಮ್ಮದ್ ಸಂಸ್ಮರಣಾ ಸಮಿತಿ ಆಯೋಜಿಸಿರುವ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಪಾಲ್ಗೊಳ್ಳಲು ಇಂದು ಸಂಜೆ ಸಿದ್ದರಾಮಯ್ಯ ಕೇರಳಕ್ಕೆ ತೆರಳಿದರು.

ಇಂದು ರಾತ್ರಿ ಅಥವಾ ನಾಳೆ ಬೆಳಿಗ್ಗೆ ಬೆಂಗಳೂರಿಗೆ ಆಗಮಿಸುವ ಸಿದ್ದರಾಮಯ್ಯ, ಮಧ್ಯಾಹ್ನ 12 ಗಂಟೆಗೆ ಸಚಿವ ಸಂಪುಟ ಸಭೆ ನಡೆಸಲಿದ್ದಾರೆ.

ಕಾಂಗ್ರೆಸ್ ರಾಷ್ಟ್ರೀಯ ಪಕ್ಷವಾಗಿದ್ದು, ಹೈಕಮಾಂಡ್ ಸಿದ್ದರಾಮಯ್ಯರಿಂದ ರಾಜೀನಾಮೆ ಪಡೆಯಬೇಕು

ಮಾಜಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಒತ್ತಾಯ



ಹುಬ್ಬಳ್ಳಿ, ಸೆ.25– ಮುಖ್ಯಮಂತ್ರಿ ಸಿದ್ಧರಾಮಯ್ಯ ಈಗಲಾದರೂ ನೈತಿಕ ಹೊಣೆಹೊತ್ತು ರಾಜೀನಾಮೆ ನೀಡಲಿ ಎಂದು ಮಾಜಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಒತ್ತಾಯಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿ, ರಾಜ್ಯಪಾಲರು ಕಾನೂನು ಬದ್ಧವಾಗಿ ಪ್ರಾಸಿಕ್ಯೂಷನ್‌ಗೆ ಆದೇಶ ನೀಡಿದ್ದರು. ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಸೇರಿದಂತೆ ಇಡೀ ಸರ್ಕಾರವೇ ರಾಜ್ಯಪಾಲರ ವಿರುದ್ಧ ಟೀಕೆ ಮಾಡಿತ್ತು. ಸಾಂವಿಧಾನಿಕ ಹುದ್ದೆಗೆ ಅಪಮಾನ ಮಾಡಿದ್ದರು. ಈಗ ರಾಜ್ಯಪಾಲರ ಪರವಾಗಿ ನ್ಯಾಯಾಲಯ ತೀರ್ಪು ನೀಡಿದೆ ಎಂದರು.

ಮುಖ್ಯಮಂತ್ರಿಗಳು ಈಗಲಾದರೂ ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡಿ ತನಿಖೆ ಎದುರಿಸಲಿ. ತನಿಖೆಯಲ್ಲಿ ನಿರಪರಾಧಿ ಎಂದು ತೀರ್ಪು ಬಂದಲ್ಲಿ ಮರಳಿ ಮುಖ್ಯಮಂತ್ರಿಯಾಗಿ ಅಧಿಕಾರ ನಡೆಸಲಿ. ಒಂದು ವೇಳೆ ರಾಜೀನಾಮೆ ನೀಡದೇ ಮುಖ್ಯಮಂತ್ರಿಯಾಗಿ ಮುಂದುವರಿದರೆ ರಾಜ್ಯದ ಜನತೆ ದಂಗೆ ಏಳುತ್ತಾರೆ ಎಂದು ಎಚ್ಚರಿಸಿದರು.

ಕಾಂಗ್ರೆಸ್ ಒಂದು ರಾಷ್ಟ್ರೀಯ ಪಕ್ಷವಾಗಿದ್ದು, ಅಲ್ಲಿನ ಹೈಕಮಾಂಡ್ ಈ ಕೂಡಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ರಾಜೀನಾಮೆ ಪಡೆಯಬೇಕು. ಇಲ್ಲದಿದ್ದರೆ ಒಬ್ಬ ಆರೋಪಿ ಮುಖ್ಯಮಂತ್ರಿಯನ್ನು ಅಧಿಕಾರ ನಡೆಸಲು ಅವಕಾಶ ಮಾಡಿರುವುದನ್ನು ಪ್ರಶ್ನಿಸಿ ಬಿಜೆಪಿಯಿಂದ ರಾಷ್ಟ್ರಾದ್ಯಂತ ಹೋರಾಟ ನಡೆಸಲಾಗುವುದು ಎಂದರು.

ಮಾತೆತ್ತಿದರೆ ಕಾಂಗ್ರೆಸ್ ನಾಯಕರು ನಾವು ಸಂವಿಧಾನದ ರಕ್ಷಕರು ಎನ್ನುತ್ತಾರೆ. ಆದರೆ, ಸಂವಿಧಾನದತ್ತ ರಾಜ್ಯಪಾಲರ ಅಸ್ತಿತ್ವ ಕುರಿತು ಪ್ರಶ್ನೆ ಮಾಡುತ್ತಾರೆ. ಹಿಂದೆ ನಡೆದ ಅರ್ಕಾವತಿ ಹಗರಣದಲ್ಲಿಯೇ ಮುಖ್ಯಮಂತ್ರಿ ಜೈಲಿಗೆ ಹೋಗಬೇಕಿತ್ತು. ಆದರೆ ಇಡೀ ಪ್ರಕರಣ ಮುಚ್ಚಿ ಹಾಕಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಭಂಡತನ ಕಾಂಗ್ರೆಸ್ ಪಕ್ಷಕ್ಕೆ ದೊಡ್ಡ ನಷ್ಟವಾಗಲಿದೆ. ಕಾಂಗ್ರೆಸ್ ಹೈಕಮಾಂಡ್ ಈ ಬಗ್ಗೆ ಗಂಭೀರವಾಗಿ ಪರಿಗಣಿಸಬೇಕು ಎಂದರು.

ಸಿದ್ದರಾಮಯ್ಯ ಸುಪ್ರೀಂಕೋರ್ಟ್‌ಗೆ ಹೋಗುವ ಮೊದಲೇ ದೂರುದಾರರಿಂದ ಕೇವಿಯಟ್ ಅರ್ಜಿ



ಬೆಂಗಳೂರು, ಸೆ.25– ಮುಡಾ ಹಗರಣಕ್ಕೆ ಸಂಬಂಧಿಸಿದಂತೆ ಕರ್ನಾಟಕ ಹೈಕೋರ್ಟ್ ತಮ್ಮ ವಿರುದ್ಧ ನೀಡಿರುವ ತೀರ್ಪಿನ ವಿರುದ್ಧ ಸಿದ್ದರಾಮಯ್ಯನವರು ಸುಪ್ರೀಂಕೋರ್ಟ್‌ಗೆ ಹೋಗುವ ಸಾಧ್ಯತೆಗಳು ದಟ್ಟವಾಗಿವೆ. ಆ ಹಿನ್ನೆಲೆಯಲ್ಲಿ, ಸಿದ್ದರಾಮಯ್ಯನವರ ವಿರುದ್ಧ ದೂರು ನೀಡಿದ್ದ ಪ್ರದೀಪ್ ಕುಮಾರ್ ಅವರು, ಸೆ. 24ರಂದು ಸುಪ್ರೀಂಕೋರ್ಟ್‌ನಲ್ಲಿ ಕೇವಿಯಟ್ ಅರ್ಜಿ ಸಲ್ಲಿಸಿದ್ದಾರೆ.

ಕರ್ನಾಟಕ ಹೈಕೋರ್ಟ್‌ನಲ್ಲಿ ಸೆ. 24 ರಂದು ಸಿದ್ದರಾಮಯ್ಯನವರ ವಿರುದ್ಧ ತೀರ್ಪು ಬಂದಿದೆ. ಆ ತೀರ್ಪನ್ನು ಹೈಕೋರ್ಟ್‌ನ ವಿಭಾಗೀಯ ಪೀಠದಲ್ಲಿ ಅಥವಾ ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಲು ಸಿದ್ದರಾಮಯ್ಯನವರು ಸಿದ್ಧತೆ ನಡೆಸಿದ್ದಾರೆ. ಅದಕ್ಕೂ ಮೊದಲೇ ಕೇವಿಯಟ್ ಅರ್ಜಿ ಸಲ್ಲಿಸಿರುವ ಪ್ರದೀಪ್‌ಕುಮಾರ್, ಈ ಪ್ರಕರಣದಲ್ಲಿ ಸಿದ್ದರಾಮಯ್ಯನವರ ಅರ್ಜಿಯ ವಿಚಾರಣೆ ಮಾಡುವ ಮೊದಲು ತಮ್ಮ ಅಭಿಪ್ರಾಯವನ್ನು ಪಡೆಯ ಬೇಕೆಂದು ಅವರು ನ್ಯಾಯಾಲಯವನ್ನು ಪ್ರಾರ್ಥಿಸಿದ್ದಾರೆ. ಸಿದ್ದರಾಮಯ್ಯನವರ ಕೇಸ್ ಸುಪ್ರೀಂಕೋರ್ಟ್‌ನಲ್ಲಿ ವಿಚಾರಣೆ ನಡೆದು ತಮಗೆ ಗೊತ್ತಿಲ್ಲದಂತೆ, ತೀರ್ಪು ಹೊರಬೀಳುವುದು ಬೇಡ. ಹಾಗಾಗಿ, ಸಿದ್ದರಾಮಯ್ಯನವರು ಮುಡಾ ವಿಚಾರದಲ್ಲಿ ಸುಪ್ರೀಂ ಕೋರ್ಟ್‌ಗೆ ಬಂದರೆ, ಅವರ ಅರ್ಜಿಯ ವಿಚಾರಣೆ ಆರಂಭವಾಗುವುದಕ್ಕೂ ಮುನ್ನ ಸುಪ್ರೀಂಕೋರ್ಟ್‌ಗೆ ಈ ಕೇಸ್ ಬಂದಿರುವುದನ್ನು ತಮ್ಮ ಗಮನಕ್ಕೆ ತರಬೇಕು ಹಾಗೂ ಈ ಪ್ರಕರಣದಲ್ಲಿ ತಾವೂ ಸಹ ದೂರುದಾರರಲ್ಲೊಬ್ಬರಾಗಿರುವುದರಿಂದ ತಮ್ಮ ಅಭಿಪ್ರಾಯವನ್ನು ನ್ಯಾಯಾಲಯದಲ್ಲಿ ದಾಖಲಿಸಿಕೊಂಡು ಸಿದ್ದರಾಮಯ್ಯನವರ ಅರ್ಜಿಯನ್ನು ಪರಿಗಣಿಸಬೇಕು ಎಂದು ಪ್ರದೀಪ್ ಅವರು ಕೇವಿಯಟ್‌ನಲ್ಲಿ ಪ್ರಾರ್ಥಿಸಿದ್ದಾರೆ.

ಹರಿಯಾಣ ಚುನಾವಣೆ ಪ್ರಚಾರದಲ್ಲಿ ಮುಡಾ ಹಗರಣ ಸದ್ದು

ಸಿಎಂ ವಿರುದ್ಧ ಪಿಎಂ ವಾಗ್ದಾಳಿ

ಹರಿಯಾಣ: ಹರಿಯಾಣ ವಿಧಾನ ಸಭಾ ಚುನಾವಣೆಯ ಪ್ರಚಾರದಲ್ಲಿ ಕರ್ನಾಟಕದ ಮುಡಾ ಹಗರಣ ಸದ್ದು ಮಾಡುತ್ತಿದೆ. ಸೋನಿಪತ್‌ನಲ್ಲಿ ಇಂದು ಚುನಾವಣಾ ಪ್ರಚಾರದಲ್ಲಿ ತೊಡಗಿದ್ದ ಪ್ರಧಾನಿ ನರೇಂದ್ರ ಮೋದಿ, ಕರ್ನಾಟಕದ ಮುಡಾ ಹಗರಣವನ್ನು ಉಲ್ಲೇಖಿಸಿ ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದು 2 ವರ್ಷಗಳು ಪೂರ್ತಿ ಆಗಿಲ್ಲ. ಅಲ್ಲಿ ಯಾವ ಪರಿಸ್ಥಿತಿ ಇದೆ ನೋಡಿ ಎಂದು ಕಾಂಗ್ರೆಸ್ ವಿರುದ್ಧ ಪ್ರಧಾನಿ ಟೀಕಾ ಪ್ರಹಾರ ನಡೆಸಿದ್ದಾರೆ.

ಮುಡಾ ಹಗರಣದಲ್ಲಿ ಕರ್ನಾಟಕ ಸಿಎಂ ಸಿದ್ದರಾಮಯ್ಯ ವಿರುದ್ಧ ತನಿಖೆಯಾಗಬೇಕೆಂದು ಹೈಕೋರ್ಟ್ ಆದೇಶ ನೀಡಿದೆ. ಸಿದ್ದರಾಮಯ್ಯ ವಿರುದ್ಧ ತನಿಖೆ ಆಗಲೇಬೇಕು. ಕರ್ನಾಟಕದಲ್ಲಿ ಈ ರೀತಿ ಭ್ರಷ್ಟಾಚಾರ ಮಾಡಿದ ಪಕ್ಷಕ್ಕೆ ಹರಿಯಾಣದಲ್ಲಿ ಅವಕಾಶ ಕೊಡುತ್ತೀರಾ ಎಂದು ಹರಿಯಾಣದ ಜನತೆಯನ್ನು ಪ್ರಧಾನಿ ಮೋದಿ ಪ್ರಶ್ನಿಸಿದ್ದಾರೆ.



ಗ್ಯಾರಂಟಿ ಯೋಜನೆಗಳ ವಿರುದ್ಧವೂ ವ್ಯಂಗ್ಯವಾಡಿರುವ ಪ್ರಧಾನಿ ಮೋದಿ, ಕರ್ನಾಟಕ ಕಾಂಗ್ರೆಸ್ ಕರ್ನಾಟಕದಲ್ಲಿ ಕಾಂಗ್ರೆಸ್ ನಕಲಿ ಯೋಜನೆಗಳನ್ನು ಘೋಷಿಸಿದೆ. ಜನರಿಗೆ ನೀಡಿದ್ದ ಭರವಸೆಗಳನ್ನು ಈಡೇರಿಸಿಲ್ಲ. ಕರ್ನಾಟಕದಲ್ಲಿನ ಕಾಂಗ್ರೆಸ್ ಸರ್ಕಾರ ದಲಿತರ ಹಣ ಲೂಟಿ ಮಾಡಿದೆ ಎಂದು ವಾಲ್ಮೀಕಿ ಹಗರಣವನ್ನು ಉಲ್ಲೇಖಿಸಿ ಮೋದಿ ಟೀಕಾ ಪ್ರಹಾರ ಮಾಡಿದ್ದಾರೆ.

ಭಾರತದ ಸರ್ಕಾರಿ ವ್ಯವಸ್ಥೆಯಲ್ಲಿ ಭ್ರಷ್ಟಾಚಾರಕ್ಕೆ ಜನ್ಮ ನೀಡಿದ ಮತ್ತು ಪೋಷಿಸಿದ ಪಕ್ಷ ಕಾಂಗ್ರೆಸ್ ಆಗಿದೆ. ಕಾಂಗ್ರೆಸ್ ಭ್ರಷ್ಟಾಚಾರದ ತಾಯಿ ಎಂದು ಸೋನಿಪತ್‌ನಲ್ಲಿ ಸಾರ್ವಜನಿಕ ರ್‍ಯಾಲಿಯನ್ನುದ್ದೇಶಿಸಿ ಪ್ರಧಾನಿ ಮೋದಿ ಟೀಕಾ ಪ್ರಹಾರ ನಡೆಸಿದ್ದಾರೆ. ಹರ್ಯಾಣ 'ಫಿರ್ ಏಕ್ ಬಾರ್ ಬಿಜೆಪಿ ಸರ್ಕಾರ್' ಎಂದು ಹೇಳುತ್ತಿದೆ ಎಂದು ಪ್ರಧಾನಿ ಮೋದಿ ಹೇಳಿದ್ದಾರೆ.

ಕೇಂದ್ರ, ರಾಜ್ಯವಾಗಲಿ ಜನೋಪಯೋಗಿ ಹೊಸ ಯೋಜನೆಗಳ ರೂಪಿಸುತ್ತಿಲ್ಲ

ಸಾಮಾಜಿಕ ಚಿಂತಕ ಬಿ.ಶ್ರೀಪಾದ್‌ಭಟ್ ಅಭಿಮತ



'ನಿರುದ್ಯೋಗ– ಹಲವು ಆಯಾಮಗಳು' ವಿಷಯ ಕುರಿತು ಶಿಕ್ಷಣ ತಜ್ಞ ಬಿ.ಶ್ರೀಪಾದ ಭಟ್ ಮಾತನಾಡಿದರು.

ಮೈಸೂರು, ಸೆ.25(ಎಸ್‌ಪಿಎನ್)– ಕಳೆದ ಹತ್ತು ವರ್ಷಗಳಿಂದ ಶಿಕ್ಷಣ, ಆರೋಗ್ಯ, ಪಂಚಾಯತ್ ರಾಜ್ ಮತ್ತು ಗ್ರಾಮೀಣಾಭಿವೃದ್ಧಿ ಇಲಾಖೆ ಸೇರಿದಂತೆ ಪ್ರಮುಖ ಇಲಾಖೆಗಳಲ್ಲಿ ಜನೋಪಯೋಗಿ 'ನೂತನ ಸಾರ್ವಜನಿಕ ನೀತಿ'ಗಳನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ರೂಪಿಸಿಲ್ಲ ಎಂದು ಸಾಮಾಜಿಕ ಚಿಂತಕ, ಶಿಕ್ಷಣ ತಜ್ಞ ಬಿ.ಶ್ರೀಪಾದ ಭಟ್ ಅಭಿಪ್ರಾಯಪಟ್ಟರು.

ಮೈಸೂರು ಜೆಎಲ್‌ಬಿ ರಸ್ತೆಯ ಐಡಿಯಲ್ ಜಾವಾ ರೋಟರಿ ಸಭಾಂಗಣದಲ್ಲಿ ವಿಮಾ ನಿಗಮ ನೌಕರರ ಸಂಘ ಮೈಸೂರು ವಿಭಾಗದ ವತಿಯಿಂದ ಏರ್ಪಡಿಸಿದ್ದ 'ನಿರುದ್ಯೋಗ– ಹಲವು ಆಯಾಮಗಳು' ವಿಷಯ ಕುರಿತು ಮಾತನಾಡಿದರು.

ಪ್ರಸ್ತುತ ಭಾರತದ ಯುವಕರಿಗೆ ತಾವು ಕಲಿತ ಕೌಶಲಕ್ಕೆ ತಕ್ಕ ವೇತನ ಖಾಸಗಿ ವಲಯದಲ್ಲಿ ನಿಗದಿಯಾಗುತ್ತಿಲ್ಲ. ನಿಗದಿಯಾಗಿರುವ ಕನಿಷ್ಠ ಸಂಬಳವನ್ನು ಕೊಡುತ್ತಿಲ್ಲ. ಇದರಿಂದ ಬೇಸತ್ತ ಯುವಕರು, ಕಾರ್ಮಿಕರು ಬದುಕಿನಲ್ಲಿ ಭ್ರಮನಿರಸನ ಹೊಂದುತ್ತಿದ್ದಾರೆ. ಖಾಸಗಿ ವಲಯದಲ್ಲಿ ಕೆಲವೇ ವ್ಯಕ್ತಿಗಳ ಕೈಯ್ಯಲ್ಲಿ ಸಂಪತ್ತು ಕ್ರೋಢೀಕರಣವಾಗುತ್ತಿದೆ. ಅದೇ ಪ್ರಮಾಣ, ವೇಗದಲ್ಲಿ ಅಸಮಾನತೆಯೂ ಹೆಚ್ಚಾಗುತ್ತಿದೆ. ಐಟಿಐ ಶಿಕ್ಷಣ ಮುಗಿಸಿದ ಯುವಕರಿಗೆ ಕೌಶಲಕ್ಕೆ ತಕ್ಕ ವೇತನ ನಿಗದಿಯಾಗುತ್ತಿಲ್ಲ. ಖಾಸಗಿ ಕ್ಷೇತ್ರದ ಸಿಇಓ ಸಂಬಳ ಕೋಟಿಗಟ್ಟಲೇ ಇದ್ದರೆ, ಸಾಮಾನ್ಯ ನೌಕರರ ಸಂಬಳ ಕಡಿಮೆ ಪ್ರಮಾಣದಲ್ಲಿ ನಿಗದಿಯಾಗುತ್ತಿದೆ. ಈ ಅಂಶ ಅಸಮಾನತೆ ಹೆಚ್ಚಳಕ್ಕೆ ಕಾರಣವಾಗಿದೆ ಎಂದರು.

ಇಂದಿರಾಗಾಂಧಿ ಆಡಳಿತಾವಧಿಯಲ್ಲಿ ಖಾಸಗಿ ಬ್ಯಾಂಕ್‌ಗಳನ್ನು ರಾಷ್ಟ್ರೀಕರಣಗೊಳಿಸಿ, ಬಡವರ ಆರ್ಥಿಕ ಸುಧಾರಣೆಗೆ ಆದ್ಯತೆ ನೀಡಿದ್ದರು. ಅದರಂತೆ ದೇವರಾಜ ಅರಸು ಆಡಳಿತಾವಧಿಯಲ್ಲಿ ಭೂಸುಧಾರಣೆ ಕಾನೂನು ತಂದು ಬಡ ಕೃಷಿಕರಿಗೆ ಅನುಕೂಲ ಮಾಡಿಕೊಟ್ಟರು. ಇಂತಹ ಕಾನೂನುಗಳನ್ನು ರೂಪಿಸಲು ಈಗಿನ ಸರ್ಕಾರಗಳು ಮುಂದಾಗುತ್ತಿಲ್ಲ ಏಕೆ ಎಂದು ಪ್ರಶ್ನಿಸಿದರು.

ಕಡ್ಡಾಯ ಶಿಕ್ಷಣ ನೀತಿ, ಆಹಾರ ಭದ್ರತೆ, ಆರ್‌ಟಿಐ ಸೇರಿದಂತೆ ಒಟ್ಟು ನಾಲ್ಕು ಕಾನೂನುಗಳು ಪಬ್ಲಿಕ್ ಪಾಲಿಸಿಗಳು ಜನರಿಗೆ ಹತ್ತಿರವಾಗುತ್ತಿವೆ. ಇದನ್ನು ಬಿಟ್ಟರೆ, ಕೇಂದ್ರ ಸರ್ಕಾರ ಕಳೆದ ಹತ್ತು ವರ್ಷಗಳಿಂದ ಯಾವುದೇ ಪ್ರಮುಖ ಕಾನೂನುಗಳನ್ನು ರೂಪಿಸಿಲ್ಲ. ಶಿಕ್ಷಣ ಕ್ಷೇತ್ರದಲ್ಲಿ ರಾಜ್ಯ ಪಠ್ಯಕ್ರಮ, ರಾಷ್ಟ್ರೀಯ ಪಠ್ಯಕ್ರಮ, ಅಂತರರಾಷ್ಟ್ರೀಯ ಪಠ್ಯಕ್ರಮ, ಆದರ್ಶ ಶಾಲೆ, ಮೊರಾರ್ಜಿ, ಕಿತ್ತೂರು ರಾಣಿ ಚೆನ್ನಮ್ಮ, ಏಕಲವ್ಯ ವಸತಿ ಶಾಲೆಗಳನ್ನು ತೆರೆಯಲಾಗಿದೆ. ಆದರೆ, ಈ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣ ನೀಡಲಾಗುತ್ತಿದೆಯೇ ಇಲ್ಲವೇ ಎಂಬ ಸಮೀಕ್ಷೆ ಯಾರೂ ಮಾಡುತ್ತಿಲ್ಲ ಎಂದು ಅಭಿಪ್ರಾಯಪಟ್ಟರು.

ಕವಿತೆ ಬದುಕು ಬದಲಿಸಿಲ್ಲ: ಇಂದಿನ ಸ್ನಾತಕೋತ್ತರ ಪದವೀಧರ, ಸ್ಲಂನಲ್ಲಿ ಕುಳಿತು ಬಡವರ ನೋವು–ನಲಿವು ಬಿಂಬಿಸುವ ಕವಿತೆ ರೂಪಿಸಿ, ಆ ಕವಿತೆಯನ್ನು ಫೈವ್ ಸ್ಟಾರ್ ಹೋಟೆಲ್‌ನಲ್ಲಿ ವಾಚನ ಮಾಡಿ, ಪ್ರಶಸ್ತಿ ಗಿಟ್ಟಿಸಿಕೊಳ್ಳುತ್ತಾನೆ. ಆದರೆ, ಆ ಕವಿತೆ ಬರೆದ ಜಾಗದಲ್ಲಿರುವವರ ಬಡತನ, ಹಸಿವು ನಿವಾರಣೆಯಾಯಿತೆ ಎಂಬ ಪ್ರಶ್ನೆಗೆ ಯಾರ ಬಳಿಯೂ ಉತ್ತರವಿಲ್ಲ. ಇದು ಸಾಹಿತ್ಯ ಕ್ಷೇತ್ರದ ಪರಿಸ್ಥಿತಿ ಎಂದರು.

ಪದವಿಗೂ ನೌಕರಿಗೂ ಸಂಬಂಧವಿಲ್ಲ: 'ಸಿ' ಮತ್ತು 'ಡಿ' ನೌಕರರಿಗೆ ಸ್ನಾತಕೋತ್ತರ ಪದವಿ ಮುಗಿಸಿದವರೂ ಅರ್ಜಿ ಹಾಕುವ ಪರಿಸ್ಥಿತಿ ಇದೆ. ನಿರುದ್ಯೋಗ ಅಭ್ಯರ್ಥಿ ತಾನು ಓದಿರುವ ಶಿಕ್ಷಣಕ್ಕೂ ತಾನು ಉದ್ಯೋಗ ಬಯಸಿ, ಅರ್ಜಿ ಹಾಕುವುದಕ್ಕೆ ಸಂಬಂಧವೇ ಇರುವುದಿಲ್ಲ. ಈಗಾದರೆ, ಸ್ನಾತಕೋತ್ತರ ಶಿಕ್ಷಣಕ್ಕೆ ಬೆಲೆ ಎಲ್ಲಿದೆ. ಇದರಿಂದ ಈಗಿನ ಪದವೀಧರ ಯುವಕರು ಭವಿಷ್ಯವೇ ಇಲ್ಲದ ಕ್ಷೇತ್ರಗಳಲ್ಲಿ, ನಾಳಿನ ಚಿಂತೆಯೇ ಇಲ್ಲದ ಕ್ಷೇತ್ರಗಳಲ್ಲಿ ಉದ್ಯೋಗ ಮಾಡುತ್ತಿದ್ದಾರೆ. ಆಡಳಿತ ನಡೆಸುತ್ತಿರುವವರಿಗೆ ಗಮನಕ್ಕೆ ಬರುತ್ತಿಲ್ಲವೇ ಪ್ರಶ್ನಿಸಿದರು.

ಪರ್ಯಾಯ ಆರ್ಥಿಕತೆಗೆ ಒತ್ತು: ಮಂಡ್ಯ ಜಿಲ್ಲೆ ಕೆರಗೋಡುವಿನಲ್ಲಿ ಸಾವಿರಾರು ಯುವಕರು ಸೇರಿ ಹನುಮ ಧ್ವಜ ಕಟ್ಟಲು ಹೋರಾಟ ಮಾಡುತ್ತಿದ್ದಾರೆ. ಆದರೆ, ತಮ್ಮ ಮುಂದಿನ ಭವಿಷ್ಯಕ್ಕಾಗಿ ಉದ್ಯೋಗ ದೊರಕಿಸಿಕೊಳ್ಳಲು ಹೋರಾಟಕ್ಕೆ ಮುಂದಾಗುತ್ತಿಲ್ಲ. ಈ ಯುವಕರಿಗೆ ನಾಳಿನ ಭವಿಷ್ಯಕ್ಕಾಗಿ ಅರಿವು ಮೂಡಿಸಿ, ಪ್ರಾದೇಶಿಕವಾರು ಉದ್ಯೋಗ, ಆರ್ಥಿಕತೆ ಪರ್ಯಾಯ ವ್ಯವಸ್ಥೆ ಸೃಷ್ಟಿಗೆ ಇಂದಿನ ಸರ್ಕಾರಗಳು ಮುಂದಾಗಬೇಕು ಎಂದು ಸಲಹೆ ನೀಡಿದರು.

ರೈತರ ಆತ್ಮಹತ್ಯೆ ನಿಂತಿಲ್ಲ: ದೇಶದ ಜಿಡಿಪಿ ಅಭಿವೃದ್ಧಿಗೊಂಡರೂ ರೈತರ ಆತ್ಮಹತ್ಯೆ ತಡೆಯಲು ಆಗುತ್ತಿಲ್ಲ. ಅವರು ಬದುಕು ಹಸನುಗೊಳಿಸಲು ಸರ್ಕಾರ ಯಾವುದೇ ಕಾರ್ಯಕ್ರಮಗಳನ್ನು ರೂಪಿಸುತ್ತಿಲ್ಲ. ದೇಶದ ಆರ್ಥಿಕತೆ ಮುಂದುವರೆದ ದೇಶಗಳ ಸಾಲಿನಲ್ಲಿ ಐದನೇ ಎಕಾನಮಿ ರಾಷ್ಟ್ರವಾಗಿ ಭಾರತ ಹೊರಹೊಮ್ಮಿದರೂ, ಹಸಿವು, ಬಡತನ ಹಾಗೂ ನಿರುದ್ಯೋಗ ಸಮಸ್ಯೆ ನಿವಾರಣೆ ಆಗುತ್ತಿಲ್ಲ ಎಂದು ತಿಳಿಸಿದರು.

ಸರ್ಕಾರಿ ಕಂಪನಿ ವಿಸ್ತರಿಸುತ್ತಿಲ್ಲ: ಕೋಟಿಗಟ್ಟಲೇ ತೆರಿಗೆ ಹಣ ವ್ಯಯಿಸಿ, ರಾಜ್ಯ ಮತ್ತು ಕೇಂದ್ರ ಸರ್ಕಾರ ಬೃಹತ್ ಕೈಗಾರಿಕಾ ಮೇಳ ಆಯೋಜಿಸುತ್ತವೆ. ಈ ಮೇಳದಲ್ಲಿ ಖಾಸಗಿ ಕ್ಷೇತ್ರದಲ್ಲಿ ಬಂಡವಾಳ ತೊಡಗಿಸುವಂತೆ ಮನವಿ ಮಾಡುತ್ತಿದ್ದಾರೆ. ಆದರೆ, ಯಾವುದೇ ಮೇಳದಲ್ಲಿ ಸರ್ಕಾರಿ ಸ್ವಾಮ್ಯದ ಕಂಪನಿಗಳನ್ನು ವಿಸ್ತರಿಸುವಂತೆ (ಉದಾ: ಹೆಚ್‌ಎಎಲ್, ಬಿಎಚ್‌ಇಎಲ್ ಸೇರಿದಂತೆ ಇತರೆ ಕಂಪನಿಗಳು) ಮನಸ್ಥಿತಿ ಬೃಹತ್ ಕೈಗಾರಿಕಾ ಸಚಿವರಲ್ಲಿ ಕಾಣುತ್ತಿಲ್ಲ ಎಂದು ಟೀಕಿಸಿದರು.

ಈ ವೇಳೆ ವಿಮಾ ನೌಕರರ ಒಕ್ಕೂಟ ದಕ್ಷಿಣ ವಲಯದ ಜಂಟಿ ಕಾರ್ಯದರ್ಶಿ ಜೆಸುರೇಶ್, ವಿಮಾ ನಿಗಮ ನೌಕರರ ಸಂಘ ಮೈಸೂರು ವಿಭಾಗದ ಅಧ್ಯಕ್ಷ ಎಸ್.ಕೆ.ರಾಮು, ಪ್ರಧಾನ ಕಾರ್ಯದರ್ಶಿ ಎಸ್.ಎಸ್.ನಾಗೇಶ್ ಉಪಸ್ಥಿತರಿದ್ದರು.

ಉತ್ಪಾದಕರು ಗುಣಮಟ್ಟ ಕಾಯ್ದುಕೊಂಡರೆ ಮಾರುಕಟ್ಟೆಯಲ್ಲಿ ದೀರ್ಘಾವಧಿ ಉಳಿವು ಸಾಧ್ಯ

ಸುಸ್ಥಿರ ಅಭಿವೃದ್ಧಿ ಗುರಿ–9ರ ಕುರಿತ ಸಮಾವೇಶದಲ್ಲಿ ಬಿಐಎಸ್ ಬೆಂಗಳೂರು ಲ್ಯಾಬೋರೇಟರಿ ಮುಖ್ಯಸ್ಥೆ ಟಿ.ನಾಗಮಣಿ ಅಭಿಮತ



ಮೈಸೂರಿನ ಬಿಎನ್ ರಸ್ತೆಯಲ್ಲಿರುವ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಸಮಾವೇಶವನ್ನು ಬಿಐಎಸ್ ಬೆಂಗಳೂರು ಲ್ಯಾಬೋರೇಟರಿ ಮುಖ್ಯಸ್ಥೆ ಟಿ.ನಾಗಮಣಿ ಉದ್ಘಾಟಿಸಿದರು.

ಮೈಸೂರು, ಸೆ.25(ಪಿಎಂ)– ಗ್ರಾಹಕರು ಗುಣಮಟ್ಟದ ಉತ್ಪನ್ನ ಖರೀದಿಸಲು ಬಯಸುತ್ತಾರೆ. ಹಾಗಾಗಿ ಉತ್ಪಾದಕರು ಗುಣಮಟ್ಟ ಕಾಯ್ದುಕೊಂಡರೆ ಮಾರುಕಟ್ಟೆಯಲ್ಲಿ ದೀರ್ಘಾವಧಿಯವರೆಗೆ ಉಳಿದು ಬೆಳೆಯಬಹುದು ಎಂದು ಭಾರತೀಯ ಮಾನಕ ಬ್ಯೂರೋ (ಬಿಐಎಸ್) ಬೆಂಗಳೂರು ಲ್ಯಾಬೋರೇಟರಿ ಮುಖ್ಯಸ್ಥರೂ ಆದ ವಿಜ್ಞಾನಿ ಟಿ.ನಾಗಮಣಿ ಹೇಳಿದರು.


ಮೈಸೂರಿನ ಬಿಎನ್ ರಸ್ತೆಯಲ್ಲಿರುವ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಭಾರತೀಯ ಮಾನಕ ಬ್ಯೂರೋ ಬೆಂಗಳೂರು ಶಾಖಾ ಕಾರ್ಯಾಲಯ ಹಾಗೂ ಕಾಸಿಯಾ (ರಾಜ್ಯ ಸಣ್ಣ ಕೈಗಾರಿಕೆಗಳ ಸಂಘ) ಜಂಟಿ ಆಶ್ರಯದಲ್ಲಿ 'ಉತ್ತಮ ಪ್ರಪಂಚಕ್ಕಾಗಿ ದೂರದೃಷ್ಟಿಯ ಸಿದ್ಧತೆ–ಎಸ್‌ಡಿಜಿ 9 (ಸುಸ್ಥಿರ ಅಭಿವೃದ್ಧಿ ಗುರಿ–9); ಕೃತಕ ಬುದ್ಧಿಮತ್ತೆಯ (ಎಐ) ಮೂಲಕ ಉದ್ಯಮ, ನಾವೀನ್ಯತೆ ಮತ್ತು ಮೂಲಸೌಕರ್ಯವನ್ನು ಸಾಧಿಸುವುದು' ಕುರಿತು ಹಮ್ಮಿಕೊಂಡಿದ್ದ ಸಮಾವೇಶ ಉದ್ಘಾಟಿಸಿ ಮಾತನಾಡಿದರು.

ಸುಸ್ಥಿರ ಅಭಿವೃದ್ಧಿ ಎನ್ನುವುದು ಉತ್ಪನ್ನದ ಗುಣಮಟ್ಟವನ್ನು ಒಳಗೊಂಡಿದೆ. ಯಾವುದೇ ಒಂದು ಸಂಸ್ಥೆ ತನ್ನ ಗ್ರಾಹಕರಿಗಾಗಿ ಉತ್ತಮ ಗುಣಮಟ್ಟವುಳ್ಳಂತಹ ಪದಾರ್ಥಗಳನ್ನು ಉತ್ಪಾದಿಸಬೇಕು. ಆಗ ಮಾತ್ರವೇ ಆ ಸಂಸ್ಥೆ ಮಾರುಕಟ್ಟೆಯಲ್ಲಿ ಉಳಿಯಲು ಸಾಧ್ಯ. ಪ್ರಪಂಚದಲ್ಲಿಯೇ ಭಾರತವು ಅತಿ ಹೆಚ್ಚು ಗ್ರಾಹಕರನ್ನು ಹೊಂದಿದ್ದು, ಇಲ್ಲಿ ಯಾವುದೇ ಸಂಸ್ಥೆ ಅಥವಾ ಕೈಗಾರಿಕೆಯನ್ನು ಪ್ರಾರಂಭಿಸಿದರೂ ಅದು ಪ್ರತ್ಯೇಕ ಗ್ರಾಹಕಾರನ್ನು ಪಡೆದುಕೊಳ್ಳುತ್ತದೆ ಎಂದು ಟಿ.ನಾಗಮಣಿ ತಿಳಿಸಿದರು.

ಹಾಗಾಗಿಯೇ ಇಂದು ವಿದೇಶಿ ಕಂಪನಿಗಳು ಭಾರತದಲ್ಲಿ ಹೂಡಿಕೆ ಮಾಡಲು ಮುಂದೆ ಬರುತ್ತಿವೆ. ಅಷ್ಟು ಮಾತ್ರಕ್ಕೆ ಹೂಡಿಕೆ ಮಾಡಿದ ಎಲ್ಲಾ ಕಂಪನಿಗಳು ಯಶಸ್ವಿಯಾಗಲಾರವು. ಗುಣಮಟ್ಟದ ಉತ್ಪನ್ನಗಳನ್ನು ಗ್ರಾಹಕರಿಗೆ ಒದಗಿಸುವ ಸಂಸ್ಥೆಗಳು ಯಶಸ್ವಿಯಾಗಿ ಲಾಭದಾಯಕವಾಗಿ ಮುನ್ನಡೆಯುತ್ತವೆ. ಜೊತೆಗೆ ಇಂತಹ ಸಂಸ್ಥೆಗಳು ದೇಶದ ಸುಸ್ಥಿರ ಅಭಿವೃದ್ಧಿಗೂ ಮಹತ್ವದ ಕೊಡುಗೆ ನೀಡಲಿವೆ. ಇಂದು ಪ್ರಪಂಚದಾದ್ಯಂತ ಗುಣಮಟ್ಟ ಕಾಯ್ದುಕೊಂಡ ಉತ್ಪನ್ನಗಳು ಅತೀ ಹೆಚ್ಚು ಮಾರಾಟ ಪ್ರಮಾಣವನ್ನು ಹೊಂದಿವೆ ಎಂದರು.

ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕ ಕೆ.ಶಿವಲಿಂಗಯ್ಯ ಮಾತನಾಡಿ, ಹೆಸರೇ ಹೇಳುವಂತೆ ಸುಸ್ಥಿರ ಅಭಿವೃದ್ಧಿ ಎಂದರೆ ಯಾವುದೇ ಪದಾರ್ಥವಾದರೂ ದೀರ್ಘಾವಧಿಯವರೆಗೆ ಬಾಳಿಕೆ ಬರುವುದಾಗಿದೆ. ಇಂದು ಗುಣಮಟ್ಟದ ಉತ್ಪನ್ನಗಳನ್ನು ಉತ್ಪಾದನೆ ಮಾಡುವ ಸಂಸ್ಥೆಗಳು ಮಾತ್ರ ಗ್ರಾಹಕರನ್ನು ತಲುಪುತ್ತವೆ ಹಾಗೂ ಮಾರುಕಟ್ಟೆಯಲ್ಲಿ ಹೆಚ್ಚು ಕಾಲ ಉಳಿಯುತ್ತವೆ. ಪ್ರತಿಯೊಬ್ಬ ಮನುಷ್ಯನಿಗೂ ಆರೋಗ್ಯವೇ ಮುಖ್ಯವಾಗಿದ್ದು, ತಾನು ಸೇವಿಸುವ, ತೊಡುವ ಮತ್ತು ಜೀವಿಸುವ ಸ್ಥಳ ಪ್ರತಿಯೊಂದು ಗುಣಮಟ್ಟದಲ್ಲಿ ಇರಬೇಕೆಂದು ಬಯಸುತ್ತಾನೆ. ಹೀಗಾಗಿ ಸಂಸ್ಥೆಗಳು ಗ್ರಾಹಕರ ಮಿಡಿತವನ್ನು ಅರಿತು ಉತ್ಪನ್ನಗಳನ್ನು ಮಾರುಕಟ್ಟೆಗೆ ನೀಡಬೇಕು ಎಂದು ತಿಳಿಸಿದರು.

ಸಮಾವೇಶದಲ್ಲಿ 2024ನೇ ಸಾಲಿನ ರಾಷ್ಟ್ರೀಯ ಶಿಕ್ಷಣ ಪ್ರಶಸ್ತಿ ಪುರಸ್ಕೃತ ಹೆಚ್.ಎನ್.ಗಿರೀಶ್, ಕಾಸಿಯಾ ಅಧ್ಯಕ್ಷ ಎಂ.ಜಿ.ರಾಜಗೋಪಾಲ್, ಉಪಾಧ್ಯಕ್ಷರಾದ ಬಿ.ಆರ್.ಗಣೇಶ್‌ರಾವ್, ಪ್ರಧಾನ ಕಾರ್ಯದರ್ಶಿ ಸುರೇಶ್ ಎನ್.ಸಾಗರ್, ಜಂಟಿ ಕಾರ್ಯದರ್ಶಿ ಎನ್.ಸತೀಶ್, ಮೊಫ್ಯೂಸ್ಸಿಲ್ ಡೆವ್ಪಟ್ ಕಮಿಟಿ ಅಧ್ಯಕ್ಷ ಸಿ.ಎಂ.ಸುಬ್ರಮಣಿಯನ್ ಸೇರಿದಂತೆ ಮತ್ತಿತರರು ಹಾಜರಿದ್ದರು.



ಪಟ್ಟಣ ಪಂಚಾಯಿತಿ ಕಾರ್ಯಾಲಯ, ಬೋಗಾದಿ
ಮೈಸೂರು ತಾಲ್ಲೂಕು ಮತ್ತು ಜಿಲ್ಲೆ –570026
Web : www.bogaditown.mrc.gov.in
E-Mail : itstaff_ulb_bogadi@yahoo.com
Phone : 0821-2331099 Helpline : 080-23108108
ಪ.ಪಂ/ಬೋಗಾದಿ/ಕಂ.ಶಾಖೆ/ಸಿ.ಆರ್/60/2024–25 ದಿನಾಂಕ: 21.09.2024

ಪ್ರಕಟಣೆ

ಬೋಗಾದಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯ ಬೆಳವಾಡಿ ಗ್ರಾಮ ಪಂಚಾಯಿತಿಯಿಂದ ಹಸ್ತಾಂತರವಾದ ಮಾದಗಳ್ಳಿ ಗ್ರಾಮದ ಸರ್ವೆ ನಂಬರ್ 28,29/1ಎ,1ಬಿ,35/2,32/1,34/1,2, 33/4, 32/2,32/3,29/2 ನಲ್ಲಿ ಕನಕ ಗೃಹ ನಿರ್ಮಾಣ ಸಹಕಾರ ಸಂಘದಿಂದ ನಿರ್ಮಿಸಿರುವ ಒಟ್ಟು 32 ಎಕರೆ22 ಗುಂಟೆ ಬಡಾವಣೆಯು ಜಿಲ್ಲಾಧಿಕಾರಿಯವರ ಕಾರ್ಯಾಲಯದಿಂದ 1997 ರಲ್ಲಿ ಭೂ ಪರಿವರ್ತನೆಯಾಗಿದ್ದು. ನಗರಾಭಿವೃದ್ಧಿ ಪ್ರಾಧಿಕಾರದ ತಾತ್ಕಲಿಕ ನಕ್ಷೆ ಅನುಮೋದನೆ ಪಡೆದು ಅಂತಿಮ ನಕ್ಷೆ ಅನುಮೋದನೆಗೆ ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಪೂರ್ಣವಾಗಿ ಹಣ ಸಂದಾಯ ಮಾಡದೆ ಬೇರೆ ನಕ್ಷೆ ತಯಾರಿಸಿ ಅಂದಿನ ಬೆಳವಾಡಿ ಗ್ರಾಮ ಪಂಚಾಯಿತಿಯಲ್ಲಿ ದಿನಾಂಕ 04.10.2002 ರಂದು ಗ್ರಾಮ ಪಂ.5/2002–03 ರ ಸಾಮಾನ್ಯ ಸಭೆಯ ತೀರ್ಮಾನದಂತೆ ಬೆಳವಾಡಿ ಗ್ರಾಮ ಪಂಚಾಯಿತಿಯಲ್ಲಿ ಖಾತೆಯಾಗಿದ್ದು ಹಲವು ವರ್ಷಗಳ ನಂತರ ದಿನಾಂಕ 09.06.2016 ರಂದು ಅಂದಿನ ಬೆಳವಾಡಿ ಗ್ರಾಮಪಂಚಾಯಿತಿ, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಕರ್ನಾಟಕ ಸರ್ಕಾರದ ಘನವೆತ್ತ ರಾಜ್ಯಪಾಲರ ಪರವಾಗಿ ಪಾರ್ಕ್, ರಸ್ತೆ, ಸಿಎ ನಿವೇಶನಗಳನ್ನು ನೋಂದಾಯಿತ ಪರಿತ್ಯಜನಾ ಪತ್ರದ ಮುಖಾಂತರ ಆಟದಮೈದಾನ/ಉದ್ಯಾನವನ ಮತ್ತು ಬಯಲು ಜಾಗ ಪ್ರದೇಶ(2ಉದ್ಯಾನವನ ಸೇರಿ) ನೊಂದಣಿಮಾಡಿಕೊಟ್ಟಿದ್ದು. ನಂತರ ಕಛೇರಿ ಮೊಹರಿನೊಂದಿಗೆ ಅಧ್ಯಕ್ಷರು ಹಾಗೂ ಕಾರ್ಯದರ್ಶಿಗಳು ಸಹಿಯಿರುವ ನಕ್ಷೆಗಳನ್ನು ತಯಾರಿಸಿಕೊಂಡು ಬಡಾವಣೆಯ ಅದ್ಯಕ್ಷರು ಪಾರ್ಕ್‌ಗಳಲ್ಲಿ ಮತ್ತು ಸಿ.ಎ ನಿವೇಶನದಲ್ಲಿ (ಸಾರ್ವಜನಿಕ ಉದ್ದೇಶಕ್ಕೆ ಮೀಸಲಿಟ್ಟ ಜಾಗದಲ್ಲಿ) ಅಕ್ರಮವಾಗಿ ನಿವೇಶನಗಳನ್ನು ರಚಿಸಿ ಅಂದಿನ ಬೆಳವಾಡಿ ಗ್ರಾಮ ಪಂಚಾಯಿತಿಯಲ್ಲಿ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ಮುಖಾಂತರ 11ಬಿ ದಾಖಲಾತಿಗಳನ್ನು ಮಾಡಿಸಿಕೊಂಡು ನಿವೇಶನಗಳನ್ನು ಹಂಚಿಕೆ ಮಾಡಿರುತ್ತಾರೆ. ಅಕ್ರಮವಾಗಿ ಹಂಚಿಕೆಯಾಗಿರುವ ಈ ಕೆಳಕಂಡ ನಿವೇಶನ ಸಂಖ್ಯೆಗಳಾದ 856/B, 857/2/109, 857/1/427, 861/401/a, 884/1/37, 890/100/a, 890/100/b, 939/47/3, 966/499/a, 966/449/a, 967/450/a, 968/463/a, 969/460/c, 970/450/g, 971/450/h, 972/407/d, 973/407/e, 974/407/f, 975/427/a, 976/450/b, 977/450/d, 978/450/e, 979/450/f, 980/407/b, 981/407/c, 982/407/g, 983/407/h, 984/407/f, 985/407/j, 986/407/k, 988/33/a, 993/476/c, 994/476/d, 995/476/e, 998/476/h, 999/476/l, 1000/476/j, 1001/450/l, 1032/450/n, 1033/407/2, 1034/407/1, 1035/407/3, 1036/407/11, 1037/407/12, 1038/407/13, 1039/407/14, 1040/476/k, 1041/206/a, 1042/420/a, 1043/463/c, 1044/407/4, 1045/407/5, 1046/407/6, 1047/407/7, 1048/407/15, 1049/ 476/m, 1050/407/8, 1051/407/9, 1052/407/10, 1053/450/j, 1054/450/k, 1055/450/l, 1056/450/m, 1057/476/c, 1060/450/u, 1062/450/s, 1063/476/n, 1066/190/2, 1068/450/1, 1069/450/2, 1070/450/3, 1071/450/4, 1073/450/6, 1074/450/7, 1075/450/8, 1076/450/9, 1080/17/a, 1082/450/v, 1083/450/w, 1084/450/y, 1084/450/z, 1086/450/11, 1087/450/19, 1088/450/18, 1089/450/17, 1090/450/20, 1091/ 450/21, 1092/450/16, 1093/450/15, 1094/450/14, 1095/450/12, 1096/407/16, 1097/450/13, ಹಾಗೂ ನಿವೇಶನ ಸಂಖ್ಯೆಯ ಜೊತೆಗೆ ಎ.ಬಿ.ಸಿ.ಡಿ ಹಾಗೂ 1,2,3 ಇತರೆ ಸಬ್ ನಂಬರ್‌ಗಳನ್ನು ಹೊಂದಿರುವ ನಿವೇಶನಗಳನ್ನು ಕರ್ನಾಟಕ ಪುರಸಭೆಗಳ ಅಧಿನಿಯಮ 1964 ಕಲಂ 322, ಮತ್ತು ಸರ್ಕಾರದ ಅಧಿಸೂಚನೆ ಸಂ:ನ ಆಇ 104 ಟಿಎಂಎಸ್ 2014 ದಿನಾಂಕ 09.01.2015 ಹಾಗೂ ಸರ್ಕಾರದ ಅಧಿಸೂಚನೆ ಸಂಖ್ಯೆ ಯುಜಿಡಿಡಿ:ಟಿ/ಟಿಎಂಇ/2016 ದಿನಾಂಕ 17.04.2013 ರನ್ವಯ ಮತ್ತು ಕರ್ನಾಟಕ ಪುರಸಭೆಗಳ ಅಧಿನಿಯಮ 1964 ಕಲಂ 322 ರನ್ವಯ ನಿಯಮಾನುಸಾರ ರದ್ದುಪಡಿಸಲಾಗುತ್ತಿದ್ದು ಮೇಲ್ಕಂಡ ನಿವೇಶನಗಳ ಮಾಲೀಕರು ಪತ್ರಿಕಾ ಪ್ರಕಟಣೆ ಹೊರಡಿಸಿದ 7 ದಿನಗಳ ಒಳಗಾಗಿ ಸದರಿ ಬಡವಣೆಯ ನಕ್ಷೆ ಹಾಗೂ ನಿಮ್ಮ ನಿವೇಶನಕ್ಕೆ ಸಂಬಂದಿಸಿದ ಪೂರ್ಣ ಪ್ರಮಾಣದ ಮೂಲ ದಾಖಲಾತಿಗಳೊಂದಿಗೆ ಲಿಖಿತ ಸಮಜಾಯಿಷಿಯನ್ನು ಪಟ್ಟಣ ಪಂಚಾಯಿತಿ ಕಚೇರಿಗೆ ಸಲ್ಲಿಸುವುದು ತಪ್ಪಿದಲ್ಲಿ ನಿಯಮಾನುಸಾರ ರದ್ದುಪಡಿಸಲಾಗುವುದು ಎಂದು ತಿಳಿಯಪಡಿಸಿದೆ.

ಸಹಿ/– ಮುಖ್ಯಾಧಿಕಾರಿ, ಪಟ್ಟಣ ಪಂಚಾಯಿತಿ, ಬೋಗಾದಿ.

DIPR/DDMYS-603/KSMCA-408/2024-25